UNIVERSAL LIBRARY
OU_198079
UNIVERSAL LIBRARY

*Department of Public Instruction, Mysore.*

# A
# BRIEF HISTORY OF MYSORE
IN
# KANNADA

# ಮೈಸೂರು ಸಂಸ್ಥಾನದ ಚರಿತ್ರಸಾರ.

BY

RAO BAHADUR M. SHAMA RAO, M.A.,
*Retired Inspector-General of Education in Mysore.*

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಇನ್ಸ್ಪೆಕ್ಟರ್
ಜನರಲ್ ರಾವ್ ಬಹದ್ದೂರ್ ಎಂ. ಶಾಮರಾಯರು, ಎಂ.ಎ.,
ಯವರಿಂದ ರಚಿಸಲ್ಪಟ್ಟುದು.

SIXTH EDITION 30,000 COPIES

BANGALORE.
PRINTED AT THE GOVERNMENT PRESS
1923

PRICE [illegible] ANNA

CONTENTS.

# ವಿಷಯಸೂಚಿಕೆ.

## ಒಂದನೆಯ ಭಾಗ.


| ಪ್ರಕರಣ. | | ಪುಟಸಂಖ್ಯೆ. |
|---|---|---|
| ೧. | ಜೈನರು, ಬೌದ್ಧರು | ೧ |
| ೨. | ಕದಂಬರು, ಪಲ್ಲವರು, ಗಂಗರಸರು | ೨ |
| ೩. | ಹೊಯಿಸಳರು, ರಾಮಾನುಜಾಚಾರ್ಯರು | ೩ |
| ೪. | ವಿಜಯನಗರದ ಅರಸುಗಳು ತಾಳೀಕೋಟೆಯುದ್ಧ | ೮ |
| ೫. | ರಾಜ್ಯಕ್ರಮ | ೧೧ |


## ಎರಡನೆಯ ಭಾಗ.

### ಯಾದವಕುಲದ ಅರಸರು


| | | |
|---|---|---|
| ೧. | ಯದುರಾಯರು, ರಾಜ ಒಡೆಯರು | ೧೪ |
| ೨. | ರಾಜ ಒಡೆಯರು, ಚಾಮರಾಜ ಒಡೆಯರು | ೧೬ |
| ೩. | ಇಮ್ಮಡಿ ರಾಜ ಒಡೆಯರು, ಕಂಠೀರವ ನರಸರಾಜ ಒಡೆಯರು, ದೊಡ್ಡ ದೇವರಾಜ ಒಡೆಯರು | ೧೭ |
| ೪. | ಚಿಕ್ಕದೇವರಾಜ ಒಡೆಯರು | ೨೦ |
| ೫. | ದೇವರಾಜಯ್ಯ, ನಂಜರಾಜಯ್ಯನವರು | ೨೩ |
| ೬. | ನಂಜರಾಜಯ್ಯ. ಹೈದರನ ಏಳಿಗೆ | ೨೭ |


## ಮೂರನೆಯ ಭಾಗ.

### ಮುಸಲ್ಮಾನರ ಆಧಿಪತ್ಯ


| | | |
|---|---|---|
| ೧. | ಸೀರ್ಯ ಮತ್ತು ಬಿದನೂರು ಹೈದರನಿಗೆ ಸೇರಿದುದು | ೩೨ |
| ೨. | ಮರಾಟೆಯವರೊಡನೆ ಮತ್ತು ಇಂಗ್ಲಿಷರೊಡನೆ ಯುದ್ಧ | ೩೪ |

| ಪ್ರಕರಣ. | | ಪುಟಸಂಖ್ಯೆ. |
|---|---|---|
| ೩. | ಮರಾಟಿಯವರೊಡನೆ ಸ್ನೇಹ .... .... | ೩೭ |
| ೪. | ಚಿತ್ರದುರ್ಗ ಮುಂತಾದ ಸ್ಥಳಗಳು ಸೇರಿದುದು, ಚಾಮರಾಜ ಒಡೆಯರು ದತ್ತರಾದುದು. .... .... | ೩೯ |
| ೫. | ಇಂಗ್ಲಿಷರೊಡನೆ ಯುದ್ಧ, ಹೈದರನ ಮರಣ .... | ೪೨ |
| ೬. | ಹೈದರನ ಗುಣದೋಷಗಳು .... .... | ೪೪ |
| ೭. | ಇಂಗ್ಲಿಷರೊಡನೆಯೂ, ಮರಾಟಿಯವರೊಡನೆಯೂ ಸಮಾಧಾನ | ೪೭ |
| ೮. | ಇಂಗ್ಲಿಷರೊಡನೆ ಮೂರನೆಯ ಯುದ್ಧ .... | ೪೯ |
| ೯. | ಶ್ರೀರಂಗಪಟ್ಟಣ ಇಂಗ್ಲಿಷರ ಕೈ ಸೇರಿದುದು .... | ೫೨ |
| ೧೧. | ಟೀಪುವಿನ ರಾಜ್ಯಕ್ರಮವೇ ಮೊದಲಾದುದು .... | |


---

## ನಾಲ್ಕನೆಯ ಭಾಗ.


| | | |
|---|---|---|
| ೧. | ಹಿಂದೂ ರಾಜ್ಯವು ಪುನಃ ಸ್ಥಾಪಿತವಾದುದು. ... | ೩೯ |
| ೨ | ಪೂರ್ಣಯ್ಯನವರ ಮಂತ್ರಿತ್ವ .... .... | ೬೨ |
| ೩. | ಕೃಷ್ಣರಾಜ ಒಡೆಯರು .... .... | ೬೫ |
| ೪ | ಇಂಗ್ಲಿಷರ ಆಳಿಕೆ .... .... ... | ೬೮ |
| ೫. | ಇಂಗ್ಲಿಷರು ರಾಜ್ಯವನ್ನು ಹಿಂದಕ್ಕೆ ಕೊಟ್ಟುದು .... | ೭೧ |
| ೬. | ಚಾಮರಾಜ ಒಡೆಯರು .... .... | ೭೩ |

# ಮೈಸೂರು ಸಂಸ್ಥಾನದ ಚರಿತ್ರಸಾರ.

## ೧ನೆಯ ಪ್ರಕರಣ.

---

### ಜೈನರು–ಬೌದ್ಧರು.

ಮೈಸೂರಲ್ಲಿ ನಡೆವ ನವರಾತ್ರಿಯ ಉತ್ಸವದಲ್ಲಿ ನಮ್ಮ ಮಹಾರಾಜರು ಶ್ರೀ ಕೃಷ್ಣರಾಜ ಒಡೆಯರವರು ಸಿಂಹಾಸನದ ಮೇಲೆ ಕುಳಿತುಕೊಳ್ಳುವುದನ್ನು ಕೇಳಿ ಬಲ್ಲಿರಷ್ಟೆ. ಇವರಿಗೆ ೧೮೯೫ ನೆಯ ಇಸವಿಯಲ್ಲಿ ಪಟ್ಟಾಭಿಷೇಕವಾಯಿತು. ಇವರ ವಂಶಕ್ಕೆ ಯಾದವ ವಂಶವೆಂದು ಹೆಸರು. ಯದುರಾಯರೆಂಬವರು ಇವರ ಮೂಲಪುರುಷರು. ಈ ಯದುರಾಯರು ದ್ವಾರಕಾಪಟ್ಟಣದಿಂದ ಬಂದು, ನಂಜನಗೂಡಿನ ಬಳಿ ಇರುವ ಹದಿನಾಡೆಂಬ ಗ್ರಾಮದಲ್ಲಿ ಸುಮಾರು ಕ್ರಿಸ್ತಶಕ ೧೩೯೯ ನೆಯ ಇಸವಿಯಲ್ಲಿ ರಾಜ್ಯವನ್ನು ಪಡೆದರು, ಇವರಿಗೆ ಮುಂಚೆ ಕದಂಬ, ಪಲ್ಲವ, ಗಂಗ, ಚಾಲೂಕ್ಯ, ಬಲ್ಲಾಳ, ವಿಜಯನಗರ, ಮುಂತಾದ ವಂಶಗಳ ಅರಸುಗಳು ಈ ದೇಶದ ಕೆಲಕೆಲವು ಭಾಗಗಳನ್ನು ಆಳುತ್ತಿದ್ದರು. ಯದುರಾಯರ ಅನಂತರ ಅವರ ಸಂತತಿಯವರು ಅನೇಕ ದೇಶಗಳನ್ನು ಜಯಿಸಿ ರಾಜ್ಯವನ್ನು ವಿಸ್ತರಿಸಿದರು. ಬಳಿಕ ೧೮ ನೆಯ ಶತಮಾನದಲ್ಲಿ ದಪಲತ್ತು ಪ್ರಸಿದ್ಧನಾದ ಹೈದರಲ್ಲಿಯ ಕೈಸೇರಿತು. ೧೭೯೯ ನೆಯ ಇಸವಿಯಲ್ಲಿ ಇಂಗ್ಲಿಷರು ಹೈದರನ ಮಗನಾದ ಟೀಪು ಸುಲ್ತಾನನನ್ನು ಕೊಂದು ಯದುರಾಯರ ಸಂತತಿಯವರಾದ ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಈಗಿರುವಂತೆ ದೇಶವನ್ನು ವಿಂಗಡಿಸಿಕೊಟ್ಟು ಪಟ್ಟಾಭಿಷೇಕಮಾಡಿದರು. ಅನಂತರ ರಾಜ್ಯದಲ್ಲಿ ಕೆಲವು ಅಕ್ರಮಗಳು ಉಂಟಾದುವು. ಆದುದರಿಂದ ೧೮೩೧ ನೆಯ ಇಸವಿ ಮೊದಲ್ಗೊಂಡು ಇಂಗ್ಲಿಷರು ಈ ದೇಶವನ್ನು ೫೦ ವರ್ಷಕಾಲ ತಮ್ಮ ವಿಚಾರಣೆಯಲ್ಲಿಯೇ ಇಟ್ಟುಕೊಂಡರು. ಆ ತರುವಾಯ, ೧೮೮೧ ನೆಯ ಇಸವಿಯಲ್ಲಿ ಕೃಷ್ಣರಾಜ ಒಡೆಯರ ದತ್ತು ಮಕ್ಕಳಾದ ಚಾಮರಾಜ ಒಡೆಯರವರಿಗೆ ರಾಜ್ಯವನ್ನು ಕೊಟ್ಟರು. ಇವರು ೧೮೯೪ ನೆಯ ಇಸವಿಯಲ್ಲಿ ಕಾಲವಾದರು. ಬಳಿಕ

ಇವರ ಮಕ್ಕಳಾದ ಶ್ರೀ ಕೃಷ್ಣರಾಜ ಒಡೆಯರವರಿಗೆ ಪಟ್ಟಾಭಿಷೇಕವಾಯಿತು ಆಗ ಇವರಿಗೆ ಇನ್ನೂ ಬಾಲ್ಯವಾಗಿದ್ದುದರಿಂದ ಇವರ ಮಹಾ ಮಾತೃಶ್ರೀಯವರಾದ ವಾಣೀವಿಲಾಸ ಸನ್ನಿಧಾನದ ಮಹಾರಾಣಿಯವರು ರಾಜ್ಯದ ಆಡಳಿತಗಳನ್ನು ನೋಡುತ್ತಿದ್ದರು. ಈಗ ಪ್ರಬುದ್ಧರಾಗಿರುವ ಶ್ರೀ ಕೃಷ್ಣರಾಜ ಒಡೆಯರವರು ದಿವಾನರವರು ಮತ್ತು ಕೌನ್ಸಿಲರ್‌ಗಳವರ ಸಹಾಯದಿಂದ ತಾವೇ ರಾಜ್ಯವನ್ನು ಪರಿಪಾಲಿಸುತ್ತಿದಾರೆ.

೨. ಹೀಗೆ ಆಳಿದ ಅರಸುಗಳ ಚರಿತ್ರೆಯನ್ನು ಪೂರ್ಣವಾಗಿ ಬರೆದಿಡುವುದಕ್ಕೆ ಬೇಕಾದಷ್ಟು ಸಾಧನಗಳು ದೊರೆವುದಿಲ್ಲ. ಹಿಂದಿನಿಂದ ಇದುವರೆಗೂ ಕ್ರಮವಾಗಿ ಬರೆದಿರುವ ಚರಿತ್ರೆಗಳು ಯಾವುವೂ ಇಲ್ಲ. ಆದರೆ ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳಿಂದ ಕೆಲ ಕೆಲವು ಬರೆವಣಿಗೆಗಳನ್ನು ಬರೆದಿಟ್ಟಿದ್ದಾರೆ. ಅಲ್ಲಲ್ಲಿ ಸಿಕ್ಕಿರುವ ಶಾಸನಗಳಲ್ಲಿ ಕೆಲ ಸಂಗತಿಗಳು ಗೊತ್ತಾಗುತ್ತವೆ. ನಮಗೆ ದೊರೆತಿರುವ ಹಳೆಯ ನಾಣ್ಯಗಳಿಂದಲೂ ಕೆಲವು ವಿಷಯಗಳು ಹೊರಪಡುತ್ತವೆ. ಇವೆಲ್ಲರಿಂದಲೂ ಹಿಂದಣ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು.

೩. ಆರ್ಯರು ಇಲ್ಲಿಗೆ ಮೊದಲು ಬಂದಾಗ ದಕ್ಷಿಣದೇಶವು ಈಗಿರುವಂತೆ ಇರಲಿಲ್ಲ. ಆಗ ವಿಂಧ್ಯ ಪರ್ವತದಿಂದ ಕನ್ಯಾಕುಮಾರಿಯವರೆಗೂ ದಂಡಕಾರಣ್ಯವೆಂಬ ದೊಡ್ಡದಾದ ಅಡವಿ ಇದ್ದಿತು. ಈ ಅಡವಿಯಲ್ಲಿ ಆರ್ಯಕುಲದ ಋಷಿಗಳು ಅಲ್ಲಲ್ಲಿ ಆಶ್ರಮಗಳನ್ನು ಕಟ್ಟಿಕೊಂಡು ತಪಸ್ಸು ಮಾಡುತ್ತಿದ್ದರು. ಅವರ ತಪಸ್ಸಿಗೆ ಇಲ್ಲಿಯ ಕಾಡುಜನರು ಅಡ್ಡಮಾಡುತ್ತಿದ್ದರು. ಆದುದರಿಂದ ಆ ಋಷಿಗಳ ಸಂರಕ್ಷಣೆಗೋಸ್ಕರ ಆರ್ಯಕುಲದ ಕ್ಷತ್ರಿಯರು ಈಕಡೆಗೆ ಬರುವುದಕ್ಕೆ ಮೊದಲುಮಾಡಿದರು. ಆರ್ಯಕುಲದ ಋಷಿಗಳಲ್ಲಿ ವಿಂಧ್ಯಪರ್ವತವನ್ನು ಮೊದಲು ದಾಟಿ ಬಂದವರು ಅಗಸ್ತ್ಯಋಷಿಗಳೆಂದು ಹೇಳುತ್ತಾರೆ.

೪. ಶ್ರೀರಾಮನು ಲಂಕೆಗೆ ಹೋಗುವಾಗ ಮೈಸೂರು ಸೀಮೆಯಲ್ಲಿ ಅನೇಕ ಸ್ಥಳಗಳನ್ನು ದಾಟಿಕೊಂಡು ಹೋದನೆಂದು ಈಗಲೂ ತೋರಿಸುತ್ತಾರೆ. ಆದರೆ ಆ ಸ್ಥಳಗಳಿಗೆಲ್ಲ ಆತನು ನಿಜವಾಗಿಯೂ ಬಂದಿದ್ದನೆಂದು ಹೇಳುವುದಕ್ಕಾಗುವುದಿಲ್ಲ. ರಾಮನ ಕಾಲದಲ್ಲಿ ವಾನರರು, ರಾಕ್ಷಸರು, ಎಂಬ ಹೆಸರಿನ ಜನಗಳು ದಕ್ಷಿಣದೇಶದಲ್ಲಿ ವಾಸವಾಗಿದ್ದರು. ವಾನರರು ಕಾಡುಜನಗಳು ; ಅವರು ಗುಡ್ಡಗಳಲ್ಲಿಯೂ ಗವಿಗಳಲ್ಲಿಯೂ ವಾಸವಾಗಿರುತ್ತಿದರು. ಅವರಿಗೆ ಹಣ್ಣು ಹಂಪಲುಗಳೇ ಆಹಾರ. ಕಲ್ಲು ಮರಗಳೇ ಆಯುಧಗಳು. ರಾಕ್ಷಸರು ಲಂಕಾದ್ವೀಪದಲ್ಲಿದ್ದರು. ಅವರು ಜನಸ್ಥಾನದ ವರೆಗೂ—ಎಂದರೆ ಈಗಿನ ನಾಸಿಕ ಪಟ್ಟಣದವರೆಗೂ—ಸಂಚಾರ ಮಾಡುತ್ತಿದ್ದರು. ರಾಕ್ಷಸರು ವಾನರರಿಗಿಂತಲೂ ಬಲಿಷ್ಠರು ಇವರು ಮನೆಗಳನ್ನು ಕಟ್ಟಿಕೊಂಡು ಗ್ರಾಮಗಳಲ್ಲಿ ವಾಸಮಾಡುತ್ತಿದ್ದರು. ಇವರಿಗೆ

ರಥಗಳನ್ನು ನಡಿಸುವುದಕ್ಕೂ, ಬಿಲ್ಲು ಬಾಣಗಳಿಂದ ಯುದ್ಧಮಾಡುವುದಕ್ಕೂ ಬರುತ್ತಿದ್ದಿತು. ಇವರು ಅತಿ ಕ್ರೂರರಾಗಿ ನರಮಾಂಸವನ್ನು ತಿನ್ನುತ್ತ, ಋಷಿಗಳನ್ನೂ ವಾನರರನ್ನೂ ಪೀಡಿಸುತ್ತಿದ್ದರು.

೫. ಕ್ರಿಸ್ತಶಕಕ್ಕೆ ಪೂರ್ವ ೩ನೆಯ ಶತಮಾನದಲ್ಲಿ, ಉತ್ತರದೇಶದಲ್ಲಿ ಬಲವಾದ ಕ್ಷಾಮ ಬಂದಿತು. ಆಗ ಭದ್ರಬಾಹು ಎಂಬ ಒಬ್ಬ ಜೈನಸನ್ಯಾಸಿಯು ಉಜ್ಜಯಿನೀ ಪ್ರಾಂತದಿಂದ ಹೊರಟು ತನ್ನ ಶಿಷ್ಯರೊಡನೆ ಶ್ರವಣಬೆಳ್ಗೊಳದ ಬಳಿಗೆ ಬಂದನೆಂದು ಶಾಸನದ ಕಲ್ಲುಗಳಿಂದ ಗೊತ್ತಾಗುತ್ತದೆ. ಹೀಗೆ ಬಂದ ಶಿಷ್ಯರಲ್ಲಿ ಮೌರ್ಯಕುಲದ ಅರಸನಾದ ಚಂದ್ರಗುಪ್ತನು ಸೇರಿದ್ದನೆಂದು ಹೇಳುತ್ತಾರೆ. ಶ್ರವಣಬೆಳ್ಗೊಳದಲ್ಲಿರುವ ಒಂದು ಬೆಟ್ಟಕ್ಕೆ ಚಂದ್ರಗಿರಿಯೆಂದೂ, ಅದರಮೇಲಿರುವ ಬಸದಿಗೆ ಚಂದ್ರಗುಪ್ತನ ಬಸದಿಯೆಂದೂ ಈಗಲೂ ಹೆಸರಿವೆ. ಚಂದ್ರಗುಪ್ತನ ಮೊಮ್ಮಗನಾದ ಅಶೋಕನ ಆಳಿಕೆಗೆ ಈ ದೇಶದ ಉತ್ತರ ಭಾಗವು ಸೇರಿದ್ದಿತು. ಈತನು ಬೌದ್ಧಮತವನ್ನು ಪ್ರಚುರಪಡಿಸಿ, ಜನರಿಗೆ ಅನೇಕ ವಿಧಗಳಲ್ಲಿ ಸೌಖ್ಯವನ್ನುಂಟುಮಾಡಿ ಖ್ಯಾತಿಯನ್ನು ಪಡೆದನು. ಪ್ರಾಣಿಹಿಂಸೆಯನ್ನು ಬಹಳ ಮಟ್ಟಿಗೆ ನಿಲ್ಲಿಸಿದನು. ಅಲ್ಲಲ್ಲಿ ಬಾವಿಗಳನ್ನು ತೋಡಿಸಿ ದಾರಿಗಳ ಎರಡು ಕಡೆಯಲ್ಲಿಯೂ ಸಾಲುಗಿಡಗಳನ್ನು ನೆಡಿಸಿದನು. ಇದಲ್ಲದೆ ಪ್ರಜೆಗಳಿಗೆ ಬಂದ ರೋಗಗಳನ್ನು ವಾಸಿಮಾಡುವುದಕ್ಕೋಸ್ಕರ ವೈದ್ಯರನ್ನು ನೇಮಿಸಿದನು.

೬ ಅಶೋಕನ ಆಳಿಕೆ ಮುಗಿದ ಕೆಲವು ಶತಮಾನಗಳ ಅನಂತರ ಜಿನದತ್ತರಾಯನೆಂಬವನು ಉತ್ತರ ದೇಶದಿಂದ ಬಂದು ಹೊಂಬುಚವೆಂಬ ಸ್ಥಳದಲ್ಲಿ ರಾಜ್ಯಸ್ಥಾಪನೆ ಮಾಡಿದನು. ಈತನ ಸಂತತಿಯವರು ಕ್ರಿಸ್ತಶಕ ೧೨ನೆಯ ಶತಮಾನದವರೆಗೂ ಆಳುತ್ತಿದ್ದರೆಂದು ತಿಳಿಯಬರುತ್ತದೆ. ಹೊಂಬುಚದಲ್ಲಿ ಈಗಲೂ ಒಂದು ಜೈನಮಠವೂ ಕೆಲವು ಜೈನಬಸದಿಗಳೂ ಇವೆ. ಮುಂದೆ ಹೊಯಿಸಳಕುಲದ ವಿಷ್ಣುವರ್ಧನನ ಕಾಲದಲ್ಲಿ ಜೈನರ ಪ್ರಾಬಲ್ಯವು ಕಡಿಮೆಯಾಯಿತು.

೭. ಕ್ರಿಸ್ತಶಕ ೩ನೆಯ ಶತಮಾನದಲ್ಲಿ ಶಕವಾಹನ ಮತ್ತು ಶಾಲಿವಾಹನ ಕುಲದ ಅರಸುಗಳು ಈ ದೇಶದ ಕೆಲವು ಭಾಗಗಳನ್ನು ಆಳುತ್ತಿದ್ದರೆಂದು ಕಾಣುತ್ತದೆ. ದಕ್ಷಿಣ ದೇಶದಲ್ಲಿ ಈಗ ರೂಢಿಯಲ್ಲಿರುವ ಶಾಲಿವಾಹನಶಕವು ಈ ಕುಲದ ದೊರೆಗಳ ಕಾಲದಲ್ಲಿ ಕ್ರಿಸ್ತಶಕ ೭೮ನೆಯ ಇಸವಿಯಿಂದ ಆಚರಣೆಗೆ ಬಂದಿತು.

---

## ೨ನೆಯ ಪ್ರಕರಣ.

### ಕದಂಬರು, ಪಲ್ಲವರು, ಗಂಗರಸರು, ಲಿಂಗವಂತರಮತ ಹುಟ್ಟಿದುದು.

೮. ಕ್ರಿಸ್ತಶಕ ೩ ನೆಯ ಶತಮಾನದಲ್ಲಿ ಕದಂಬ ಅರಸರು ಈ ದೇಶದ ವಾಯವ್ಯ ದಿಕ್ಕಿನ ಸೀಮೆಗಳಲ್ಲಿಯೂ, ಗಂಗರಸರು ದಕ್ಷಿಣದಲ್ಲಿಯೂ, ಪಲ್ಲವರು ಈಶಾನ್ಯದಲ್ಲಿಯೂ ಆಳುತ್ತಿದ್ದರು. ಪಾಂಡ್ಯ, ಚೋಳ, ಕೇರಳ, ಕಳಿಂಗ ಮುಂತಾದ ರಾಜ್ಯಗಳು ಆಗಿನ ಕಾಲದಲ್ಲ ಈ ದೇಶದ ಸುತ್ತಲೂ ಇದ್ದುವು.

೯. ಸೊರಬಕ್ಕೆ ಸಮೀಪದಲ್ಲಿರುವ ಬನವಾಸಿ ಪಟ್ಟಣವು ಕದಂಬರ ರಾಜಧಾನಿಯಾಗಿದ್ದಿತು. ಈ ಕುಲಕ್ಕೆ ಸೇರಿದ ಮಯೂರವರ್ಮನು ಹವ್ಯಕ ಬ್ರಾಹ್ಮಣರನ್ನು ಉತ್ತರ ದೇಶದಿಂದ ಇಲ್ಲಿಗೆ ಕರಸಿದನೆಂದು ಹೇಳುತ್ತಾರೆ. ೬ ನೆಯ ಶತಮಾನದಲ್ಲಿ ಚಾಲೂಕ್ಯರು ಕದಂಬರನ್ನು ಗೆದ್ದು ತಮಗೆ ಆಶ್ರಿತರನ್ನಾಗಿ ಮಾಡಿಕೊಂಡರು.

೧೦. ಪಲ್ಲವರು ಕಾಂಚೀಪುರದಲ್ಲಿ ೯ನೆಯ ಮತ್ತು ೧೦ ನೆಯ ಶತಮಾನಗಳಿಗೆ ಮುಂಚೆಯೇ ಆಳುತ್ತಿದ್ದರು ಇವರ ಆಳ್ವಿಕೆಗೆ ಮೈಸೂರು ದೇಶದ ಉತ್ತರ ಮತ್ತು ಪೂರ್ವ ಭಾಗಗಳು ಒಳಪಟ್ಟಿದ್ದುವು. ಈಗಿರುವ ನೊಣಬರು ಈ ಅರಸುಗಳ ಪ್ರಜೆಗಳಿಂದ ಹುಟ್ಟಿದವರೆಂದು ಹೇಳುತ್ತಾರೆ.

೧೧. ಗಂಗರಸರು ತಲಕಾಡಿನಲ್ಲಿ ಆಳುತ್ತಿದ್ದರು. ಇವರಲ್ಲಿ ಅನೇಕರು ಶೂರರಾಗಿಯೂ ವಿದ್ವಾಂಸರಿಗೆ ಆಶ್ರಯರಾಗಿಯೂ ಕೀರ್ತಿಯನ್ನು ಪಡೆದರು. ೯೮೩ ನೆಯ ಇಸವಿಯಲ್ಲಿ ರಾಜಮಲ್ಲನೆಂಬವನ ಆಳ್ವಿಕೆಯಲ್ಲಿ ಅವನ ಮಂತ್ರಿಯಾದ ಚಾವುಂಡ ರಾಯನು ಶ್ರವಣ ಬೆಳ್ಗೊಳಗಲ್ಲಿರುವ ಗೋಮ್ಮಟೇಶ್ವರನ ವಿಗ್ರಹವನ್ನು ಸ್ಥಾಪಿಸಿದನು. ರಾಜಮಲ್ಲನ ತರುವಾಯ ಗಂಗರಾಜ್ಯಕ್ಕೆ ಹಾನಿಯುಂಟಾಯಿತು. ಚೋಳದೇಶದ ದೊರೆಯ ಮಗನಾದ ರಾಜೇಂದ್ರ ಚೋಳನು ೧೦೦೪ ನೆಯ ಇಸವಿಯಲ್ಲಿ ತಲಕಾಡಿಗೆ ಮುತ್ತಿಗೆ ಹಾಕಿ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡನು. ಆಗ ಆಳುತ್ತಿದ್ದ ಗಂಗಕುಲದ ಅರಸನು ದೇಶಭ್ರಷ್ಟನಾಗಿ ಹೋದನು.

೧೨. ಅನಂತರ ಗಂಗರಸರ ಸಂತತಿಯಲ್ಲಿ ಕೆಲವರು, ಹೊಯಿಸಳರಲ್ಲಿಯೂ ಚಾಲೂಕ್ಯರಲ್ಲಿಯೂ ಬಹಳ ಕಾಲದವರೆಗೂ ಆಶ್ರಯ ಮಾಡಿಕೊಂಡಿದ್ದರು. ಬಳಿಕ ಸುಮಾರು ೧೫೫೦ ನೆಯ ಇಸವಿಯಲ್ಲಿ ಗಂಗಕುಲಕ್ಕೆ ಸೇರಿದ ಗಂಗರಾಜನೆಂಬವನು ಶಿವನಸಮುದ್ರವೆಂಬ ಊರನ್ನು ಕಟ್ಟಿ,

ಅಲ್ಲಿ ರಾಜ್ಯವನ್ನು ಸ್ಥಾಪಿಸಿದನು. ಇವನ ಮೊಮ್ಮಗನಾದ ೨ ನೆಯ ಗಂಗ ರಾಜನ ದಿವಸದಲ್ಲಿ ಆ ಪಟ್ಟಣವು ಹಾಳಾಯಿತು. ಇದಕ್ಕೆ ಇವನ ಇಬ್ಬರು ಹೆಣ್ಣುಮಕ್ಕಳೇ ಕಾರಣರಾದರು. ಇವರು ತಮ್ಮ ತಂದೆಯ ಭಾಗ್ಯಕ್ಕೆ ಎಣೆ ಇಲ್ಲವೆಂದು ಗರ್ವದಿಂದ ತಮ್ಮ ತಮ್ಮ ಗಂಡಂದಿರನ್ನು ಧಿಕ್ಕರಿಸುತ್ತಿದ್ದರು. ಅದರಿಂದ, ತಮ್ಮ ಮಾವನ ದೊಡ್ಡಸ್ತಿಕೆಯನ್ನು ಮುರಿಯ ಬೇಕೆಂದು ಇಬ್ಬರು ಅಳಿಯಂದಿರೂ ದುರಾಲೋಚನೆಯನ್ನು ಮಾಡಿಕೊಂಡು, ಶಿವನಸಮುದ್ರಕ್ಕೆ ಮುತ್ತಿಗೆ ಹಾಕಿದರು. ಗಂಗರಾಜನ ಮಂತ್ರಿಯು ದ್ರೋಹ ವನ್ನು ಚಿಂತಿಸಿರುವ ಈ ಅಳಿಯಂದಿರ ಉದ್ದೇಶವನ್ನು ಮರೆಮಾಚಿದನು. ಕೊನೆಗೆ ಶತ್ರುಗಳು ಪಟ್ಟಣವನ್ನು ಹೊಕ್ಕರೆಂದು ಕೇಳಿ, ಗಂಗರಾಜನು ರಾಣಿ ವಾಸದಲ್ಲಿದ್ದ ಹೆಂಗಸರು ಮಕ್ಕಳನ್ನೆಲ್ಲ ಕೊಂದು ತಾನೂ ಯುದ್ಧದಲ್ಲಿ ಮಡಿದನು. ಆಗ ಇಬ್ಬರು ಅಳಿಯಂದಿರೂ ಅವರ ಹೆಂಡತಿಯರೂ, ಹೀಗೆ ತಮ್ಮಿಂದ ಉಂಟಾದ ಕೇಡಿಗೆ ತಾವೇ ಹೆದರಿ, ಗಗನಚುಕ್ಕಿಯಲ್ಲಿ ಧುಮಿಕಿ ಪ್ರಾಣವನ್ನು ಬಿಟ್ಟರು. ಹೀಗೆ ರಾಜ್ಯವು ಅನಾಯಕವಾಗಲು ಇತರ ರಾಜರು ತಮ್ಮ ತಮ್ಮ ದೇಶಕ್ಕೆ ಕೆಲ ಕೆಲವು ಭಾಗಗಳನ್ನು ಸೇರಿಸಿಕೊಂಡರು.

೧೩. ಚಾಲೂಕ್ಯರು ಕಲ್ಯಾಣಪುರದಲ್ಲಿಯೂ ರಾಜಮಹೇಂದ್ರದಲ್ಲಿ ಯೂ ಆಳುತ್ತಿದ್ದರು. ರಾಜಮಹೇಂದ್ರದ ತಿಬೆಯ ದೊರೆಗಳಿಗೆ ಸೊರಬವು ಸೇರಿದ್ದಿತು. ೭ ನೆಯ ಶತಮಾನದಲ್ಲಿ ಆಳುತ್ತಿದ್ದ ಪುಲಿಕೇಶಿಯ ದಿವಸ ದಲ್ಲಿ ಚೀಣಾದೇಶದವನಾದ ಹೀವನತ್ಸಾಂಗನೆಂಬವನು ಈ ದೇಶದಲ್ಲಿ ಸಂಚಾರಮಾಡಿದನು. ಅವನು ಇಲ್ಲಿಯ ಸ್ಥಿತಿಯನ್ನು ಹೀಗೆಂದು ವರ್ಣಿ ಸಿದ್ದಾನೆ—'ಈ ದೇಶದ ಜನಗಳು ಸತ್ಯವಂತರು, ಬಹಳ ಛಲಗಾರರು, ಉಪಕಾರಮಾಡಿದವರಿಗೆ ಎಂದಿಗೂ ಅಪಕಾರಮಾಡುವುದಿಲ್ಲ; ಆದರೆ ಇವರು ತಮಗೆ ಕೇಡುಮಾಡಿದವರಿಗೆ ಸ್ವಲ್ಪವೂ ಕರುಣವನ್ನು ತೋರಿಸುವುದಿಲ್ಲ. ತಮ್ಮ ಮರೆಹೊಕ್ಕವರಿಗೆ ಮಿತಿಮೀರಿ ಸಹಾಯಮಾಡುತ್ತಾರೆ. ಹಗೆಗಳಿಗೆ ಮೊದಲು ತಿಳಿಸಿ ಅನಂತರ ಅವರಮೇಲೆ ಕೈ ಮಾಡುತ್ತಾರೆ. ಯುದ್ಧ ದಲ್ಲಿ ಸೋತು ಬಂದವರಿಗೆ ಸೀರೆಯನ್ನು ಉಡಿಸಿ ಅವಮಾನಮಾಡುತ್ತಾರೆ ಹೀಗೆ ಅವಮಾನ ಮಾಡಿಸಿಕೊಳ್ಳುವುದಕ್ಕಿಂತ ಪ್ರಾಣವನ್ನೇ ಬಿಡುವುದು ಲೇ ಸೆಂದು ಸೈನ್ಯದವರು ಘೋರವಾಗಿ ಯುದ್ಧಮಾಡುತ್ತಾರೆ. ಇವರು ಯುದ್ಧಕ್ಕೆ ಹೊರಡುವಾಗ ರಣಭೇರಿಯನ್ನು ಬಾರಿಸುತ್ತಾ, ಅದರ ನಾದಕ್ಕೆ ಸರಿಯಾಗಿ ಹೆಜ್ಜೆಹಾಕುತ್ತಾರೆ. ಇವರೊಡನೆ ನೂರಾರು ಮದದಾನೆಗಳು ಯುದ್ಧಕ್ಕೆ ಹೊರಡುತ್ತವೆ.'

೧೪. ರಾಷ್ಟ್ರಕೂಟದ ದೊರೆಯಾದ ನೃಪತುಂಗನು ೯ ನೆಯ ಶತ ಮಾನದಲ್ಲಿ ಚಾಲೂಕ್ಯರನ್ನು ಸೋಲಿಸಿದನು. ಅಲ್ಲಿಂದೀಚೆಗೆ ಅವರ ಸಂಪ ತ್ತು ತಗ್ಗಿತು ಆದರೆ ೧೨ ನೆಯ ಶತಮಾನದಲ್ಲಿ ಆಳುತ್ತಿದ್ದ ವಿಕ್ರಮಾದಿತ್ಯ ನೆಂಬವನು ಅನೇಕ ರಾಜರನ್ನು ಗೆದ್ದು ಚಾಲೂಕ್ಯ ವಿಕ್ರಮಶಕವೆಂಬದಾಗಿ

ತನ್ನದೇ ಒಂದು ಶಕವನ್ನು ಸ್ಥಾಪಿಸಿದನು. ಮಿತಾಕ್ಷರಗ್ರಂಥವನ್ನು ಬರೆದ ವಿಜ್ಞಾನೇಶ್ವರನು ಇವನ ಆಳ್ವಿಕೆಯಲ್ಲಿದ್ದನು. ಮೂರನೆಯ ತೈಲಪನು ಆಳುತ್ತಿರುವಾಗ, ೧೧೫೭ ನೆಯ ಇಸವಿಯಲ್ಲಿ ಇವನ ಸೇನಾಪತಿಯಾದ ಬಿಜ್ಜಳನೆಂಬವನು ರಾಜ್ಯವನ್ನು ಆಕ್ರಮಿಸಿಕೊಂಡು ತಾನೇ ದೊರೆಯಾದನು.

೧೫. ಬಿಜ್ಜಳನ ಆಳ್ವಿಕೆಯಲ್ಲಿ ಲಿಂಗವಂತರ ಮತವು ತಲೆಯೆತ್ತಿತು. ಈ ಮತವು ಬಿಜ್ಜಳನ ಮಂತ್ರಿಯಾಗ ಆರಾಧ್ಯಬ್ರಾಹ್ಮಣ ಬಸವೇಶ್ವರನಿಂದ ಸ್ಥಾಪಿಸಲ್ಪಟ್ಟಿತು. ಬಸವೇಶ್ವರನು ಸ್ವಲ್ಪ ಕಾಲದೊಳಗೆ ಬಹುಜನರನ್ನು ತನ್ನ ಮತಕ್ಕೆ ಸೇರಿಸಿಕೊಂಡನು. ಆದುದರಿಂದ ಜೈನಮತದವನಾದ ಬಿಜ್ಜಳನಿಗೂ ಅವನಿಗೂ ಜಗಳ ಹುಟ್ಟಿ, ಬಿಜ್ಜಳನು ಕೊಲ್ಲಲ್ಪಟ್ಟನು.

— —

## ೩ನೆಯ ಪ್ರಕರಣ.

## ಹೊಯಿಸಳರು, ರಾಮಾನುಜಾಚಾರ್ಯರು.

## ಮುಸಲ್ಮಾನರ ಪ್ರವೇಶ.

೧೬. ಹೊಯಿಸಳ ಬಲ್ಲಾಳ ಕುಲದ ಅರಸುಗಳು ಈ ಸೀಮೆಯಲ್ಲಿಯೇ ಹುಟ್ಟಿದವರೆಂದು ಹೇಳಬಹುದು. ಇವರು ಕ್ರಿ. ಶಕ ೧೧ ನೆಯ ಶತಮಾನದಿಂದ ೧೪ ನೆಯ ಶತಮಾನದವರೆಗೂ ರಾಜ್ಯವಾಳುತ್ತಿದ್ದರು. ಹೊಯಿಸಳರೆಂಬ ಹೆಸರು ಬರುವುದಕ್ಕೆ ಒಂದು ಕಥೆಯು ಹೇಳಲ್ಪಟ್ಟಿದೆ. ಇವರ ಮೂಲಪುರುಷನಾದ ‘‘ಸಳ’’ ಎಂಬವನು ಒಂದಾನೊಂದು ಕಾಲದಲ್ಲಿ ಕಾಡಿನಲ್ಲಿ ದೇವರ ಪೂಜೆಯನ್ನು ಮಾಡುತ್ತಿದ್ದಾಗ ಇದ್ದಕ್ಕಿದ್ದಹಾಗೆ ಒಂದು ಹುಲಿಯು ಬಂದಿತು. ಆಗ ಅವನೊಡನೆ ಇದ್ದ ಹೊಂಬುಚದ ಗುರುವಾದ ವರ್ಧಮಾನ ಮುನಿಯು ಸಳನ ಕೈಗೆ ಒಂದು ಆಯುಧವನ್ನು ಕೊಟ್ಟು ‘ಹೊಯ್ ಸಳ’ ಎಂಬದಾಗಿ ಘಟ್ಟಿಯಾಗಿ ಕೂಗಿದನು. ಅಂದಿನಿಂದ ಸಳನಿಗೆ ‘ಹೊಯ್ ಸಳ’ ಎಂಬದಾಗಿ ಹೆಸರು ಬಂದಿತು. ಅದು ಮೊದಲು ಅವನ ಸಂತತಿಯುವರಿಗೆ ಹೊಯಿಸಳರೆಂದು ಅಡ್ಡಹೆಸರಾಯಿತು.

೧೭. ಹೊಯಿಸಳರಲ್ಲಿ ವಿಷ್ಣುವರ್ಧನನು ಬಹು ಪ್ರಸಿದ್ಧನಾದವನು, ಇವನು ೧೧೦೪ ನೆಯ ಇಸವಿಯಲ್ಲಿ ಪಟ್ಟಕ್ಕೆ ಬಂದನು. ಇವನ ದಳವಾಯಿಯಾದ ಗಂಗರಾಜನು ತಲಕಾಡಿಗೆ ಮುತ್ತಿಗೆಹಾಕಿ, ಚೋಳರ ಸೈನ್ಯವನ್ನು ಸೋಲಿಸಿ, ಆ ಸೀಮೆಯನ್ನು ಹೊಯಿಸಳ ರಾಜ್ಯಕ್ಕೆ ಸೇರಿಸಿದನು. ವಿಷ್ಣುವರ್ಧನನ ಕಾಲದಲ್ಲಿ ರಾಮಾನುಜಾಚಾರ್ಯರು ಚೋಳರಾಜನ ಹಿಂಸೆಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಶ್ರೀರಂಗದಿಂದ ಹೊಯಿಸಳದೇಶಕ್ಕೆ ಬಂದರು. ಅವರು ಬರುವುದಕ್ಕೆ ಮುಂಚೆ ವಿಷ್ಣುವರ್ಧನನಿಗೆ ಬಿಟ್ಟಿದೇವನೆಂದು ಹೆಸರಿ

ದ್ದಿತು. ಅನಂತರ ಅವರ ಉಪದೇಶದಿಂದ ಬಿಟ್ಟಿದೇವನು ಜೈನ ಮತವನ್ನು ಬಿಟ್ಟು, ವಿಶಿಷ್ಟಾದ್ವೈತಮತವನ್ನು ಕೈಕೊಂಡು ವಿಷ್ಣುವರ್ಧನನೆಂಬ ಹೆಸರನ್ನಿಟ್ಟುಕೊಂಡನು.

೧೮. ವಿಷ್ಣುವರ್ಧನನ ತರುವಾಯ ಪಟ್ಟಕ್ಕೆ ಬಂದ ದೊರೆಗಳು ಅವನಷ್ಟು ಪ್ರಸಿದ್ಧರಾಗಿರಲಿಲ್ಲ. ೩ ನೆಯ ಬಲ್ಲಾಳನು ಆಳುತ್ತಿದ್ದಾಗ ೧೩೧೦ ನೆಯ ಇಸವಿಯಲ್ಲಿ ಡೆಹಲಿಯ ದೊರೆಯಾದ ಅಲ್ಲಾವುದ್ದೀನನ ಸೇನಾಪತಿ ಮಲ್ಲಿಕ್ ಕಾಫೂರನೆಂಬವನು ಉತ್ತರ ದೇಶದಿಂದ ಬಂದು ಹೊಯಿಸಳರ ರಾಜಧಾನಿಯಾದ ದ್ವಾರಸಮುದ್ರ (ಹಳೆಯಬೀಡು)ಕ್ಕೆ ಮುತ್ತಿಗೆ ಹಾಕಿ ಸುಲಿಗೆ ಮಾಡಿದನು. ಮುಸಲ್ಮಾನರು ಮೈಸೂರುದೇಶಕ್ಕೆ ಬರುವುದಕ್ಕೆ ಇದೇ ಮೊದಲಾಯಿತು. ಮಲ್ಲಿಕ್ ಕಾಫೂರನು ಹೊರಟು ಹೋದ ಬಳಿಕ ಬಲ್ಲಾಳನು ದ್ವಾರಸಮುದ್ರವನ್ನು ಬಿಟ್ಟು ಬೇಲೂರನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು. ೧೩೨೬ ನೆಯ ಇಸವಿಯಲ್ಲಿ ಮುಸಲ್ಮಾನರ ಮತ್ತೊಂದು ಸೈನ್ಯವು ಬಂದು ದ್ವಾರಸಮುದ್ರವನ್ನು ಸಂಪೂರ್ಣವಾಗಿ ಹಾಳುಮಾಡಿತು. ಬಳಿಕ ಹೊಯಿಸಳರ ದೊರೆಯು ಬೇಲೂರನ್ನು ಬಿಟ್ಟು ಶ್ರೀರಂಗಪಟ್ಟಣದ ಹತ್ತಿರ ಇರುವ ತೊಣ್ಣೂರಿಗೆ ಬಂದು ನಿಂತನು.

೧೯. ಹೊಯಿಸಳರು ಕಟ್ಟಿಸಿದ ಸುಂದರವಾದ ಗುಡಿಗಳು ಈಗಲೂ ಇವೆ. ಇವು ನೋಟಕರಿಗೆ ಬಹಳವಾಗಿ ಆಶ್ಚರ್ಯವನ್ನುಂಟುಮಾಡುತ್ತಲಿವೆ. ಬೇಲೂರು ಕೇಶವ ದೇವಸ್ಥಾನವು ವಿಷ್ಣುವರ್ಧನನಕಾಲದಲ್ಲಿ ಕಟ್ಟಿಸಲ್ಪಟ್ಟಿತು. ಹಳೆಯ ಬೀಡಿನಲ್ಲಿರುವ ದೇವಸ್ಥಾನಗಳು ೧೨ ನೆಯ ಮತ್ತು ೧೩ ನೆಯ ಶತಮಾನಗಳಲ್ಲಿ ಕಟ್ಟಲ್ಪಟ್ಟುವು. ತಿರುಮುಕೂಡಲು ನರಸೀಪುರದ ಬಳಿ ಇರುವ ಸೋಮನಾಥಪುರದ ದೇವಸ್ಥಾನವನ್ನು ಸುಮಾರು ೧೨೭೦ ನೆಯ ಇಸವಿಯಲ್ಲಿ ದಳವಾಯಿ ಸೋಮನೆಂಬವನು ಕಟ್ಟಿಸಿದನು. ಪ್ರಸಿದ್ಧರಾದ ಜಕಣಾಚಾರಿ ಮತ್ತು ಇವನ ಮಗ ಡಂಕಣಾಚಾರಿ ಇವರು ಹಳೇಬೀಡಿನಲ್ಲಿರುವ ದೇವಸ್ಥಾನಗಳನ್ನು ಕಟ್ಟಿದರೆಂದು ಹೇಳುತ್ತಾರೆ. ಹಿಂದೂ ಶಿಲ್ಪಿಗಳ ಚಾತುರ್ಯವನ್ನು ತಿಳಿಯಬೇಕಾದರೆ ಹಳೆಯಬೀಡಿನ ದೇವಸ್ಥಾನಗಳನ್ನು ನೋಡಿದ ಹೊರತು ಚೆನ್ನಾಗಿ ಗೊತ್ತಾಗುವುದಿಲ್ಲ.

## ೪ ನೆಯ ಪ್ರಕರಣ.

### ವಿಜಯನಗರದ ಅರಸುಗಳು, ತಾಳೀಕೋಟೆಯುದ್ಧ.

೨೦. ಮೊದಲಿದ್ದ ಹಿಂದೂ ರಾಜರುಗಳೆಲ್ಲ ಬಲಹೀನರಾಗಿ ದೇಶವು ಮುಸಲ್ಮಾನರ ಕೈಸೇರತೊಡಗಿತು. ಆ ಸಮಯದಲ್ಲಿ ಪ್ರಸಿದ್ಧವಾದ ವಿಜಯನಗರದ ಸಂಸ್ಥಾನವು ಸುಮಾರು ೧೩೩೬ ನೆಯ ಇಸವಿಯಲ್ಲಿ ತಲೆ

ಯಿತ್ತು. ಹಿಂದೆ ಹೇಳಿದ ಮಲ್ಲಿಕ್ ಕಾಫೂರನು ತೆಲಗುದೇಶದ ಓರಗಲ್ಲೆಂಬ ರಾಜಧಾನಿಯನ್ನು ಹಾಳುಮಾಡಿದನು. ಬಳಿಕ ಅಲ್ಲಿಯ ಭಂಡಾರದ ಕಾವಲುಗಾರರಾಗಿದ್ದ ಹಕ್ಕ ಬುಕ್ಕ ಎಂಬ ಇಬ್ಬರು ಅಣ್ಣತಮ್ಮಂದಿರು ಶೃಂಗೇರಿಗೆ ಬಂದು ವಿದ್ಯಾರಣ್ಯಸ್ವಾಮಿಗಳನ್ನು ಕಂಡರು. ಇವರು ಹಕ್ಕ ಬುಕ್ಕರಿಗೆ ಬಹಳವಾಗಿ ಹಣವನ್ನು ಕೊಟ್ಟು, ತುಂಗಭದ್ರಾತೀರದಲ್ಲಿ ವಿಜಯನಗರವೆಂಬ ಪಟ್ಟಣವನ್ನು ಕಟ್ಟಿಸಿ ರಾಜ್ಯಸ್ಥಾಪನೆಮಾಡಿಸಿ, ಹಕ್ಕನಿಗೆ ಹರಿಹರರಾಯನೆಂದು ಹೆಸರಿಟ್ಟು ಪಟ್ಟವನ್ನು ಕಟ್ಟಿದರು.

೨೧. ಈ ಸಂಸ್ಥಾನವು ಸುಮಾರು ೨೩೦ ವರ್ಷಗಳ ವರೆಗೆ ಉತ್ತಮವಾದ ಸ್ಥಿತಿಯಲ್ಲಿದ್ದು ಕೊನೆಗೆ ಮುಸಲ್ಮಾನರ ಪಾಲಾಯಿತು. ಮೊದಲಾಳುತ್ತಿದ್ದ ವಿಜಯನಗರದ ಅರಸುಗಳು ಬಹಳ ಶೂರರೆನಿಸಿಕೊಂಡು ರಾಜ್ಯವನ್ನು ವಿಸ್ತರಿಸಿದರು. ಇವರ ಅಧಿಕಾರಿಯೊಬ್ಬನು ಶ್ರೀರಂಗಪಟ್ಟಣದಲ್ಲಿದ್ದುಕೊಂಡು ಅಧೀನರಾದ ಪಾಳೆಯಗಾರರ ಮೇಲೆ ವಿಚಾರಣೆ ಮಾಡುತ್ತಿದ್ದನು. ಈ ವಿಜಯ ನಗರದ ಅರಸರು ವಿದ್ಯಾವಂತರಿಗೆ ಸಹಾಯ ಮಾಡುತ್ತಾ ಧರ್ಮದಿಂದ ರಾಜ್ಯವಾಳುತ್ತಿದ್ದರು ೧೫೧೧ ನೆಯ ಇಸವಿಯಲ್ಲಿ ಇವರ ದೇಶದಲ್ಲಿ ಸಂಚಾರಮಾಡಿದ ಇಟಲೀದೇಶಸ್ಥನೊಬ್ಬನು ವಿಜಯನಗರವನ್ನು ಹೀಗೆಂದು ವರ್ಣಿಸಿದ್ದಾನೆ.—

೨೨. "ಈ ಪಟ್ಟಣವು ಬಹಳ ದೊಡ್ಡದಾಗಿಯೂ, ವ್ಯಾಪಾರಕ್ಕೆ ಮುಖ್ಯವಾದ ಸ್ಥಳವಾಗಿಯೂ ಇದೆ ಇಲ್ಲಿಯ ವರ್ತಕರು ರತ್ನಪಡಿ ವ್ಯಾಪಾರವನ್ನು ಬಹಳವಾಗಿ ಮಾಡುತ್ತಾರೆ ಮುತ್ತುಗಳು ಫಾರಸೀದೇಶದಿಂದಲೂ, ಮಾಣಿಕ್ಯಗಳು ಪೇಗುದೇಶದಿಂದಲೂ, ರೇಷ್ಮೆ ಮತ್ತು ಜರತಾರಿ ವಸ್ತ್ರಗಳು ಅಲೆಕ್ಸಾಂಡ್ರಿಯ ಪಟ್ಟಣ, ಮತ್ತು ಚೀಣಾದೇಶದಿಂದಲೂ, ಕರ್ಪೂರ ಮುಂತಾದ ಸರಕುಗಳು ಬೇರೆ ಬೇರೆ ದೇಶಗಳಿಂದಲೂ, ಈ ಪಟ್ಟಣಕ್ಕೆ ವಿಕ್ರಯಕ್ಕೆ ಬರುತ್ತವೆ. ಇಲ್ಲಿಯ ದೊರೆಯು ೬೦೦ ಆನೆಗಳನ್ನೂ ಕಟ್ಟಿದ್ದಾನೆ. ಇವನ ಸೈನ್ಯದಲ್ಲಿ ೨೦,೦೦೦ ರಾವುತರೂ, ಅನೇಕ ಜನ ಕಾಲಾಳುಗಳೂ ಇರುತ್ತಾರೆ."

೨೩. ವಿಜಯ ನಗರದ ಅರಸುಗಳಿಗೂ ಮುಸಲ್ಮಾನರಾದ ಬಹಮನೀ ಅರಸುಗಳಿಗೂ ಆಗಿಂದಾಗ್ಗೆ ಜಗಳಗಳು ನಡೆಯುತ್ತಲೇ ಇದ್ದುವು. ೧೩೫೮ ನೆಯ ಇಸವಿಯಲ್ಲಿ ಮಹಮದ್‌ಷಹ ಎಂಬ ಬಹಮನೀ ದೊರೆಯು ಆಳುತ್ತಿದ್ದನು. ಅವನು ಒಂದಾನೊಂದು ದಿವಸ ಸಾರಾಯಿಕುಡಿದು ಜ್ಞಾನ ಸರಿಯಾಗಿಲ್ಲದೆ ಇರುವಾಗ ಕೆಲವರು ಸಂಗೀತಗಾರರು ಹಾಡಿದರು. ಅವನು ಸಂತೋಷಪಟ್ಟು ಅವರಿಗೆ ಬಹುಮಾನವನ್ನು ಕೊಡುವಂತೆ ವಿಜಯನಗರದ ಬುಕ್ಕರಾಯನಿಗೆ ನಿರೂಪವನ್ನು ಬರೆದು ಕಳುಹಿಸಿದನು. ಆದರೆ ಬುಕ್ಕರಾಯನು ಆ ನಿರೂಪವನ್ನು ತಂದ ಮನುಷ್ಯನನ್ನು ಕತ್ತೆಯಮೇಲೆ ಕುಳ್ಳಿರಿಸಿ ಊರಲ್ಲೆಲ್ಲಾ ಮೆರವಣಿಗೆ ಮಾಡಿ ಅವನನ್ನು ಅವಮಾನಪಡಿಸಿ

ಹಿಂದಕ್ಕೆ ಕಳುಹಿಸಿದನು. ಅನಂತರ ಹಿಂದುಗಳಿಗೂ ಮುಸಲ್ಮಾನರಿಗೂ ಅನೇಕ ಸ್ಥಳಗಳಲ್ಲಿ ಯುದ್ಧ ನಡೆಯಿತು. ಮಹಮದ್‌ಷಹನು ಹಿಂದುಗಳಲ್ಲಿ ಒಂದು ಲಕ್ಷ ಜನರನ್ನು, ಹೆಂಗಸರು, ಮಕ್ಕಳು, ಎಂದು ತಾರತಮ್ಯವಿಡದೆ ಕೊಲ್ಲಿಸಿದನು ಕೊನೆಗೆ ಬುಕ್ಕರಾಯನು ಸಂಗೀತಗಾರರಿಗೆ ಬಹುಮಾನ ಮಾಡುವಂತೆ ಒಪ್ಪಿಕೊಂಡು ಸಮಾಧಾನ ಮಾಡಿಕೊಳ್ಳಬೇಕಾಯಿತು. ತರುವಾಯ ೧೪೦೬ ನೆಯ ಇಸವಿಯಲ್ಲಿ ಆಳುತ್ತಿದ್ದ ದೇವರಾಯನು ಬಹಮನೀ ರಾಜ್ಯಕ್ಕೆ ಸೇರಿದ ಮುದ್ಗಲ್ಲೆಂಬ ಊರಿನಲ್ಲಿ ಬಹು ರೂಪವತಿಯಾದ ಒಬ್ಬ ಹೆಂಗಸು ಇರುವಳೆಂದು ಕೇಳಿ ಅವಳನ್ನೆತ್ತಿಕೊಂಡು ಬರುವಂತೆ ಕೆಲವು ಸೈನ್ಯವನ್ನು ಕಳುಹಿಸಿದನು. ಆಗ ಬಹಮನೀ ದೊರೆಯಾಗಿದ್ದ ಫಿರೋಸ್ ಷಹನು ದೇವರಾಯನಮೇಲೆ ಯುದ್ಧಕ್ಕ ಬಂದು ಅವನನ್ನು ಸೋಲಿಸಿ ಅವನ ಮಗಳನ್ನು ಬಲಾತ್ಕಾರದಿಂದ ತಾನೇ ಮದುವೆ ಮಾಡಿಕೊಂಡನು.

೨೪. ಹೀಗೆಯೇ ದೇವರಾಯನ ತರುವಾಯವೂ ಜಗಳಗಳು ಆಗಿಂದಾಗ ನಡೆಯುತ್ತಲೇ ಇದ್ದುವು. ಆದರೆ ೧೫೦೮ ನೆಯ ಇಸವಿಯಿಂದ೧೫೨೯ ನೆಯ ವರುಷದವರೆಗೂ ಆಳುತ್ತಿದ್ದ ಕೃಷ್ಣರಾಯನ ದಿವಸದಲ್ಲಿ ಮುಸಲ್ಮಾನರಿಗೆ ಒಂದಾವೃತ್ತಿ ಕೂಡ ಜಯವಾಗಲಿಲ್ಲ. ಕೃಷ್ಣರಾಯ, ಈತನ ತರುವಾಯ ಅಧಿಕಾರದಲ್ಲಿದ್ದ ಅಚ್ಯುತರಾಯ, ಇವರ ಹೆಸರುಗಳು ಈಗಲೂ ಜನರ ನೆನಪಿನಲ್ಲಿವೆ. ಕೃಷ್ಣರಾಯನ ಸಭೆಯಲ್ಲಿ ಅಷ್ಟದಿಗ್ಗಜಗಳೆಂಬ ಹೆಸರಿನಿಂದ ಪ್ರಸಿದ್ಧರಾದ ಎಂಟು ಜನ ಕವಿಗಳಿದ್ದರು. ತೆನ್ನಾಲ ರಾಮಕೃಷ್ಣನೂ ಅದೇ ಕಾಲದಲ್ಲಿದ್ದನು.

೨೫. ಕೃಷ್ಣರಾಯನ ಅಳಿಯ ರಾಮರಾಜನ ಆಳಿಕೆಯಲ್ಲಿ ವಿಜಯ ನಗರವು ಹಾಳಾಯಿತು. ಇವನು ಪಟ್ಟಕ್ಕೆ ಬರುವುದಕ್ಕೆ ಮುಂಚೆ ಬಹಮನೀ ರಾಜ್ಯವು ಒಡೆದು ಐದುರಾಜ್ಯಗಳು ಉಂಟಾಗಿದ್ದುವು. ಅಲ್ಲಿಯ ದೊರೆಗಳು ತಮ್ಮ ತಮ್ಮೊಳಗೆ ಜಗಳವಾಡಿಕೊಳ್ಳುತ್ತಿದ್ದರು. ರಾಮರಾಜನು ದೊರೆಯಾದಮೇಲೆ, ಬಿಜಾಪುರದ ದೊರೆಯು ಅಹಮದ್ ನಗರದ ದೊರೆಯಕೂಡ ನಡಿಸುತ್ತಿದ್ದ ಯುದ್ಧಕ್ಕೆ ರಾಮರಾಜನ ಸಹಾಯವನ್ನು ಹೊಂದಿದನು, ಆದರೆ ರಾಮರಾಜನು ಮಾರ್ಗದಲ್ಲಿ ಮಸೀದಿಗಳನ್ನು ಕೆಡವಿಸಿ ಮುಸಲ್ಮಾನರ ಹೆಂಗಸರಿಗೆ ಮಾನಭಂಗ ಮಾಡಿಸಿದನು ಇದರಿಂದ ಮುಸಲ್ಮಾನರೆಲ್ಲರಿಗೂ ಅವನಲ್ಲಿ ದ್ವೇಷ ಹುಟ್ಟಿತು. ಕೂಡಲೆ ಬಿಜಾಪುರ, ಗೋವಳಕೊಂಡ, ಬೀದರ ಮತ್ತು ಅಹಮದ್‌ನಗರ ಇವುಗಳ ದೊರೆಗಳು ಒಕ್ಕಟ್ಟಾಗಿ ರಾಮರಾಜನನ್ನು ಮುರಿಯಬೇಕೆಂದು ಹೊರಟರು. ೧೫೬೫ ನೆಯ ಇಸವಿಯಲ್ಲಿ ತಾಳೀಕೋಟೆಯಬಳಿ ಶತ್ರುಗಳ ಸೈನ್ಯಕ್ಕೂ ರಾಮರಾಜನ ಸೈನ್ಯಕ್ಕೂ ಜಗಳವಾಯಿತು. ಶತ್ರುಗಳು ಸೋತು ಹಿಂದೆ ಬೀಳುವುದರಲ್ಲಿದ್ದರು ; ಆದರೆ ಕೊನೆಗೆ ಜಯಲಕ್ಷ್ಮಿಯು ಮುಸಲ್ಮಾನರ ಕೈ ಸೇರಿದಳು. ರಾಮರಾಜನು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ತನ್ನ ಜನರಿಗೆ ಧೈರ್ಯವನ್ನು ಹೇಳುತ್ತಾ ಸೈನ್ಯದ

ಮಧ್ಯದಲಿದ್ದನು. ಆಗ ಶತ್ರುಗಳ ಆನೆಯೊಂದು ಮೇಲೆ ನುಗ್ಗಿತು. ಒಡನೆ ಬೋಯಿಗಳು ಅಂಜಿ ಪಲ್ಲಕ್ಕಿಯನ್ನು ಕೆಳಕ್ಕೆ ಕೆಡವಿ ಓಡಿಹೋದರು, ಅಹಮದ್ ನಗರದ ದೊರೆಯು ಇದನ್ನು ಕಂಡು, ಆ ಕೂಡಲೆ ರಾಮರಾಜ ನನ್ನು ಹಿಡಿದು ಅಲ್ಲಿಯೇ ಅವನ ತಲೆಯನ್ನು ಕತ್ತರಿಸಿ ಒಂದು ಬಲ್ಲೆಯಕ್ಕೆ ಚುಚ್ಚಿ ಮೇಲಕ್ಕೆ ಎತ್ತಿ ಹಿಡಿದನು. ಅದನ್ನು ನೋಡಿ ವಿಜಯನಗರದ ಸೈನ್ಯ ದವರು ಹೆದರಿ ಹಿಮ್ಮೆಟ್ಟಿದರು. ಆಗ ಮುಸಲ್ಮಾನರು ಮಾಡಿದ ಕೊಲೆಗೆ ಮಿತಿಯಿಲ್ಲ. ರಕ್ತದ ಕಾಲುವೆಗಳನ್ನು ಹರಿಸಿದರು. ಅನಂತರ, ನಾಲ್ಕು ಜನ ಮುಸಲ್ಮಾನ ದೊರೆಗಳೂ ವಿಜಯನಗರಕ್ಕೆ ಹೋಗಿ, ಅಲ್ಲಿ ಎಲ್ಲವನ್ನೂ ಸೂರೆಮಾಡಿಕೊಂಡು ಅಲ್ಲಿಯ ಸುಂದರವಾದ ಗುಡಿಗಳನ್ನೂ ಮನೆಗಳನ್ನೂ ಹಾಳುಮಾಡಿ ತಮ್ಮ ತಮ್ಮ ಊರಿಗೆ ಹೊರಟು ಹೋದರು. ಅಲ್ಲಿಂದ ಮುಂದೆ ವಿಜಯನಗರವು ಮೇಲಕ್ಕೆ ಏಳಲೇ ಇಲ್ಲ.

---

## ೫ ನೆಯ ಪ್ರಕರಣ.

### ರಾಜ್ಯಕ್ರಮ.

೨೬. ಹಿಂದಣ ಕಾಲದಲ್ಲಿ ರಾಜನು ಬೆಳಗಾಗುತಲೆ ಸಭೆಗೆ ಬಂದು, ಅಲ್ಲಿ ಪ್ರಜೆಗಳ ಕಷ್ಟಗಳನ್ನು ತಾನೇ ವಿಚಾರಿಸುವ ವಾಡಿಕೆಯಿದ್ದಿತು. ದೊರೆಯ ಕೈಕೆಳಗೆ ಮಹಾಪ್ರಧಾನ ಅಥವಾ ಸರ್ವಾಧಿಕಾರಿ ಎಂಬ ಹೆಸರಿ ನಿಂದ ಒಬ್ಬ ಮುಖ್ಯಮಂತ್ರಿ ಇರುತ್ತಿದ್ದನು. ಈ ಮಹಾಪ್ರಧಾನನಲ್ಲದೆ ಸಾಧಾರಣವಾಗಿ ಇನ್ನೂ ಏಳು ಜನ ಮಂತ್ರಿಗಳಿರುತ್ತಿದ್ದರು. ಸಂಸ್ಥಾನವು ದೊಡ್ಡ ದೊಡ್ಡ ಭಾಗಗಳಾಗಿ ಭಾಗಿಸಲ್ಪಟ್ಟು ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬ ದಂಡನಾಯಕ ಅಥವಾ ಧಣಾನಾಯಕನೆಂಬ ಅಧಿಕಾರಿ ಇರುತ್ತಿ ದ್ದನು. ಆಯಾ ಭಾಗಗಳಲ್ಲಿದ್ದ ಸಾಮಂತರಾಜರ ಮೇಲೆ ಧಣಾಯಕನೇ ವಿಚಾರಣೆಮಾಡುತ್ತಿದ್ದನು. ಆದುದರಿಂದ ಇವನಿಗೆ ಮಹಾ ಸಾಮಂತಾಧಿ ಪತಿ ಎಂಬದಾಗಿಯೂ ಹೆಸರಿದ್ದಿತು; ಕೆಲವು ಕಡೆ ಇವನನ್ನು ಹೆಗ್ಗಡೆ ಎಂದು ಕರೆಯುತ್ತಿದ್ದರು.

೨೭. ವಿಜಯನಗರದ ಅರಸುಗಳ ದಿವಸದಲ್ಲಿ ೧೦ ರಿಂದ ೪೦ ಗ್ರಾಮಗಳಿಗೆ ಒಂದು ಹೋಬಳಿ ಎಂದೂ, ೪ ರಿಂದ ೧೦ ಹೋಬಳಿಗಳಿಗೆ ಒಂದು ಗಡಿಯೆಂದೂ, ೧೦ ರಿಂದ ೨೦ ಗಡಿಗಳಿಗೆ ಒಂದು ಸೀಮೆ ಅಥವಾ ನಾಡು ಎಂದೂ ವಿಭಾಗಗಳಿದ್ದುವು. ಸಾಧಾರಣವಾಗಿ ಸೀಮೆಗಳಿಗೆಲ್ಲಾ ಅವುಗಳ ಹುಟ್ಟುವಳಿಯನ್ನನುಸರಿಸಿ ಹೆಸರುಗಳನ್ನಿಡುತ್ತಿದ್ದರು. ಗಡಿಯ ವಿಚಾರ ಣೆಯು ಈಗಿನ ಕಾಲದ ಅಮಲ್ದಾರರಿಗೆ ಸಮಾನನಾದ ಪಾರುಪತ್ಯಗಾರನದಾ

ಗಿಯೂ, ಗ್ರಾಮದ ವಿಚಾರಣೆ ಗೌಡನದಾಗಿಯೂ ಇದ್ದುವು. ಗ್ರಾಮಗಳಲ್ಲಿ ಗೌಡನೂ ಸೇರಿ ಆಯಗಾರರು ಅಥವಾ ಬಾರಾಬಲೂತಿ ಎಂಬದಾಗಿ ೧೨ ಜನರು ಕೆಲಸದಲ್ಲಿರುತ್ತಿದ್ದರು. ಗೌಡನು ರೈತರುಗಳಿಂದ ಬೆಳೆಗಳನ್ನು ಮಾಡಿಸಿ ಸರ್ಕಾರಕ್ಕೆ ಸೇರಬೇಕಾದ ಭಾಗವನ್ನು ಸೇರಿಸುತ್ತಿದ್ದನು. ಇದಲ್ಲದೆ ಪ್ರತಿ ವರ್ಷದ ಕೊನೆಯಲ್ಲಿಯೂ ಮುಂದಣ ವರ್ಷಕ್ಕೆ ತನ್ನ ಗ್ರಾಮದಿಂದ ಕೊಡಬೇಕಾದ ಭಾಗವನ್ನು ಕ್ಲಪ್ತ ಮಾಡಿಕೊಳ್ಳುತ್ತಿದ್ದನು. ಶಾನುಭೋಗನು ಗೌಡನ ಹೇಳಿಕೆಯ ಪ್ರಕಾರ ಲೆಕ್ಕಗಳನ್ನು ಸಿದ್ಧಪಡಿಸುತ್ತಿದ್ದನು. ಕಮ್ಮಾರನೂ, ಬಡಗಿಯೂ, ವ್ಯವಸಾಯಕ್ಕೆ ಬೇಕಾದ ಕಬ್ಬಿಣದ ಮತ್ತು ಮರದ ಸಾಮಾನುಗಳನ್ನು ಮಾಡಿ ಕೊಡುತ್ತಿದ್ದರು. ಜೋಯಿಸನು ಪಂಚಾಂಗವನ್ನು ನೋಡಿ ಬೀಜಬಿತ್ತುವುದಕ್ಕೂ, ಮದುವೆ ಮುಂತಾದ ಕೆಲಸಗಳಿಗೂ ಒಳ್ಳೆಯ ಮುಹೂರ್ತವನ್ನು ಹೇಳುತ್ತಿದ್ದನು. ತೋಟಿಯು, ಗ್ರಾಮಸ್ಥರಿಗೆ ಬೇಕಾಗುವ ಚರ್ಮದ ಮಿಳಿ ಮುಂತಾದ ಸಾಮಾನುಗಳನ್ನು ಒದಗಿಸಿ ಕೊಡುವುದಲ್ಲದೆ, ಗೌಡನು ಹೇಳಿದ ಇತರ ಕೆಲಸಗಳನ್ನೂ ಮಾಡುತ್ತಿದ್ದನು. ಅಕ್ಕಸಾಲೆಯು ಸರ್ಕಾರಕ್ಕೆ ಸಲ್ಲಬೇಕಾದ ದವಸವನ್ನು ಅಳತೆ ಮಾಡುವುದಲ್ಲದೆ ನಾಣ್ಯಗಳ ಪರೀಕ್ಷೆಯನ್ನೂ ಮಾಡುತ್ತಿದ್ದನು. ತಳವಾರನು ಕಳವಾದರೆ ಕಳ್ಳರನ್ನು ಹಿಡಿದು, ಹೋದ ಪದಾರ್ಥಗಳನ್ನು ಕಂಡುಹಿಡಿಯುತ್ತಿದ್ದನು; ಪರಸ್ಥಳದವರಿಗೆ ಬೇಕಾದ ಸಾಮಾನುಗಳನ್ನೂ ಒದಗಿಸಿ ಕೊಡುತ್ತಿದ್ದನು ಮತ್ತು ಅವರಿಗೆ ದಾರಿಯನ್ನೂ ತೋರಿಸುತ್ತಿದ್ದನು. ನೀರಗಂಟಿಯು ಕೆರೆಯಿಂದ ನೀರುಬಿಟ್ಟು ಕೆರೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದನು. ಕುಂಬಾರ, ಅಗಸ, ಕ್ಷೌರಕ, ಇವರು ತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಕೆಲಸಗಾರರಿಗೆ ಸಿಬಾಯಿ, ಅರ್ಧಾಯ ಎಂಬದಾಗಿ ಪ್ರತಿಯೊಬ್ಬ ರೈತನೂ ಒಂದು ಹೊರೆ ಹುಲ್ಲನ್ನೂ ಒಂದುಹೊರೆ ಭತ್ತವನ್ನೂ ಕೊಡುತ್ತಿದ್ದನು. ಗೌಡ ಶಾನುಭೋಗ ಮೊದಲಾದ ಕೆಲವರಿಗೆ ಮಾನ್ಯದ ಭೂಮಿಗಳು ಬೇರೆ ಇರುತ್ತಿದ್ದುವು. ಕಂದಾಯದಿಂದಲೂ, ಮನೆಯತೆರಿಗೆ, ಕಸಬುತೆರಿಗೆ, ಮಾರುವುದಕ್ಕೆ ತಂದ ಪದಾರ್ಥಗಳಮೇಲೆ ಹಾಕಿದ ಸುಂಕ ಇವುಗಳಿಂದಲೂ ಸರ್ಕಾರಕ್ಕೆ ಹುಟ್ಟುವಳಿಯಾಗುತ್ತಿದ್ದಿತು. ನೀರಿನ ವಸತಿಯು ಚೆನ್ನಾಗಿದ್ದ ಪ್ರದೇಶದಲ್ಲಿ ಕಂದಾಯವನ್ನು ನಾಣ್ಯ ರೂಪವಾಗಿಯೂ ಬೇರೆ ಕಡೆಗಳಲ್ಲಿ ದವಸ ರೂಪವಾಗಿಯೂ ಕೊಡುತ್ತಿದ್ದರು.

೨೮. ವ್ಯವಸಾಯವನ್ನು ಹೆಚ್ಚು ಮಾಡುವುದಕ್ಕೋಸ್ಕರ ಯೋಗ್ಯವಾದ ಭೂಮಿಗಳನ್ನು ಸಾಗುವಳಿಗೆ ತರುವುದಕ್ಕೆ ಒಪ್ಪಿಕೊಂಡವರಿಗೆ ಸರ್ಕಾರದಿಂದ ಮುಂಗಡ ಕೊಡುವ ಪದ್ಧತಿ ಇದ್ದಿತು. ಇದಲ್ಲದೆ ಕೆರೆಗಳನ್ನು ಕಟ್ಟಿಸುತ್ತಿದ್ದರು. ಜನರು ಹೆಚ್ಚಾಗಿ ಇಲ್ಲದ ಸ್ಥಳಗಳಿಗೆ ಇತರ ದೇಶದವರು ಬಂದು ಅಲ್ಲಿ ವಾಸಮಾಡುವಂತೆ ಸಹಾಯ ಮಾಡುತ್ತಿದ್ದರು. ಇದಲ್ಲದೆ ಅನ್ಯದೇಶದ ಪದಾರ್ಥಗಳು ತಮ್ಮ ದೇಶಕ್ಕೆ ಬರುವುದಕ್ಕೂ ತಮ್ಮ ಪದಾರ್ಥಗಳು ಅನ್ಯ

ದೇಶಕ್ಕೆ ಹೋಗುವುದಕ್ಕೂ, ಅನುಕೂಲವಾಗುವಂತೆ ಏರ್ಪಾಡುಗಳನ್ನು ಮಾಡಿದ್ದರು.

೨೯. ವಿಜಯನಗರದ ಅರಸುಗಳು ವಿಸ್ತಾರವಾದ ಕಾಡುಗಳನ್ನು ತಮಗೆ ಬೇಕಾದ ಜನರಿಗೆ ಕೊಡುತ್ತಿದ್ದರು. ಈ ಜನರು ಕಾಡುಗಳನ್ನು ಕಡಿದು ರೈತರನ್ನು ತಂದಿಟ್ಟು ವ್ಯವಸಾಯವನ್ನು ಮಾಡಿಸುತ್ತಿದ್ದರು. ಹೀಗೆ ವ್ಯವಸಾಯಮಾಡಲ್ಪಟ್ಟ ಪ್ರದೇಶಗಳನ್ನು "ಪಾಳಯ" ಅಥವಾ "ಪಾಳೆಯಪಟ್ಟು" ಎಂಬದಾಗಿಯೂ ಅವುಗಳನ್ನು ಸಿದ್ಧಪಡಿಸಿದವರನ್ನು ಪಾಳೆಯಗಾರರೆಂಬದಾಗಿಯೂ ಕರೆಯುತ್ತಿದ್ದರು.

೩೦. ಜೈನರ ಕಾಲದಲ್ಲಿಯೂ ವಿಜಯನಗರದ ಅರಸುಗಳ ಕಾಲದಲ್ಲಿಯೂ ಕನ್ನಡಭಾಷೆಯಲ್ಲಿ ಅನೇಕ ಉತ್ತಮವಾದ ಗ್ರಂಥಗಳು ಹುಟ್ಟಿದುವು. ಕನ್ನಡಭಾಷೆಯಲ್ಲಿ ಮೊದಲು ಗ್ರಂಥವನ್ನು ಬರೆದವರು ಜೈನರು ೧೨ನೆಯ ಶತಮಾನದಿಂದ ಲಿಂಗಾಯಿತ ಕವಿಗಳೂ, ೧೬ ನೆಯ ಶತಮಾನದಿಂದ ಬ್ರಾಹ್ಮಣ ಕವಿಗಳೂ ವಿಶೇಷವಾಗಿ ಕನ್ನಡಭಾಷೆಯಲ್ಲಿ ಗ್ರಂಥಗಳನ್ನು ಬರೆದಿದ್ದಾರೆ.

---

## ೨ನೆಯ ಭಾಗ.

### ಯಾದವಕುಲದ ಅರಸರು.

#### ಯದುರಾಯರು ರಾಜವೊಡೆಯರು.

೩೧. ವಿಜಯನಗರ ಸಂಸ್ಥಾನದ ಬಲವು ತಗ್ಗಿದಮೇಲೆ ಆ ಸಂಸ್ಥಾನದ ಆಶ್ರಯದಲ್ಲಿದ್ದ ಅನೇಕ ರಾಜರೂ, ಪಾಳೆಯಗಾರರೂ, ಸ್ವತಂತ್ರರಾದರು. ಹೀಗಾದವರಲ್ಲಿ ಮೈಸೂರು ರಾಜರೂ ಒಬ್ಬರು. ಕ್ರಿ. ಶ. ೧೩೯೯ ನೆಯ ಇಸವಿಯಲ್ಲಿ ಯದುರಾಯರು, ಕೃಷ್ಣರಾಯರು ಎಂಬ ಇಬ್ಬರು ಅಣ್ಣತಮ್ಮಂದಿರು ದ್ವಾರಕಾ ಪಟ್ಟಣದಿಂದ ಹೊರಟು ನಂಜನಗೂಡಿನ ಬಳಿ ಇರುವ ಹದಿನಾಡೆಂಬ ಸ್ಥಳಕ್ಕೆ ಯಾವುದೋ ಕೆಲಸದಮೇಲೆ ಬಂದು ಸೇರಿದರು. ಈ ಇಬ್ಬರಲ್ಲಿ ಹಿರಿಯರಾದ ಯದುರಾಯರೆಂಬರು ಈಗ ಆಳುತ್ತಿರುವ ಮೈಸೂರ ಮಹಾರಾಜರ ವಂಶಕ್ಕೆ ಮೂಲಪುರುಷರಾದರು.

೩೨. ಯದುರಾಯರಿಗೆ ರಾಜ್ಯ ಸಿಕ್ಕಿದುದು ಬಹಳ ಆಶ್ಚರ್ಯವಾಗಿದೆ ಈಗ ಮೈಸೂರು ಸಂಸ್ಥಾನವೆಂದು ಹೆಸರು ಪಡೆದಿರುವ ದೇಶವೆಲ್ಲಾ ಹಿಂದಣ ಕಾಲದಲ್ಲಿ ಒಂದೇ ಆಳಿಕೆಯಲ್ಲಿರಲಿಲ್ಲವೆಂಬುದು ತಿಳಿದೇ ಇದೆಯಷ್ಟೆ. ಆಗ ಈ ದೇಶವು ಅನೇಕ ಪಾಳೆಯಗಾರರ ಪಾಲಾಗಿದ್ದಿತು. ಇವರೆಲ್ಲರೂ ಶ್ರೀರಂಗ ಪಟ್ಟಣದಲ್ಲಿದ್ದ ವಿಜಯನಗರದ ಅಧಿಕಾರಿಯ ಅಪ್ಪಣೆಯ ಪ್ರಕಾರ ನಡೆಯುತ್ತ, ಆ ಸಂಸ್ಥಾನಕ್ಕೆ ಕಪ್ಪವನ್ನು ಕೊಡುತ್ತಿದ್ದರು. ಮೈಸೂರು ಪಟ್ಟಣಕ್ಕೆ ಸಮೀಪವಾಗಿರುವ ರಂಗಸಮುದ್ರ, ಸೋಸಲೆ, ಅರಕೆರೆ, ಪಿರಿಯಾಪಟ್ಟಣ, ಕಾರುಗಹಳ್ಳಿ, ಹರದನಹಳ್ಳಿ, ಮೂಗೂರು ಇವೇ ಮುಂತಾದ ಸ್ಥಳಗಳಲ್ಲಿ ಬೇರೆ ಬೇರೆ ಪಾಳೆಯಗಾರರು ಅಧಿಕಾರವನ್ನು ಮಾಡುತ್ತಿದ್ದರು, ಇವರಲ್ಲಿ ಒಕ್ಕಟ್ಟಿಲ್ಲದುದರಿಂದ ತಮ್ಮತಮ್ಮಲ್ಲಿ ಜಗಳವನ್ನು ಬೆಳಸಿಕೊಂಡು. ಯಾರಾದರೂ ಬಲಹೀನರಾದರ ಅವರ ಸೀಮೆಯನ್ನು ಇತರರು ಸೇರಿಸಿಕೊಳ್ಳುವುದಕ್ಕೆ ಯತ್ನ ಮಾಡುತ್ತಿದ್ದರು.

೩೩. ಹೀಗಿರುವಾಗ, ೧೩೯೯ ನೆಯ ಇಸವಿಯಲ್ಲಿ ಹದಿನಾಡೆಂಬ ಗ್ರಾಮದಲ್ಲಿ ಆಳುತ್ತಿದ್ದ ಚಾಮರಾಜರೆಂಬವರು ಮರಣವನ್ನು ಹೊಂದಿದುದರಿಂದ ರಾಜ್ಯವು ಅನಾಯಕವಾಯಿತು. ಈ ಸಮಯದಲ್ಲಿ ಕಾರುಗಹಳ್ಳಿ ಪಾಳೆಯಗಾರನಾದ ಮಾರನಾಯಕನೆಂಬವನು ಹದಿನಾಡನ್ನು ಸ್ವಾಧೀನಪಡಿಸಿಕೊಂಡು ಚಾಮರಾಜರ ಮಗಳನ್ನು ತನಗೆ ಮದುವೆ ಮಾಡಿಕೊಡಬೇಕೆಂದು ಬಲಾತ್ಕಾರಮಾಡಿದನು. ಮಾರನಾಯಕನು ತೊರೆಯ ಜಾತಿಯವನಾದುದರಿಂದ ಅವನಿಗೆ ಮಗಳನ್ನು ಕೊಡಲು ಚಾಮರಾಜರ ಹೆಂಡತಿಗೆ ಮನಸ್ಸು ಇರಲಿಲ್ಲ, ಆದರೂ ಆತನಿಗೆ ಅಂಜಿ ಮದುವೆ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದರು. ಈ ವೇಳೆಗೆ ಸರಿಯಾಗಿ ಯದುರಾಯರೂ ಕೃಷ್ಣರಾಯರೂ ಹದಿನಾಡನ್ನು ಸೇರಿದರು. ಅವರು ಅಲ್ಲಿನ ಸಂಗತಿಯನ್ನೆಲ್ಲಾ ಕೇಳಿ ಮಾರನಾಯಕನ ಬಾಧೆಯಿಂದ ತಪ್ಪಿಸುವುದಕ್ಕೆ ತಕ್ಕ ಉಪಾಯವನ್ನು ಯೋಚಿಸಿ ಚಾಮರಾಜರ ಹೆಂಡತಿಗೆ ಹೇಳಿ ಕಳುಹಿಸಿದರು. ಅನಂತರ ಈ ರಾಜಕುಮಾರರು ಗುಟ್ಟಾಗಿ ಅರಮನೆಯನ್ನೂ ಸೇರಿದರು. ಮಾರನಾಯಕನಾದರೋ ಗರ್ವದಿಂದ ಮೈ ಮರೆತಿದ್ದನು. ಆದರೂ ಅವನಿಗೆ ಸಂಶಯವುಂಟಾಗದಂತೆ ಮದುವೆಗೆ ಬೇಕಾದ ಸನ್ನಾಹಗಳು ಮೊದಲಿನಂತೆ ಮಾಡಲ್ಪಡುತ್ತಿದ್ದುವು. ರಾಜಕುಮಾರರು ಸಮಯವನ್ನು ಕಾಯುತ್ತಿದ್ದರು. ಒಂದಾನೊಂದು ದಿವಸ ಮಾರನಾಯಕನು ಊಟಮಾಡುತ್ತಿರುವಕಾಲದಲ್ಲಿ ಇವರು ಅವನ ಮೇಲೆ ಬಿದ್ದು ಅವನನ್ನೂ ಅವನ ಕಡೆಯವರನ್ನೂ ಕೊಂದು ತರುವಾಯ ಕಾರುಗಹಳ್ಳಿಗೆ ಹೋಗಿ ಊರನ್ನು ಸೂರೆಮಾಡಿಕೊಂಡು ಹಿಂದಿರುಗಿದರು. ಅನಂತರ ಯದುರಾಯರು ಚಾಮರಾಜರ ಮಗಳನ್ನು ಮದುವೆ ಮಾಡಿಕೊಂಡರು, ರಾಜ್ಯವೂ ಅವರಿಗೆ ಸೇರಿತು.

೩೪. ಯದುರಾಯರು ಬಹುಕಾಲ ಸುಖದಿಂದ ರಾಜ್ಯವನ್ನಾಳಿ, ಅನೇಕ ಪಾಳೆಯಗಾರರನ್ನು ಜಯಿಸಿ ತಮ್ಮ ದೇಶವನ್ನು ಹೆಚ್ಚಿಸಿದರು. ಇವರು ೧೪೨೩ ನೆಯ ಇಸವಿಯಲ್ಲಿ ಕಾಲವಾದರು. ಅನಂತರ ಇವರ ಸಂತತಿಯವರಾದ ಹಿರಿಯಬೆಟ್ಟದ ಚಾಮರಾಜ ಒಡೆಯರೂ, ತಿಮ್ಮರಾಜ ಒಡೆಯರೂ, ಆರು ಬೆರಳು ಚಾಮರಾಜ ಒಡೆಯರೂ, ಬೆಟ್ಟದ ಚಾಮರಾಜ ಒಡೆಯರೂ ಕ್ರಮವಾಗಿ ರಾಜ್ಯವನ್ನು ಆಳಿದರು. ಬೆಟ್ಟದ ಚಾಮರಾಜ ಒಡೆಯರು ಸಾಯುವ ಕಾಲದಲ್ಲಿ, ರಾಜ್ಯವನ್ನು ತಮ್ಮ ಮೂರು ಜನ ಮಕ್ಕಳಿಗೆ ಹಂಚಿಕೊಟ್ಟರು. ಮೊದಲನೆಯ ಮಗ ತಿಮ್ಮರಾಜ ಒಡೆಯರಿಗೆ ಹೆಮ್ಮನಹಳ್ಳಿಯೂ, ಎರಡನೆಯ ಮಗ ಕೃಷ್ಣರಾಜ ಒಡೆಯರಿಗೆ ಕೆಂಬಲ್ಲೂ, ಮೂರನೆಯ ಮಗ ಬೋಳ ಚಾಮರಾಜ ಒಡೆಯರಿಗೆ ಮೈಸೂರೂ, ಪಾಲು ಬಂದುವು. ಬೋಳ ಚಾಮರಾಜ ಒಡೆಯರ ದಿವಸದವರೆಗೂ ವಿಜಯನಗರದ ಸಂಸ್ಥಾನಕ್ಕೆ ಸಲ್ಲುತ್ತಿದ್ದ ಕಪ್ಪವನ್ನು ಶ್ರೀರಂಗಪಟ್ಟಣದಲ್ಲಿದ್ದ ಆ ಸಂಸ್ಥಾನದ ಅಧಿಕಾರಿಗೆ ಕ್ರಮವಾಗಿ ಸಲ್ಲಿಸುತ್ತಾ ಬಂದರು. ಬೋಳ ಚಾಮರಾಜ ಒಡೆಯರು ಈ ಅಧಿಕಾರಿಯು ಬಲಹೀನನಾಗಿರುವನೆಂದು ತಿಳಿದು, ಕಾಡು ಹಂದಿಗಳ ಕಾಟದಿಂದ ಪೈರು ನಷ್ಟವಾದ ಕಾರಣ ಕಪ್ಪವನ್ನು ಕೊಡಲಾಗುವುದಿಲ್ಲವೆಂದು ಹೇಳಿ ನಿಲ್ಲಿಸಿಬಿಟ್ಟರು. ಇವರು ೧೫೭೬ನೆಯ ಇಸವಿಯಲ್ಲಿ ಮರಣವನ್ನು ಹೊಂದಿದರು. ಇವರಿಗೆ ಗಂಡುಮಕ್ಕಳಿರಲಿಲ್ಲವಾದುದರಿಂದ, ಇವರ ಅಣ್ಣನಾದ ಹೆಮ್ಮನಹಳ್ಳಿ ತಿಮ್ಮರಾಜ ಒಡೆಯರ ಮಗ ಬೆಟ್ಟದ ಚಾಮರಾಜ ಒಡೆಯರಿಗೆ ಪಟ್ಟಾಭಿಷೇಕವಾಯಿತು. ಆದರೆ ಇವರು ಎರಡು ವರ್ಷಗಳವರೆಗೆ ಆಳಿ, ಅನಂತರ ರಾಜ್ಯವನ್ನು ತಮ್ಮ ತಮ್ಮಂದಿರಾದ ರಾಜ ಒಡೆಯರಿಗೆ ಒಪ್ಪಿಸಿ, ತಾವು ಗುಂಡಲಪೇಟೆ ಬಳಿ ಇರುವ ತೆರಕಣಾಂಬಿಗೆ ಹೊರಟುಹೋದರು.

---

## ೨ನೆಯ ಪ್ರಕರಣ.

### ರಾಜಒಡೆಯರು, ಚಾಮರಾಜ ಒಡೆಯರು.

೩೫. ರಾಜ ಒಡೆಯರು ೧೫೭೮ನೆಯ ಇಸವಿಯಿಂದ ೧೬೧೭ರವರೆಗೆ ಆಳಿದರು. ಇವರು ಅನೇಕ ಸ್ಥಳಗಳನ್ನು ಗೆದ್ದು ತಮ್ಮ ದೇಶವನ್ನು ಹೆಚ್ಚಿಸಿ, ಧರ್ಮದಿಂದಲೂ, ಪ್ರೀತಿಯಿಂದಲೂ ಪ್ರಜೆಗಳನ್ನು ಸಂರಕ್ಷಣೆ ಮಾಡಿದರು. ೧೬೦೫ ನೆಯ ವರುಷದಲ್ಲಿ ಕಾರುಗಹಳ್ಳಿ ವೀರರಾಜಯ್ಯನು ರಾಜ ಒಡೆಯರನ್ನು ಲಕ್ಷ್ಯಮಾಡದೆ ಅವರೆದುರಿಗೆ ಓಲಗ, ತಾಳ, ಮೇಳಗಳೊಡನೆ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಅಟ್ಟಹಾಸದಿಂದ ಹೋದನು. ಇದರಿಂದ ರಾಜ ಒಡೆಯರಿಗೆ ಅವನ ಮೇಲೆ ಕೋಪವುಂಟಾಯಿತು. ಅವರು

ಅವನನ್ನು ಕೈಸೆರೆ ಹಿಡಿಸಿ, ಕಿವಿ, ಮೂಗುಗಳನ್ನು ಕೊಯಿಸಿ, ಕಾರುಗಹಳ್ಳಿಯ ಕೋಟೆಯನ್ನು ಕೆಡವಿಸಿ, ಅಲ್ಲಿ ಹರಳನ್ನು ಬಿತ್ತಿಸಿದರು.

೩೬. ೧೬೧೦ ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಅಧಿಕಾರಿ ಶ್ರೀರಂಗರಾಯನಿಗೆ ಬೆನ್ನುಫಣಿ ಎಂಬ ರೋಗವುಂಟಾಗಲು, ಆತನು ತನ್ನ ದೇಶಕೋಶಗಳನ್ನು ತನ್ನ ಜ್ಞಾತಿಯಾದ ಉಮ್ಮತ್ತೂರು ಪಾಳೆಯಗಾರನಿಗೆ ಕೊಡಬೇಕೆಂದಿದ್ದನು. ಆದರೆ ರಾಜ ಒಡೆಯರು ಪ್ರಬಲರಾದುದರಿಂದ ಕಡೆಗೆ ಎಲ್ಲವನ್ನೂ ಅವರಿಗೆ ಕೊಡಬೇಕಾಗಿ ಬಂದಿತು. ಆನಂತರ ಶ್ರೀರಂಗರಾಯನು ತಲಕಾಡಿಗೆ ಹೋಗಿ ಅಲ್ಲಿ ಕೆಲವು ದಿನವಿದ್ದು ಮೃತನಾದನು. ಶ್ರೀರಂಗಪಟ್ಟಣವು ಕೈ ಸೇರಿದಮೇಲೆ ರಾಜಒಡೆಯರು ಮೈಸೂರನ್ನು ಬಿಟ್ಟು ಶ್ರೀರಂಗಪಟ್ಟಣವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು.

೩೭ "ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ, ಮೈಸೂರು ದೊರೆಗೆ ಮಕ್ಕಳಿಲ್ಲದೆ ಹೋಗಲಿ" ಎಂಬ ಹೇಳಿಕೆಯು ರಾಜ ಒಡೆಯರ ಕಾಲದಲ್ಲಿ ಹುಟ್ಟಿತೆಂದು ಹೇಳುತ್ತಾರೆ. ಶ್ರೀರಂಗರಾಯನ ಮರಣಾನಂತರ ಅವನ ಹೆಂಡತಿ ಅಲಮೇಲಮ್ಮ [illegible] ನಗಗಳನ್ನು ಶ್ರೀರಂಗಪಟ್ಟಣದ ರಂಗನಾಯಕಿಯಮ್ಮನವರಿಗೆ ಧರಿಸುವುದಕ್ಕೆ ಕೊಡಬೇಕೆಂದು ಬಲಾತ್ಕಾರಪಡಿಸಿದುದರಿಂದ, ಅವಳು ಅದಕ್ಕೊಪ್ಪದೆ ನಗಗಳನ್ನು ತನ್ನ ಸೀರೆಯ ಸೆರಗಿನಲ್ಲಿ ಕಟ್ಟಿಕೊಂಡು ಮೇಲೆ ಬರದಿರುವಂತೆ ಹೇಳಿಕೊಂಡು ಮಾಲಂಗಿಯ ಬಳಿ ಕಾವೇರಿಯಲ್ಲಿ ಧುಮಿಕಿದಳೆಂದು ಹೇಳುತ್ತಾರೆ. ಆದರೆ ಈ ಸಂಗತಿಗಳು ನಿಜವೋ ಸುಳ್ಳೋ ಗೊತ್ತಾಗಿ ಹೇಳುವುದಕ್ಕಾಗುವುದಿಲ್ಲ.

೩೮. ರಾಜ ಒಡೆಯರ ಅನಂತರ ಅವರ ಮಗನ ಮಗ ಚಾಮರಾಜ ಒಡೆಯರಿಗೆ ಪಟ್ಟವಾಯಿತು. ಆದರೆ ಇವರಿಗೆ ಬಾಲ್ಯವಾಗಿದ್ದುದರಿಂದ ರಾಜ ಒಡೆಯರ ಅಣ್ಣನ ಮಗ ದಳವಾಯಿ ಬೆಟ್ಟದರಸಿನವರು ಆಡಳಿತಗಳನ್ನು ನೋಡುವುದಕ್ಕ ಉಪಕ್ರಮಿಸಿದರು. ಹೀಗೆ ಕೆಲವು ದಿವಸಗಳು ಕಳೆದನಂತರ ಇವರು ಅಧಿಕಾರದ ರುಚಿಯನ್ನು ಕಂಡು, ಅದನ್ನು ತಮ್ಮಲ್ಲಿಯೇ ನಿಲ್ಲಿಸಿಕೊಳ್ಳುವುದಕ್ಕೆ ಯತ್ನ ಮಾಡಿದರು. ಆದರೆ ಚಾಮರಾಜ ಒಡೆಯರು ಈ ಯತ್ನವನ್ನು ಸಾಗದಂತೆ ಮಾಡಿ ಬೆಟ್ಟದರಸಿನವರ ಕಣ್ಣು ಕೀಳಿಸಿ ಸೆರೆಯಲ್ಲಿಡಿಸಿದರು. ಇವರ ಆಳಿಕೆಯಲ್ಲಿ ಹೆಗ್ಗಡದೇವನಕೋಟೆ, ಚೆನ್ನಪಟ್ಣ, ನಾಗಮಂಗಲ, ಕಾನಕಾನಹಳ್ಳಿ, ಚೆನ್ನರಾಯಪಟ್ಣ —ಈ ಸ್ಥಳಗಳು ಮೈಸೂರು ಸೀಮೆಗೆ ಸೇರಿದುವು.

## ೩ ನೆಯ ಪ್ರಕರಣ.

### ಇಮ್ಮಡಿ ರಾಜ ಒಡೆಯರು, ಕಂಠೀರವ ನರಸರಾಜ ಒಡೆಯರು, ದೊಡ್ಡ ದೇವರಾಜ ಒಡೆಯರು.

೩೯. ಚಾಮರಾಜ ಒಡೆಯರು ೧೬೩೭ ನೆಯ ಇಸವಿಯಲ್ಲಿ ಕಾಲವಾಗಲು ರಾಜ ಒಡೆಯರ ಹಿರಿಯ ಹೆಂಡತಿಯ ಮಗ ಇಮ್ಮಡಿ ರಾಜ ಒಡೆಯರಿಗೆ ಪಟ್ಟವಾಯಿತು. ಆದರೆ ಇವರಿಗೂ ದಳವಾಯಿ ವಿಕ್ರಮರಾಯನಿಗೂ ಮನಸ್ತಾಪ ಹುಟ್ಟಿದುದರಿಂದ, ವಿಕ್ರಮರಾಯನು ಸ್ವಲ್ಪ ದಿವಸಗಳಲ್ಲಿಯೇ ದೊರೆಗಳಿಗೆ ವಿಷವನ್ನು ಹಾಕಿಸಿ ಕೊಲ್ಲಿಸಿದನು. ಅನಂತರ ಬೆಟ್ಟದ ಚಾಮರಾಜ ಒಡೆಯರ ಮಗ ಕಂಠೀರವ ನರಸರಾಜ ಒಡೆಯರಿಗೆ ಪಟ್ಟವನ್ನು ಕಟ್ಟಿದರು.

೪೦. ಕಂಠೀರವ ನರಸರಾಜ ಒಡೆಯರ ಸಾಮರ್ಥ್ಯವು ಮೈಸೂರು ದೇಶದವರ ಜ್ಞಾಪಕದಲ್ಲಿ ಈಗಲೂ ಇದೆ. ಪಟ್ಟವಾಗುವುದಕ್ಕೆ ಮುಂಚೆ ಇವರು ತಮ್ಮ ತಂದೆಗಳ ಕೂಡ ತೆರಕಣಾಂಬಿಯಲ್ಲಿರುವಾಗ, ಒಂದು ದಿವಸ ಒಬ್ಬ ಬ್ರಾಹ್ಮಣನು ಅಲ್ಲಿಗೆ ಬಂದು ತಿರುಚನಾಪಳ್ಳಿಯ ಅರಸಿನ ಬಳಿ ಬಹು ಬಲಿಷ್ಠನಾದ ಒಬ್ಬ ಜಟ್ಟಿ ಇರುವನೆಂಬದಾಗಿಯೂ, ಅವನೊಡನೆ ಯಾರೂ ಕಾಳಗ ಮಾಡುವವರು ಇಲ್ಲವೆಂಬದಾಗಿಯೂ, ಹೇಳಿದನು. ಕಂಠೀರವ ನರಸರಾಜ ಒಡೆಯರು ಆ ಮಾತನ್ನು ಕೇಳಿ ಬೇರೆ ವೇಷದಿಂದ ತಿರುಚನಾಪಳ್ಳಿಗೆ ಗುಟ್ಟಾಗಿ ಹೋಗಿ, ಆ ಜಟ್ಟಿಯ ಸಂಗಡ ಕಾಳಗಮಾಡಿ, ಅವನನ್ನು ಸೋಲಿಸಿದರು.

೪೧. ಇಮ್ಮಡಿ ರಾಜ ಒಡೆಯರ ಕಾಲದಲ್ಲಿ ನಡೆದಂತೆಯೇ ಕಂಠೀರವ ನರಸರಾಜ ಒಡೆಯರಿಗೂ ದಳವಾಯಿ ವಿಕ್ರಮರಾಯನಿಗೂ ಮನಸ್ತಾಪ ವುಂಟಾಯಿತು. ಆದರೆ ಈ ದೊರೆಗಳು ವಿಕ್ರಮರಾಯನಿಗೆ ಸಗ್ಗಲಿಲ್ಲ. ಒಂದಾನೊಂದು ದಿವಸ ವಿಕ್ರಮರಾಯನು ರಾತ್ರಿ ಅರಮನೆಯಿಂದ ಹೊರಟು ತನ್ನ ಮನೆಯನ್ನು ಪ್ರವೇಶಮಾಡುವಾಗ ಅಲ್ಲಿ ಹೊಂಚುಕಾದಿದ್ದ ಇಬ್ಬರು ಆಳುಗಳು ಅವನನ್ನು ಕೊಂದು ಹಾಕಿದರು.

೪೨. ದ್ವಾರಸಮುದ್ರವು ಹಾಳಾದ ನಂತರ ನಿಂತಿದ್ದ ಮುಸಲ್ಮಾನರ ಹಾವಳಿಯು ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ತಿರುಗಿ ಪ್ರಾರಂಭವಾಯಿತು. ಬಿಜಾಪುರ ಸಂಸ್ಥಾನದ ಸೇನಾಪತಿಯಾದ ಉಲ್ಲಾಖಾನನು ಎಲಹಂಕದ ಪಾಳೆಯಗಾರನಾದ ಕೆಂಪೇಗೌಡನಿಂದ ಬೆಂಗಳೂರನ್ನೂ ಚಿಕ್ಕರಾಯನೆಂಬ ಪಾಳೆಯಗಾರನಿಂದ ಹೊಸಕೋಟೆ, ಕೋಲಾರ

ಮುಂತಾದ ಸ್ಥಳಗಳನ್ನೂ, ಮತ್ತು ಚಿತ್ರದುರ್ಗ, ದೊಡ್ಡಬಳ್ಳಾಪುರ, ಸೀರ್ಯ ಮುಂತಾದ ಸ್ಥಳಗಳನ್ನೂ ಜಯಿಸಿ, ೧೬೪೦ನೆಯಇಸವಿಯಲ್ಲಿ ಶ್ರೀರಂಗಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿದನು. ನರಸರಾಜ ಒಡೆಯರು ಶತ್ರುಗಳ ಮೇಲೆಬಿದ್ದು ಬಹಳವಾಗಿ ಯುದ್ಧಮಾಡಿದರು. ಖಾನನು ಭಯಪಟ್ಟು ಸಂಧಿ ಮಾಡಿಕೊಂಡನು. ಈ ಸಂಧಿಯ ಪ್ರಕಾರ ಕಾವೇರೀನದಿಗೆ ದಕ್ಷಿಣದಲ್ಲಿರುವ ಸೀಮೆಯೆಲ್ಲ ಮೈಸೂರು ದೊರೆಗಳದೇ ಎಂದೂ, ಉತ್ತರದಲ್ಲಿದ್ದ ಸೀಮೆಯ ಹುಟ್ಟುವಳಿಯಲ್ಲಿ ವೆಚ್ಚ ಹೋಗಲಾಗಿ ನಿಂತ ಹಣವು ಬಿಜಾಪುರದ ಸಂಸ್ಥಾನಕ್ಕೆ ಸಲ್ಲತಕ್ಕದೆಂದೂ ಗೊತ್ತಾಯಿತು.

೪೩. ಗ್ರಾಮಗಳಲ್ಲಿ ಹಣಗಾರರಾದ ಗೌಡನೇ ಮೊದಲಾದವರು ಪುಂಡು ಮಾಡುತ್ತಿದ್ದರು. ನರಸರಾಜ ಒಡೆಯರು ಅಂತಹವರಿಂದ ಕಾಣಿಕೆ ಹಣವನ್ನು ತೆಗೆದುಕೊಂಡು ಅವರ ಬಲವನ್ನು ಕಡಿಮೆಮಾಡಿದರು. ಇವರಿಗೆ ಮುಂಚೆ ಇದ್ದ ದೊರೆಗಳು ನಾಣ್ಯವನ್ನು ಹಾಕುವ ವಾಡಿಕೆ ಇಟ್ಟುಕೊಂಡಿರಲಿಲ್ಲ. ಇವರು ಒಂದು ಟಂಕಸಾಲೆಯನ್ನು ಏರ್ಪಡಿಸಿ, ಕಂಠೀರವರಾಯ ಹಣ, ಕಂಠೀರವರಾಯ ವರಹ ಎಂಬ ನಾಣ್ಯಗಳನ್ನು ಹಾಕಿಸಿದರು. ಈ ದೊರೆಗಳ ಕಾಲದಲ್ಲಿ ಕುಣಿಗಲು ಸತ್ಯಮಂಗಲ ಮುಂತಾದ ಸ್ಥಳಗಳು ಮೈಸೂರು ಸೀಮೆಗೆ ಸೇರಿದುವು.

೪೪. ಹೀಗೆ ಪ್ರಸಿದ್ಧರಾದ ಕಂಠೀರವ ನರಸರಾಜ ಒಡೆಯರು ೧೬೫೯ ನೆಯ ಇಸವಿಯಲ್ಲಿ ಮರಣವನ್ನು ಹೊಂದಿದರು. ಬಳಿಕ ಇವರ ದತ್ತುಮಗನಾದ ದೊಡ್ಡ ದೇವರಾಜ ಒಡೆಯರಿಗೆ ಪಟ್ಟವಾಯಿತು. ಇವರಿಗೆ ಪಟ್ಟವಾದ ವರುಷದಲ್ಲಿ ಇಕ್ಕೇರಿ ಸಂಸ್ಥಾನದ ದೊರೆಯಾದ ಶಿವಪ್ಪನಾಯಕನು ವಿಜಯನಗರದ ವಂಶದ ಅರಸನ ಪಕ್ಷವನ್ನು ವಹಿಸಿ, ಸೈನ್ಯದೊಡನೆ ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು; ಆದರೆ ಈತನು ಜಯವನ್ನು ಪಡೆಯದೆ ಹಿಂದಿರುಗಬೇಕಾಯಿತು. ಇದೇ ಪ್ರಕಾರ ಮಧುರೆಯ ನಾಯಕನು ಈ ದೇಶವನ್ನು ಜಯಿಸಬೇಕೆಂದು ಮಾಡಿದ ಪ್ರಯತ್ನವೂ ಸಾಗಲಿಲ್ಲ. ಈ ಆಳಿಕೆಯಲ್ಲಿ ಹಾಸನ, ಚಿಕ್ಕನಾಯಕನ ಹಳ್ಳಿ, ಈರೋಡು, ಧಾರಾಪುರ ಮುಂತಾದ ಸ್ಥಳಗಳು ಮೈಸೂರಿಗೆ ಸೇರಿದುವು.

೪೫. ದೊಡ್ಡ ದೇವರಾಜ ಒಡೆಯರು ತಮ್ಮ ಸೀಮೆಯ ಮುಖ್ಯ ಮಾರ್ಗಗಳಲ್ಲಿ ಅನ್ನ ಸತ್ರಗಳನ್ನಿಡಿಸಿ, ಅಲ್ಲಲ್ಲಿ ಜನರು ಇಳಿದುಕೊಳ್ಳುವುದಕ್ಕೆ ಕಲ್ಲುಮಂಟಪಗಳನ್ನು ಕಟ್ಟಿಸಿದರು. ಮೈಸೂರು ಬಳಿ ಇರುವ ಚಾಮುಂಡೇಶ್ವರಿ ಬೆಟ್ಟಕ್ಕೆ ಮೆಟ್ಟಲುಗಳನ್ನು ಕಟ್ಟಿಸಿ ಬೆಟ್ಟದ ಮಧ್ಯದ ಒಂದು ಒಂದೆಯಲ್ಲಿ ಒಂದು ದೊಡ್ಡ ಬಸವನನ್ನು ಕೆತ್ತಿಸಿದರು. ಈ ಮೆಟ್ಟಲುಗಳೂ, ಬಸವನೂ ಈಗಲೂ ಇವೆ.

೪೬. ೧೬೭೨ ನೆಯ ಇಸವಿಯಲ್ಲಿ ಇವರು ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದಾಗ ಅಲ್ಲಿ ಮೃತರಾದರು. ಇವರ ಕಾಲದಲ್ಲಿ ಮೈಸೂರು ರಾಜ್ಯವು

ಪೂರ್ವಪಶ್ಚಿಮ — ಶಾಲ್ಯದಿಂದ ಸಕ್ಕರೆಪಟ್ಟಣದವರೆಗೂ, ದಕ್ಷಿಣೋತ್ತರ ಧಾರಾಪುರದಿಂದ ಚಿಕ್ಕನಾಯಕನ ಹಳ್ಳಿಯವರೆಗೂ ವಿಸ್ತರಿಸಿದ್ದಿತು.

---

## ೪ ನೇಯ ಪ್ರಕರಣ.

### ಚಿಕ್ಕದೇವರಾಜ ಒಡೆಯರು.

೪೭. ದೊಡ್ಡದೇವರಾಜ ಒಡೆಯರ ಅನಂತರ ಇವರ ದತ್ತುಮಗ ಚಿಕ್ಕದೇವರಾಜ ಒಡೆಯರಿಗೆ ರಾಜ್ಯಾಧಿಕಾರವಾಯಿತು. ಇವರು ಬಹು ಸಾಮರ್ಥ್ಯರಾಗಿದ್ದರು ಅನ್ಯ ದೇಶಕ್ಕೆ ಸೇರಿದ್ದ ಅನೇಕ ಸ್ಥಳಗಳನ್ನು ಮೈಸೂರಿಗೆ ಸೇರಿಸಿಕೊಂಡರು. ದೇಶದ ಒಳ ಆಡಳಿತಗಳಲ್ಲಿ ಹೊಸದಾಗಿ ಅನೇಕ ಏರ್ಪಾಡುಗಳನ್ನು ಮಾಡಿದರು. ಇವರ ಕಾಲದಲ್ಲಿ ಈ ಸಂಸ್ಥಾನವು ಮೊದಲಿಗಿಂತಲೂ ಪ್ರಬಲವಾದ ಸ್ಥಿತಿಗೆ ಬಂದಿತು.

೪೮ ಇವರು ಮೊಗಲರೊಡನೆ ಸ್ನೇಹವನ್ನು ಬೆಳಸಿ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಂಡರು. ಬಿಜಾಪುರ ಸಂಸ್ಥಾನದ ಸೇನಾಪತಿಯಾದ ಉಲ್ಲಾಖಾನನು ಬೆಂಗಳೂರು ಮುಂತಾದ ಸ್ಥಳಗಳನ್ನು ಜಯಿಸಿದ್ದ ಸಂಗತಿಯು ಹಿಂದೆಯೇ ಹೇಳಲ್ಪಟ್ಟಿದೆಯಷ್ಟೆ. ಹಾಗೆ ಜಯಿಸಿದ್ದ ಸ್ಥಳಗಳಿಗೆಲ್ಲಾ ಪ್ರಸಿದ್ಧನಾದ ಶಿವಾಜಿಯ ತಂದೆ ಷಾಜಿ ಯೆಂಬವನು ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟಿದ್ದನು. ಆತನಿಗೆ ಬೆಂಗಳೂರನ್ನು ಜಹಗೀರಾಗಿ ಕೊಟ್ಟಿದ್ದರು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಬಿಜಾಪುರವನ್ನು ಮೊಗಲ್ ಚಕ್ರವರ್ತಿ ಔರಂಗ್‌ಜೇಬನು ಜಯಿಸಿ ಸ್ವಾಧೀನಪಡಿಸಿಕೊಂಡನು. ಇದಕ್ಕೆ ಮುಂಚೆ ಷಾಜಿಯು ತೀರಿಹೋಗಿ ಅವನ ಮಗ ವೆಂಕೋಜಿಯು ತಂಜಾವೂರಲ್ಲಿ ಇದ್ದನು. ತಂಜಾವೂರಿಗೂ ಬೆಂಗಳೂರಿಗೂ ಬಹಳ ದೂರವಾದುದರಿಂದ ವೆಂಕೋಜಿಯು ಬೆಂಗಳೂರನ್ನು ಉಳಿಸಿಕೊಳ್ಳುವುದು ಕಷ್ಟವೆಂದು ಯೋಚಿಸಿ ಅದನ್ನು ಮೂರು ಲಕ್ಷ ರೂಪಾಯಿಗಳಿಗೆ ಚಿಕ್ಕದೇವರಾಜ ಒಡೆಯರಿಗೆ ಕ್ರಯಕ್ಕೆ ಕೊಡುವುದಾಗಿ ಮಾತು ಮಾಡಿಕೊಂಡನು. ಆದರೆ ಹಣವು ಸಲ್ಲುವುದರೊಳಗಾಗಿ ಮೊಗಲರ ಕಡೆ ಸೇನಾಪತಿಯಾದ ಖಾಸಿಂಖಾನನು ಬಂದು ಆ ಸ್ಥಳವನ್ನು ಸ್ವಾಧೀನಮಾಡಿಕೊಂಡನು ಅನಂತರ ದೊರೆಗಳು ಅದೇ ಹಣವನ್ನು ಖಾಸಿಂ ಖಾನನಿಗೆ ಕೊಟ್ಟು ೧೬೮೭ ನೆಯ ಇಸವಿಯಲ್ಲಿ ಬೆಂಗಳೂರನ್ನು ಮೈಸೂರಿಗೆ ಸೇರಿಸಿಕೊಂಡರು. ಇದೇ ಕಾಲದಲ್ಲಿ ದೊಡ್ಡಬಳ್ಳಾಪುರ, ಕೋಲಾರ, ಸೀರ್ಯ ಮುಂತಾದ ಸ್ಥಳಗಳು ಮೊಗಲರಿಗೆ ಸೇರಿದುವು. ಖಾಸಿಂಖಾನನು ಸೀರ್ಯದಲ್ಲಿ ಫೌಜುದಾರನಾಗಿ ನಿಂತುಕೊಂಡನು. ಮೈಸೂರು ಈತನ ಮೇಲ್ವಿಚಾರಣೆಗೆ ಒಳಪಟ್ಟಿತು. ಚಿಕ್ಕದೇವರಾಜ ಒಡೆಯರು ಖಾಸಿಂ ಖಾನನ ಮೂಲಕ ಔರಂಗ್‌ಜೇಬನೊಡನೆ

ಸ್ನೇಹವನ್ನು ಬಳಸಿ ಇತರ ಕಡೆಯಲ್ಲಿಯೂ ಸೀಮೆಯನ್ನು ಹೆಚ್ಚಿಸಿಕೊಂಡರು. ಮದ್ದಗಿರಿ, ತುಮಕೂರು, ಚಿಕ್ಕಮಗಳೂರು ಮುಂತಾದ ಸ್ಥಳಗಳು ಈ ಕಾಲದಲ್ಲಿ ಮೈಸೂರಿಗೆ ಸೇರಿದುವು.

೪೯. ೧೬೭೭ ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಬಹಳವಾಗಿ ಹಣ ಸಿಕ್ಕುವುದೆಂಬ ಆಸೆಯಿಂದ ಮರಾಟೆ ಸೈನ್ಯವೊಂದು ಆದರ ಸಮೀಪಕ್ಕೆ ಬಂದಿಳಿಯಿತು. ಆ ಕಾಲದಲ್ಲಿ ಮೈಸೂರು ಸೈನ್ಯವು ಮಧುರೆಯ ನಾಯಕನಿಗೆ ಸೇರಿದ್ದ ತಿರುಚನಾಪಳ್ಳಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಹೋಗಿದ್ಧಿತು. ಆದರೆ ಶ್ರೀರಂಗಪಟ್ಟಣದೊಳಗೆ ಮರಾಟೆಯವರು ಪ್ರವೇಶ ಮಾಡುವಷ್ಟರಲ್ಲಿಯೇ ತಿರುಚನಾಪಳ್ಳಿಯಿಂದ ದಳವಾಯಿ ಕುಮಾರ್ಯಯ್ಯನ ಮಗ ದೊಡ್ಡಯ್ಯನು, ಸ್ವಲ್ಪ ಸೈನ್ಯದೊಡನೆ ಬಂದು ಒಂದು ಉಪಾಯದಿಂದ ಮರಾಟೆಯವರನ್ನು ಸೋಲಿಸಿದನು. ಈತನು ರಾತ್ರಿಯಲ್ಲಿ ಎತ್ತಿನ ಕೊಂಬುಗಳಿಗೆ ಪಂಜುಗಳನ್ನು ಹಚ್ಚಿಸಿ ಕಟ್ಟಿಸಿ ಆ ಹಿಂಡನ್ನು ಮರಾಟೆಯವರ ಪಾಳಯಕ್ಕೆ ಎದುರಾಗಿ ಹೊಡೆಯಿಸಿದನು. ಈ ಎತ್ತುಗಳು ಬರುತ್ತಿದ್ದ ದಿಕ್ಕಿನಿಂದಲೇ ಮೈಸೂರು ಸೈನ್ಯವು ಬರುತ್ತಿದೆ ಎಂದು ಮರಾಟೆಯವರು ಭ್ರಮೆಗೊಂಡಿರಲು, ದೊಡ್ಡಯ್ಯನು ಹಿಂದುಗಡೆಯಿಂದ ಸೈನ್ಯವನ್ನು ತೆಗೆದುಕೊಂಡು ಹೋಗಿ ಅವರ ಮೇಲೆಬಿದ್ದು ಅವರನ್ನು ಚದರಿಸಿದನು; ಇದಲ್ಲದೆ ಇಬ್ಬರು ಮರಾಟೆ ಸರದಾರರ ತಲೆಗಳನ್ನು ಕಡಿದು ಶ್ರೀರಂಗಪಟ್ಟಣದ ಕೋಟೆಯ ಬಾಗಿಲಿಗೊಂದನ್ನೂ, ಮೈಸೂರು ಕೋಟೆಯ ಬಾಗಿಲಿಗೆ ಮತ್ತೊಂದನ್ನೂ ಕಟ್ಟಿಸಿದನು.

೫೦. ಚಿಕ್ಕದೇವರಾಜ ಒಡೆಯರಿಗೆ ಆಪ್ತನಾಗಿ ಇದ್ದ ಖಾಸಿಂ ಖಾನನು ತೀರಿಹೋದನು. ಆಗ ಔರಂಗ್‌ಜೇಬನ ಬಳಿ ಮೈಸೂರು ಕಡೆಯವರು ಯಾರೂ ಇರಲಿಲ್ಲ. ಆದುದರಿಂದ, ೧೬೯೯ ನೆಯ ಇಸವಿಯಲ್ಲಿ ದೊರೆಗಳು, ಕರಣಿಕ ಲಿಂಗಣ್ಣಯ್ಯನೆಂಬವನನ್ನು ಅಹಮದ್ ನಗರದಲ್ಲಿದ್ದ ಮೊಗಲ್‌ಚಕ್ರವರ್ತಿಯ ಬಳಿಗೆ ಕಳುಹಿಸಿದರು. ಲಿಂಗಣ್ಣಯ್ಯನು ಆ ಚಕ್ರವರ್ತಿಯನ್ನು ಕಂಡು ತಾನು ತೆಗೆದುಕೊಂಡು ಹೋಗಿದ್ದ ಮರ್ಯಾದೆಗಳನ್ನೆಲ್ಲಾ ಒಪ್ಪಿಸಿದನು. ಔರಂಗಜೇಬನು ದೊರೆಗಳಿಗೆ 'ರಾಜಾ ಜಗದೇಕ' ಎಂಬ ಬಿರುದನ್ನೂ, ಮೊಗಲ್ ಸಂಸ್ಥಾನದಲ್ಲಿದ್ದಂತೆ ನಗಾರಿ ನವಪತ್ತು ಮರ್ಯಾದೆಗಳನ್ನೂ ಕೊಟ್ಟು ಒಂದು ದಂತದ ಸಿಂಹಾಸನವನ್ನೂ ಕಳುಹಿಸಿಕೊಟ್ಟನು.

೫೧. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಹೊಸದಾಗಿ ಕೆಲವು ತೆರಿಗೆಗಳು ಏರ್ಪಟ್ಟುವು. ಇದರಿಂದ ರೈತರಿಗೆ ಅಸಮಾಧಾನವುಂಟಾಯಿತು. "ಕಾಡುಭೂಮಿಯನ್ನು ಬಸವಣ್ಣ ಉಳುತ್ತಾನೆ. ದೇವೇಂದ್ರ ಮಳೆಯನ್ನು ಕರೆಯುತ್ತಾನೆ, ನಾವು ಕಷ್ಟಪಟ್ಟು ಬೆಳೆಮಾಡಿ ಇವರಿಗೇತಕ್ಕೆ ತೆರಿಗೆ ಕೊಡಬೇಕು" ? ಎಂದು ಪುಂಡು ಜನರು ಹೇಳತೊಡಗಿದರು. ಇದಲ್ಲದೆ

ದೊರೆಗಳ ಬಳಿ ಮಂತ್ರಿಯಾಗಿದ್ದ ಜೈನರ ವಿಶಾಲಾಕ್ಷ ಪಂಡಿತನು ಅವರಬಳಿ ಯಲ್ಲಿ ಶಿವಾಚಾರದವರ ಪ್ರಾಬಲ್ಯವನ್ನು ತಪ್ಪಿಸಿದನು. ಆದುದರಿಂದ ಜಂಗ ಮರು ರೈತರೊಡನೆ ಸೇರಿ ಸರ್ಕಾರದ ಭಯವನ್ನು ಬಿಟ್ಟು ನಡೆಯುವಂತೆ ಅವರಿಗೆ ಹೇಳಿಕೊಟ್ಟರು.

೫೨. ಹೀಗೆ ಹೇಳಿಕೊಟ್ಟ ಜಂಗಮರನ್ನು ಗುಟ್ಟಾಗಿ ಕೊಲ್ಲಿಸಬೇ ಕೆಂದು ವಿಶಾಲಾಕ್ಷ ಪಂಡಿತನು ಆಲೋಚಿಸಿ, ಅವರನ್ನು ನಂಜನಗೂಡಿನಲ್ಲಿ ಸೇರಿಸಿದನು ಅನಂತರ ಅಲ್ಲಿ ಒಬ್ಬೊಬ್ಬರನ್ನಾಗಿ ಕರೆದು ಅವರ ಸಂಕಟ ಗಳನ್ನು ವಿಚಾರಿಸುವನಂತೆ ತೋರ್ಪಡಿಸಿಕೊಂಡು ಒಬ್ಬೊಬ್ಬರಾಗಿ ಬರು ವಂತೆ ಅವರನ್ನು ತನ್ನ ಕಡೆಯವರ ಸಂಗಡ ಮರೆಯಾದ ಒಂದು ಸ್ಥಳಕ್ಕೆ ಕಳುಹಿಸಿ ಅಲ್ಲಿ ಕಟುಕರಿಂದ ಅವರನ್ನು ಕೊಲ್ಲಿಸುತ್ತಾ ಬಂದನು. ಹೀಗೆ ಸುಮಾರು ನಾನೂರು ಜನಗಳನ್ನು ಕೊಲ್ಲಿಸಿದನು ಇದಲ್ಲದೆ ದೇಶದಲ್ಲಿದ್ದ ಅನೇಕ ಜಂಗಮರ ಮಠಗಳನ್ನು ಹಾಳುಮಾಡಿಸಿದನು ಇದರಿಂದ ರೈತರು ಹೆದರಿ ಹೋ ಸತೆರಿಗೆಗಳೆಲ್ಲವನ್ನೂ ಕೂಡುತ್ತಾ ಬಂದರು ಆದರೆ ವಿಶಾಲಾ ಕ್ಷಪಂಡಿತನು ಅವರ ದ್ವೇಷಕ್ಕೆ ಗುರಿಯಾದನು ಅವನನ್ನು ಕೆಲವರು ಸ್ವಲ್ಪ ದಿವಸಗಳಲ್ಲಿಯೇ ಹೊಡೆದು ಕೊಂದುಹಾಕಿದರು ಅನಂತರ ತಿರುಮಲ ಯ್ಯಂಗಾರ್ಯರೆಂಬವರಿಗೆ ಮಂತ್ರಿತ್ವವಾಯಿತು

೫೩ ಚಿಕ್ಕದೇವರಾಜ ಒಡೆಯರವರಕಾಲದಲ್ಲಿ ಅಂಚೆಯ ಇಲಾಖೆ ಯೊಂದು ಏರ್ಪಟ್ಟಿತು ಅಲ್ಲಲ್ಲ ಇದ್ದ ಈ ಇಲಾಖೆಯ ಉದ್ಯೋಗಸ್ಥರು ಕಾಗದ ಪತ್ರಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳುಹಿಸುತ್ತಿ ದ್ದರಲ್ಲದೆ ಕಂಡು ಕೇಳಿದ ಸಮಾಚಾರಗಳನ್ನೂ ದೊರೆಗಳಿಗೆ ಬರೆದು ಕಳುಹಿ ಸುತ್ತಿದ್ದರು. ದೊರೆಗಳು ಮೊಗಲ್ ಸಂಸ್ಥಾನದ ಕ್ರಮಗಳನ್ನು ಲಿಂಗ ಣ್ಣಯ್ಯನಿಂದ ತಿಳಿದು, ತಮ್ಮ ರಾಜ್ಯದಲ್ಲಿಯೂ ಅಲ್ಲಿದ್ದಂತೆಯೇ ಹದಿನೆಂಟು ಕಚೇರಿಗಳನ್ನು ಏರ್ಪಡಿಸಿ ಸೀಮೆಯನ್ನು ೮೪ ಗಡಿಗಳಾಗಿ ವಿಂಗಡಿಸಿದರು ಪ್ರತಿ ಗಡಿಯಲ್ಲಿಯೂ ಅಟ್ಟವಣೆ (ರೆವಿನ್ಯೂ) ಮತ್ತು ಕಂದಾಚಾರದ (ಪೋ ಲೀಸು) ಕೆಲಸಗಳಿಗೆ ತಕ್ಕ ಸಿಬ್ಬಂದಿಯನ್ನು ನೇಮಿಸಿದರು. ಹಿಂದೆ ಮುದ್ರೆ ಯುಂಗುರಗಳು ಒಂದೊಂದು ಗಡಿಯಲ್ಲಿ ಒಂದೊಂದು ರೀತಿಯಾಗಿದ್ದುವು. ಅವುಗಳನ್ನೆಲ್ಲಾ ತೆಗೆದುಹಾಕಿ ಬೇರೆ ಉಂಗುರಗಳನ್ನು ಮಾಡಿಸಿ ಮಧ್ಯ ದಲ್ಲಿ ''ದೆ ಎಂಬ ಅಕ್ಷರವನ್ನು ಕೆತ್ತಿಸಿ ಗಡಿಗಳಲ್ಲಿರಿಸಿದರು, ಇದಲ್ಲದೆ ಅರ ಮನೆಯ ಅಪ್ಪಣೆಯನ್ನು ಮೀರಿ ನಡೆದ ಜನರ ಮನೆಗಳಿಗೂ, ದವಸದ ಗಾಸಿ ಗಳಿಗೂ, ಮುದ್ರೆಯನ್ನು ಹಾಕಲು ಮರದ ಹಲಗೆಯನ್ನು ಮಾಡಿಸಿ, ಅಚೆ ಈಚೆ ಸೂರ್ಯಚಂದ್ರರನ್ನೂ, ಮಧ್ಯೇ ''ದೆ ಎಂಬ ಅಕ್ಷರವನ್ನೂ ಕೆತ್ತಿಸಿ, ಆ ಮುದ್ರೆಯನ್ನೂ ಹಲಗೆಯನ್ನೂ ಗ್ರಾಮದ ಚಾವಡಿಯಲ್ಲಿರಿಸಿದರು. ಇದೇ ಪ್ರಕಾರ ಅಳತೆಯ ಸೇರು, ಪಾವು, ಮುಂತಾದುವುಗಳನ್ನೂ ಕ್ಲಿಪ್ತ ಮಾಡಿದರು.

೫೪. ಜನರು ತಮ್ಮ ತಮ್ಮ ಜಾತಿ ಕಟ್ಟಲೆಯನ್ನು ಮೀರಿ ನಡೆಯದಂತೆಯೂ, ಕಳ್ಳತನ ನಡೆಯದಂತೆಯೂ ನೋಡಿಕೊಳ್ಳುವುದಕ್ಕೂ, ಆಯಾ ಗಡಿಗಳಲ್ಲಿ ವರ್ತಕರು ಅರಮನೆಯ ನಿಬಂಧನೆಯ ಪ್ರಕಾರ ವ್ಯಾಪಾರ ಮಾಡುತ್ತಿರುವುದನ್ನು ವಿಚಾರಿಸುವುದಕ್ಕೂ, ಪ್ರತಿಗಡಿಯ ಕಸಬೆಯಲ್ಲಿಯೂ, ಪೇಟೆ ಸ್ಥಳದಲ್ಲಿಯೂ, ಒಬ್ಬೊಬ್ಬ ಕೊತ್ವಾಲನಿದ್ದನು. ರಾತ್ರಿ ವೇಳೆ ಕೊತ್ವಾಲ, ಕಳ್ಳಭಂಟ, ದಂಡಿ, ಕೊಂಬು ತಮಟೆಯವರು ಇವರೆಲ್ಲಾ ಕಳ್ಳಕಾಕರಿಗೆ ಆಸ್ಪದ ವಿಲ್ಲದಂತ ಗಸ್ತಿಯನ್ನು ತಿರುಗುತ್ತಿದ್ದರು.

೫೫. ತಿರುಮಲಯ್ಯಂಗಾರ್ರ‍್ಯರಿಗೆ ಮಂತ್ರಿತ್ವವಾದ ಮೇಲೆ ಚಿಕ್ಕದೇವರಾಜ ಒಡೆಯರವರು ವೈಷ್ಣವ ಪದ್ಧತಿಯನ್ನನುಸರಿಸಿದರು ಇವರು ಪ್ರತಿದಿನವೂ ಎರಡು ಸಾವಿರ ವರಹಗಳು ಅರಮನೆಯ ಬೊಕ್ಕಸಕ್ಕೆ ಸೇರಿದ ಹೊರತು ಊಟಮಾಡುತ್ತಿರಲಿಲ್ಲ. ಹೀಗೆ ಬಹಳ ಹಣವನ್ನು ಕೂಡಿಸಿದಕಾರಣ, ಇವರನ್ನು "ನವಕೋಟಿ ನಾರಾಯಣ" ಎಂಬದಾಗಿ ಜನರು ಹೊಗಳುತ್ತಿದ್ದರು. ಇವರ ಕಾಲದಲ್ಲಿ ತಿರುಮಲಯ್ಯಂಗಾರ್ರ‍್ಯರು ಷಡಕ್ಷರಿದೇವರು, ಚಿಕ್ಕ ಉಪಾಧ್ಯಾಯರು ಮೊದಲಾದವರು ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಬರೆದರು ಈ ದೊರೆಗಳು ೧೭೦೪ ನೆಯ ಇಸವಿಯಲ್ಲಿ ಸ್ವರ್ಗಸ್ಥರಾದರು.

---

## ೫ ನೆಯ ಪ್ರಕರಣ.

### ದೇವರಾಜಯ್ಯ, ನಂಜರಾಜಯ್ಯನವರು.

೫೬. ಚಿಕ್ಕದೇವರಾಜ ಒಡೆಯರ ಅನಂತರ ಪಟ್ಟಕ್ಕೆ ಬಂದ ದೊರೆಗಳು ಅಷ್ಟು ಶಕ್ತರಾಗಿರಲಿಲ್ಲ. ಆದುದರಿಂದ, ಅಧಿಕಾರವು ಮೊದಲು ದಳವಾಯಿಗಳ ಕೈಸೇರಿ ಅನಂತರ ಹೈದರಲ್ಲಿಯ ಪಾಲಾಯಿತು. ಚಿಕ್ಕದೇವರಾಜ ಒಡೆಯರ ಮಗ ಕಂಠೀರವ ಒಡೆಯರ ೧೭೦೪ ನೆಯ ಇಸವಿಯಿಂದ ೧೭೧೩ ರ ವರೆಗೆ ಆಳಿದರು. ಇವರು ಮೂಕರಾಗಿದ್ದುದರಿಂದ ಆಡಳಿತಗಳನ್ನೆಲ್ಲ ಇವರ ಹೆಸರಿನಲ್ಲಿ ಇತರರು ನಡೆಯಿಸುತ್ತಿದ್ದರು. ಇವರ ತರುವಾಯ ಇವರ ಮಗ ದೊಡ್ಡ ಕೃಷ್ಣರಾಜ ಒಡೆಯರಿಗೆ ಪಟ್ಟವಾಯಿತು. ಈ ದೊರೆಗಳಿಗೆ ರಾಜ್ಯಭಾರದಲ್ಲಿ ಹೆಚ್ಚಾಗಿ ಆಸಕ್ತಿ ಇರಲಿಲ್ಲ. ಆದುದರಿಂದ, ಅಧಿಕಾರವೆಲ್ಲ ದಳವಾಯಿ ದೇವರಾಜಯ್ಯ, ಮತ್ತು ಈತನ ಜ್ಞಾತಿ ಸರ್ವಾಧಿಕಾರಿ ನಂಜರಾಜಯ್ಯ ಇವರ ಕೈಸೇರಿತು.

೫೭. ೧೭೨೪ ನೆಯ ಇಸವಿಯಲ್ಲಿ ಆರ್ಕಾಟು ಮತ್ತು ಸೀರ್ರ‍್ಯದ ನವಾಬರು ಒಕ್ಕಟ್ಟಾಗಿ ಶ್ರೀರಂಗಪಟ್ಟಣಕ್ಕೆ ಸೈನ್ಯದೊಡನೆ ಬಂದು, ಒಂದು

ಕೋಟಿ ರೂಪಾಯಿಗಳನ್ನು ಸುಲಿಗೆ ಮಾಡಿಕೊಂಡು ಹೋದರು. ಈ ಸಂಗತಿಯನ್ನು ಕೇಳಿ, ಮರಾಟೆಯವರಿಗೂ ಆಸೆ ಹುಟ್ಟಿತು ೧೭೨೬ ನೆಯ ಇಸವಿಯಲ್ಲಿ ಪೇಷ್ವೆ ಬಾಜಿರಾಯನು ಬಂದನು. ಮೈಸೂರವರು ಅವನಿಗೂ ಬಹಳ ಹಣವನ್ನು ಕೊಟ್ಟು ಸಮಾಧಾನ ಪಡಿಸಿಕೊಳ್ಳಬೇಕಾಯಿತು. ಅಂದಗೆ ೧೭೨೮ ನೆಯ ಇಸವಿಯಲ್ಲಿ ದೇವರಾಜಯ್ಯನು ಮಾಗಡಿ ಪಾಳೆಯಗಾರ ಕೆಂಪೆ ಗೌಡನನ್ನು ಸೆರೆ ಹಿಡಿದು ಮಾಗಡಿಯನ್ನು ಮೈಸೂರಿಗೆ ಸೇರಿಸಿಕೊಂಡನು. ಈ ಲಾಭದಿಂದ ಮುಸಲ್‌ಮಾನರಿಗೂ ಮರಾಟೆಯವರಿಗೂ ದಂಡವನ್ನು ತೆತ್ತು ರಾಜ್ಯಕ್ಕೆ ಉಂಟಾಗಿದ್ದ ನಷ್ಟವು ಸ್ವಲ್ಪ ಮಟ್ಟಿಗೆ ಸರಿಹೊಂದಿಸಲ್ಪಟ್ಟಿತು.

೫೮. ದೊಡ್ಡ ಕೃಷ್ಣರಾಜ ಒಡೆಯರು ೧೭೩೧ ನೆಯ ಇಸವಿಯಲ್ಲಿ ಮೃತರಾದರು. ಇವರಿಗೆ ಮಕ್ಕಳಿಲ್ಲವಾದುದರಿಂದ, ನಂಜರಾಜಯ್ಯನೂ ದೇವರಾಜಯ್ಯನೂ ಚಾಮರಾಜರೆಂಬವರನ್ನು ದತ್ತು ಮಾಡಿಸಿ, ಅವರಿಗೆ ಪಟ್ಟವನ್ನು ಕಟ್ಟಿ ಅವರ ಹೆಸರಿನಲ್ಲಿ ಎಲ್ಲಾ ಕಲಸಗಳನ್ನೂ ನಡಿಸುತ್ತಾ ಅವರಿಗೆ ಯಾವ ಸ್ವಾತಂತ್ರ್ಯವನ್ನೂ ಕೊಡದೆ ಇಟ್ಟುಕೊಂಡಿದ್ದರು ಆದರೆ ಈ ದೊರೆಗಳಿಗೆ ಪಟ್ಟವಾಗುವಾಗಲೇ ೨೮ ವರ್ಷ ವಯಸ್ಸಾಗಿದ್ದಿತು. ಇವರು ತಮ್ಮ ಕೆಲಸವನ್ನು ತಾವೇ ನೋಡಿಕೊಳ್ಳಲು ಶಕ್ತರಾಗಿದ್ದರು. ಇದರಿಂದ ಪಟ್ಟವಾದ ಸ್ವಲ್ಪ ದಿವಸಗಳಲ್ಲಿಯೇ ಇವರು ನಂಜರಾಜಯ್ಯನಿಗೂ ದೇವರಾಜಯ್ಯನಿಗೂ ಕೆಲಸವನ್ನು ತಪ್ಪಿಸಿ ಬೇರೆಜನಗಳನ್ನಿಟ್ಟುಕೊಂಡರು. ಹೀಗೆ ಒಂದೂವರೆ ವರ್ಷ ಕಳೆಯಿತು. ಆದರೆ ಈ ಮಧ್ಯೆ ಅರಮನೆಯ ವೆಚ್ಚದಲ್ಲಿ ಇವರು ಹಿಡಿತವನ್ನು ಮಾಡಿದರು. ಇದರಿಂದ ಜನರಿಗೆ ಇವರಲ್ಲಿ ಪ್ರೀತಿ ಕಡಿಮೆಯಾಯಿತು. ಈ ಸಮಯವನ್ನು ಕಾದುಕೊಂಡಿದ್ದ ನಂಜರಾಜಯ್ಯನೂ ದೇವರಾಜಯ್ಯನೂ ದೊರೆಗಳನ್ನೂ ಅವರಹೆಂಡತಿಯರನ್ನೂ ಸೆರೆಹಿಡಿಸಿ ಕಬ್ಬಾಳದುರ್ಗಕ್ಕೆ ಕಳುಹಿಸಿ, ತಾವು ಸ್ವತಂತ್ರರಾದರು. ಕಬ್ಬಾಳದುರ್ಗದಲ್ಲಿ ಚಾಮರಾಜ ಒಡೆಯರವರು ಸ್ವಲ್ಪ ದಿವಸಗಳಲ್ಲಿಯೇ ಮರಣವನ್ನು ಹೊಂದಿದರು. ಬಳಿಕ ನಂಜರಾಜಯ್ಯ ದೇವರಾಜಯ್ಯನವರು ದೊಡ್ಡ ಕೃಷ್ಣರಾಜ ಒಡೆಯರ ಹೆಂಡತಿಯವರಿಗೆ ಮೂರುವರ್ಷದ ಒಂದು ಮಗುವನ್ನು ದತ್ತು ಕೊಡಿಸಿ ಆ ಮಗುವಿಗೆ ಇಮ್ಮಡಿ ಕೃಷ್ಣರಾಜ ಒಡೆಯರೆಂದು ಹೆಸರಿಟ್ಟು ರಾಜ್ಯದ ಆಡಳಿತಗಳನ್ನೆಲ್ಲಾ ಎಂದಿನಂತೆ ತಾವೇ ನಡೆಯಿಸುತ್ತಾ ಬಂದರು.

೫೯. ನಂಜರಾಜಯ್ಯನು ೧೭೩೯ನೆಯ ಇಸವಿಯಲ್ಲಿ ತೀರಿಹೋದನು. ಈತನು ಸಾಯುವ ಕಾಲದಲ್ಲಿ ತನ್ನಲ್ಲಿದ್ದ ಹಣವನ್ನೆಲ್ಲಾ ಲೆಕ್ಕಮಾಡಿ ಸುಮಾರು ೮ ಲಕ್ಷ ರೂಪಾಯಿ ಅನ್ಯಾಯವಾಗಿ ಸಂಪಾದಿಸಿದುದೆಂದು ಗೊತ್ತುಮಾಡಿ ಅದನ್ನು ಅರಮನೆಗೆ ಒಪ್ಪಿಸಿ ಪ್ರಾಣವನ್ನು ಬಿಟ್ಟನು. ತರುವಾಯ ಸರ್ವಾಧಿಕಾರವು ದೇವರಾಜಯ್ಯನ ತಮ್ಮ "ಕರಾಚೂರಿ" ನಂಜರಾಜಯ್ಯನಿಗಾಯಿತು

೬೦. ಈ ಕಾಲದಲ್ಲಿ ಮೊಗಲರ ಅಧಿಕಾರಿಯಾದ ಹೈದರಾಬಾದ ನಿಸಾಮನ ಮಗ ನಾಸಿರ್‌ಜಂಗನು ಮೈಸೂರು ಸಂಸ್ಥಾನದಿಂದ ಪೊಗದಿಯನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಸೈನ್ಯದೊಡನೆ ಶ್ರೀರಂಗಪಟ್ಟಣದ ಬಳಿ ಬಂದಿಳಿದನು. ದೇವರಾಜಯ್ಯನಿಗೆ ಯುದ್ಧ ಮಾಡುವುದಕ್ಕೆ ಶಕ್ತಿ ಸಾಲದೆ, ಮೊಗಲರಿಗೆ ನಡೆಯಬೇಕಾದ ಮರ್ಯಾದೆಗಳನ್ನೆಲ್ಲಾ ನಡೆಯಿಸಿ ಕೊಡಬೇಕಾಗಿ ಬಂದ ಕಾಣಿಕೆಗಳನ್ನೆಲ್ಲಾ ಕೊಟ್ಟು, ಅವನನ್ನು ಹಿಂದಕ್ಕೆ ಕಳುಹಿಸಿದನು.

೬೧. ನಂಜರಾಜಯ್ಯನು ೧೭೪೯ನೆಯ ಇಸವಿಯಲ್ಲಿ ದೇವನಹಳ್ಳಿಗೆ ಮುತ್ತಿಗೆ ಹಾಕಿ, ಆ ಸ್ಥಳವನ್ನು ಸ್ವಾಧೀನಪಡಿಸಿಕೊಂಡನು. ಈ ಮುತ್ತಿಗೆಯಲ್ಲಿಯೇ ಮುಂದೆ ಪ್ರಸಿದ್ಧನಾದ ಹೈದರನು ತನ್ನ ಶಕ್ತಿಯನ್ನು ಮೊದಲು ಹೊರಪಡಿಸಿದನು. ಈತನ ತಂದೆ ಪತ್ತೇಮಹಮದನಿಗೆ ಸೀರ್ಯದ ನವಾಬನಿಂದ ಕೋಲಾರದ ಫೌಜುದಾರಿ ಕಲಸವಾಗಿ ಬೂದಿಕೋಟೆಯು ಜಹಗೀರಾಗಿ ಬಂದಿತು. ಈ ಬೂದಿಕೋಟೆಯಲ್ಲಿ ೧೭೨೦ ನೆಯ ಇಸವಿಯಲ್ಲಿ ಹೈದರನು ಹುಟ್ಟಿದನು. ೧೭೨೮ ನೆಯ ಇಸವಿಯಲ್ಲಿ ಪತ್ತೇಮಹಮದನು ಸತ್ತು ಹೋಗಲು, ದೊಡ್ಡಬಳ್ಳಾಪುರದ ಜಗೀರುದಾರನಾದ ಅಬ್ಬಾಸ್ ಕೂಲಿಖಾನೆನೆಂಬವನು ತನಗೆ ಬರಬೇಕಾಗಿದ್ದ ಹಣಕ್ಕಾಗಿ ಪತ್ತೇಮಹಮ್ಮದನ ಹೆಂಡತಿಗೆ ಬಹಳವಾಗಿ ಪರಾತ ಮಾಡಿದನು; ಇದಲ್ಲದೆ ಚಿಕ್ಕಮಕ್ಕಳಾದ ಹೈದರನನ್ನೂ ಅವನ ಅಣ್ಣನನ್ನೂ ಹಿಡಿದು ದೊಡ್ಡದೊಂದು ನಗಾರಿಯ ಕೆಳಗೆ ಕುಳ್ಳಿರಿಸಿ, ಮೇಲೆ ನಗಾರಿಯನ್ನು ಬಡಿಸಿ, ವಿಚಿತ್ರವಾದ ಹಿಂಸೆಯನ್ನು ಮಾಡುತ್ತಿದ್ದನು. ಪತ್ತೇಮಹಮದನ ಹೆಂಡತಿಯು ಇದನ್ನು ಸಹಿಸಲಾರದೆ ಬೆಂಗಳೂರಲ್ಲಿ ಇದ್ದ ತನ್ನ ತಮ್ಮನಮೂಲಕ ಮೈಸೂರು ಸಂಸ್ಥಾನದಿಂದ ಹಣವನ್ನು ತಗೆದುಕೊಂಡು ಅಬಾಸ್‌ಕೂಲಿಖಾನನ ಸಾಲವನ್ನು ತೀರಿಸಿ, ಮಕ್ಕಳೊಡನೆ ಬೆಂಗಳೂರಿಗೆ ಬಂದಳು. ಹೈದರನು ದೊಡ್ಡವನಾದಮೇಲೆ ಸೈನ್ಯಕ್ಕೆ ಸೇರಿಕೊಂಡನು. ದೇವನಹಳ್ಳಿ ಮುತ್ತಿಗೆಯಲ್ಲಿ ಇವನು ಮಾಡಿದ ಸಾಹಸಕ್ಕಾಗಿ ಇವನಿಗೆ ೫೦ ಕುದುರೆ ೨೦೦ ಕಾಲಾಳುಗಳ ಮೇಲೆ ಅಧಿಕಾರವಾಯಿತು.

೬೨. ಚಂದಾಸಾಹೇಬನೆಂಬವನು ೧೭೫೧ ನೆಯ ಇಸವಿಯಲ್ಲಿ ಫ್ರೆಂಚರ ಸಹಾಯದಿಂದ ಆರ್ಕಾಟ್ ನವಾಬಗಿರಿಯನ್ನು ಮಹಮದಲ್ಲಿಗ ತಪ್ಪಿಸಿ, ತಾನೇ ಆ ಪದವಿಯನ್ನು ಅನುಭವಿಸಬೇಕೆಂದು ತಿರುಚನಾಪಳ್ಳಿಗೆ ಮುತ್ತಿಗೆ ಹಾಕಿದನು. ಆಗ ಮಹಮ್ಮದಲ್ಲಿಗೆ ಇಂಗ್ಲಿಷರ ಸಹಾಯವಿದ್ದಿತು. ಇದಲ್ಲದೆ ಮೈಸೂರು ಸೈನ್ಯವು ಸಹಾಯ ಮಾಡಿದರೆ, ತಿರುಚನಾಪಳ್ಳಿಯನ್ನೂ ಅದಕ್ಕೆ ಸೇರಿದ ಸೀಮೆಯನ್ನೂ ಕೊಡುವುದಾಗಿ ಅವನು ದೇವರಾಜಯ್ಯನಿಗೆ ಹೇಳಿ ಕಳುಹಿಸಿದ್ದನು. ದೇವರಾಜಯ್ಯನಿಗೆ ಈ ಜಗಳದಲ್ಲಿ ಪ್ರವೇಶಮಾಡಲು ಮನಸ್ಸು ಇರಲಿಲ್ಲ. ಆದರೆ ನಂಜರಾಜಯ್ಯನು ಸುಲ

ಭವಾಗಿ ಹೆಚ್ಚು ಸೀಮೆಯು ಸಿಕ್ಕುವುದೆಂಬಾಸೆಯಿಂದ, ಮಹಮ್ಮದಲ್ಲಿಗೆ ಸಹಾಯಮಾಡುವುದಾಗಿ ಒಪ್ಪಿಕೊಂಡು ಸೈನ್ಯದೊಡನೆ ಹೊರಟನು ; ಆದರೆ ಇವನ ಆಸೆಮಾತ್ರ ನೆರವೇರಲಿಲ್ಲ. ಮಹಮ್ಮದಲ್ಲಿಗೆ ಜಯವಾದನಂತರ ಅವನು ನಂಜರಾಜಯ್ಯನಿಗೆ ತಿರುಚನಾಪಳ್ಳಿಯನ್ನು ಸ್ವಾಧೀನಕ್ಕೆ ಕೊಡದೆ ಮೋಸಮಾಡಿದನು.

೬೩. ಇಷ್ಟರಲ್ಲಿಯೇ—ಎಂದರೆ ೧೭೫೫ ನೆಯ ಇಸವಿಯಲ್ಲಿ—ಹೈದರಾಬಾದು ಸುಬೇದಾರ ಸಲಬತ್‌ಜಂಗನು ಸೈನ್ಯದೊಡನೆ ಶ್ರೀರಂಗಪಟ್ಟಣಕ್ಕೆ ಹೋಗಿದ್ದಾನೆಂದು ವರ್ತಮಾನ ಬಂದುದರಿಂದ ನಂಜರಾಜಯ್ಯನು ತಿರುಚನಾಪಳ್ಳಿಯನ್ನು ಬಿಟ್ಟು ಅಲ್ಲಿಗೆ ಹೊರಟನು. ಆದರೆ ಇವನು ಸೇರುವಷ್ಟರಲ್ಲಿಯೇ ಸಲಬತ್‌ಜಂಗನು ಶ್ರೀರಂಗಪಟ್ಟಣದ ಬಳಿಗೆ ಬಂದಿದ್ದನು. ಆದಕಾರಣ, ದೇವರಾಜಯ್ಯನು ಇವನಿಗೆ ೫೬ ಲಕ್ಷ ರೂಪಾಯಿ ಕೊಡುವುದಾಗಿ ಒಪ್ಪಿಕೊಂಡು ಸಮಾಧಾನಮಾಡಿಕೊಂಡನು. ತಿರುಚನಾಪಳ್ಳಿಯ ಬಳಿ ಬಹಳಹಣ ವೆಚ್ಚವಾಗಿದ್ದುದರಿಂದ ಈ ಹಣವನ್ನೆಲ್ಲಾ ಒಂದೇ ಗಂಟಿನಲ್ಲಿ ಕೊಡುವುದಕ್ಕಾಗದೆ ಅರಮನೆ ಮತ್ತು ದೇವಸ್ಥಾನಗಳ ಜವಾಹಿರನ್ನು ಮಾರಿ ೨೦ ಲಕ್ಷ ರೂಪಾಯಿಗಳನ್ನು ತೀರಿಸಿ, ಮಿಕ್ಕ ಹಣಕ್ಕೆ ಸಾಹುಕಾರರನ್ನು ಹೊಣೆ ಮಾಡಬೇಕಾಗಿ ಬಂದಿತು.

---

## ೬ ನೆಯ ಪ್ರಕರಣ.

೬೪, ನಂಜರಾಜಯ್ಯನು ದೇವರಾಜಯ್ಯನ ಮಾತನ್ನು ಮೀರಿ ಮಹಮ್ಮದಲ್ಲಿಯ ಸಹಾಯಕ್ಕೆ ಹೋಗಿದ್ದನಷ್ಟೆ. ಈಗ ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದನಂತರವೂ ಅವನಿಗೂ ದೇವರಾಜಯ್ಯನಿಗೂ ಮನಸ್ತಾಪ ಹೆಚ್ಚುತ್ತಲೇ ಬಂದಿತು ೧೭೫೬ ನೆಯ ಇಸವಿಯಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರು ಇವರುಗಳ ಅಧೀನದಿಂದ ತಪ್ಪಿಸಿಕೊಳ್ಳಬೇಕೆಂದು ಗುಟ್ಟಾಗಿ ಕಲವು ಪ್ರಯತ್ನಗಳನ್ನು ಮಾಡಿದರು. ಈ ಸಮಾಚಾರವು ನಂಜರಾಜಯ್ಯನ ಕಿವಿಗೆ ಹೇಗೋ ಬೀಳಲು, ಅವನು ತನ್ನ ಜನರೊಡನೆ ಅರಮನೆಗೆ ನುಗ್ಗಿ ದೊರೆಗಳನ್ನು ಬಲಾತ್ಕಾರದಿಂದ ಸಿಂಹಾಸನದ ಮೇಲೆ ಕುಳ್ಳಿರಿಸಿ, ಅವರ ಕಡೆಯ ಜನರಿಗೆ ಕಿವಿ ಮೂಗುಗಳನ್ನು ಕೊಯಿಸಿ ಅರಮನೆಯಿಂದ ಹೊರಡಿಸಿದನು. ದೇವರಾಜಯ್ಯನು ಇದಕ್ಕೆ ಒಡಂಬಡದೆ ೧೭೫೭ ನೆಯ ಇಸವಿಯಲ್ಲಿ ಆಡಳಿತವನ್ನೆಲ್ಲ ನಂಜರಾಜಯ್ಯನಿಗೆ ಬಿಟ್ಟು ಸತ್ಯಮಂಗಲಕ್ಕೆ ಹೊರಟುಹೋದನು,

೬೫. ಈತನು ಹೊರಟುಹೋದ ಒಂದು ತಿಂಗಳಿಗೆಲ್ಲ ಪುನಹೆಯಿಂದ ಪೇಷ್ವೆ ಬಾಳಾಜಿರಾಯನು ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ನಂಜರಾಜಯ್ಯನು ಎಷ್ಟೋ ಪ್ರಯತ್ನಮಾಡಿದನು. ಆದರೂ ಶತ್ರು

ಗಳನ್ನು ಹೊರಡಿಸುವುದಕ್ಕಾಗಲಿಲ್ಲ. ಕೊನೆಗೆ ೩೨ ಲಕ್ಷ ರೂಪಾಯಿ ಕೊಡುವಂತೆ ಒಪ್ಪಿಕೊಂಡು ಸಮಾಧಾನ ಪಡಿಸಿಕೊಳ್ಳಬೇಕಾಯಿತು. ಆದರೆ ಈ ಹಣವನ್ನೆಲ್ಲಾ ಒಂದೇ ಗಂಟಿನಲ್ಲಿ ಕೊಡುವುದಕ್ಕೆ ಭಂಡಾರದಲ್ಲಿ ಹಣವಿಲ್ಲದೆ ೬ ಲಕ್ಷ ರೂಪಾಯಿನ ಜವಾಹಿರು ಕೊಟ್ಟು, ಮಿಕ್ಕ ೨೬ ಲಕ್ಷ ರೂಪಾಯಿಗೆ ನಾಗಮಂಗಲ ಮುಂತಾದ ಹದಿಮೂರು ಗಡಿಗಳನ್ನು ಭೋಗ್ಯಮಾಡಿದನು.

೬೬. ಈ ಕಾಲದಲ್ಲಿ ಹೈದರನು ದಿಂಡಗಲ್ಲಿನಲ್ಲಿ ಫೌಜುದಾರನಾಗಿದ್ದನು. ಇವನು ತಿರುಚನಾಪಳ್ಳಿಯ ಬಳಿ ತೋರಿಸಿದ ಶೌರ್ಯಕ್ಕೆ ಮೆಚ್ಚಿ ನಂಜರಾಜಯ್ಯನು ಇವನಿಗೆ ಈ ಕೆಲಸವನ್ನು ಕೊಟ್ಟು ಕಳುಹಿಸಿದ್ದನು. ಆದರೆ ದೇವರಾಜಯ್ಯನಿಗೂ ನಂಜರಾಜಯ್ಯನಿಗೂ ಉಂಟಾಗಿದ್ದ ಮನಸ್ತಾಪದಲ್ಲಿ ಇವನಿಗೆ ಸ್ವಲ್ಪ ತೊಂದರೆಯುಂಟಾಯಿತು. ಆದುದರಿಂದ, ಮರಾಟೆಯವರು ಹೊರಟುಹೋದ ಸ್ವಲ್ಪ ದಿವಸಗಳ ಮೇಲೆ ಇವನು ಶ್ರೀರಂಗಪಟ್ಟಣಕ್ಕೆ ಬಂದನು. ಅಲ್ಲಿ ಅವರಿಂದುಂಟಾದ ನಷ್ಟವನ್ನು ವಿವರವಾಗಿ ತಿಳಿದು, ತನ್ನ ಸೈನ್ಯದೊಡನೆ ಅವರಿಗೆ ಭೋಗ್ಯಮಾಡಿದ್ದ ಗಡಿಗಳಿಗೆ ಹೊರಟು ಅಲ್ಲಿಂದ ಅವರನ್ನು ಹೊರಡಿಸಿ, ಗಡಿಗಳನ್ನೆಲ್ಲ ತಿರುಗಿ ಸ್ವಾಧೀನಪಡಿಸಿಕೊಂಡು ಬಂದನು. ಅನಂತರ ದೇವರಾಜಯ್ಯನ ಬಳಿಗೂ ಹೋಗಿ ಅವನ ಪ್ರೀತಿಯನ್ನು ಸಂಪಾದಿಸಿಕೊಂಡು ತನಗುಂಟಾಗಿದ್ದ ತೊಂದರೆಗಳನ್ನು ಹೋಗಲಾಡಿಸಿಕೊಂಡು ಪುನಃ ದಿಂಡಿಗಲ್ಲಿಗೆ ಹೋಗಿ ಸೇರಿದನು.

೬೭. ಇವನು ೧೭೫೮ನೆಯ ಇಸವಿಯಲ್ಲಿ ದೇವರಾಜಯ್ಯನನ್ನು ಸಂಗಡ ಕರೆದುಕೊಂಡು ಶ್ರೀರಂಗಪಟ್ಟಣಕ್ಕೆ ತಿರುಗಿ ಬಂದನು. ಅಲ್ಲಿ ಖಜಾನೆಯಲ್ಲಿ ಹಣಸಾಲದೆ ದಂಡಿನ ಸಂಬಳವು ಸಲ್ಲದೆ ನಿಂತಿದ್ದಿತು. ದಂಡಿನ ಜನರು ಅರಮನೆಯ ಬಾಗಿಲಲ್ಲಿಯೂ, ದಂಗೆ ಕುಳಿತುಕೊಂಡು ಒಳಕ್ಕೆ ನೀರನ್ನಾಗಲಿ, ಪದಾರ್ಥಗಳನ್ನಾಗಲಿ ಬಿಡದೆ ಅಡ್ಡಿ ಮಾಡಿದರು. ನಂಜರಾಜಯ್ಯನು ಉಗ್ರಾಣದಲ್ಲಿದ್ದ ಧಾನ್ಯವನ್ನೆಲ್ಲಾ ಮಾರಿ ಸಂಬಳವನ್ನೆಲ್ಲಾ ತೀರಿಸಿದನು; ಆದರೂ ಪೂರ್ತಿಯಾಗಿ ತೀರಲಿಲ್ಲ. ಇದರಿಂದ ಹೈದರನು ದೇವರಾಜಯ್ಯನೊಡನೆ ಈಗ ಶ್ರೀರಂಗಪಟ್ಟಣಕ್ಕೆ ಬಂದನು. ಆದರೆ ಶ್ರೀರಂಗಪಟ್ಟಣವನ್ನು ಸೇರಿದ ೫–೬ ದಿವಸಗಳಲ್ಲಿ ದೇವರಾಜಯ್ಯನು ತೀರಿಹೋದನು. ಅನಂತರ ನಂಜರಾಜಯ್ಯನು ಸೈನ್ಯದವರ ದಂಗೆಯನ್ನಡಗಿಸುವ ಕೆಲಸವನ್ನು ಹೈದರನಿಗೂ ಅವನ ಕಡೆಯವನಾದ ಖಂಡೇರಾಯನಿಗೂ ಒಪ್ಪಿಸಿದನು. ಇವರು ಉಪಾಯದಿಂದ ದಂಗೆಯನ್ನು ಅಡಗಿಸಿದರು. ಇದಕ್ಕಾಗಿ ಬೆಂಗಳೂರು ಕೋಟೆಯೂ ಮತ್ತು ಅದಕ್ಕೆ ಸೇರಿದ ಸೀಮೆಯೂ ಹೈದರನಿಗೆ ಜಹಗೀರಾಗಿ ಕೊಡಲ್ಪಟ್ಟುವು.

೬೮. ಮರಾಟಿಯವರು ೧೭೫೯ನೆಯ ಇಸವಿಯಲ್ಲಿ ತಮಗೆ ಭೋಗ್ಯವಾಗಿದ್ದು ಅನಂತರ ಕೈತಪ್ಪಿಹೋಗಿದ್ದ ಗಡಿಗಳನ್ನು ಪುನಃ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಸೈನ್ಯದೊಡನೆ ಬಂದರು. ಆಗ ನಂಜರಾಜಯ್ಯನು

ಶ್ರೀರಂಗ ಪಟ್ಟಣದಿಂದ ಸೈನ್ಯವನ್ನು ಕಳುಹಿಸಬೇಕೆಂದಾಲೋಚಿಸಿದನು. ಆದರೆ ಕೆಲವು ಜನರು ತಮ್ಮ ಸಂಬಳವನ್ನು ಪೂರ್ತಿಯಾಗಿ ತೀರಿಸಿದ ಹೊರತು ಹೊರಡುವುದಿಲ್ಲವೆಂದು ಹೇಳಿದರು. ಆಗ ಹೈದರನು ಕೆಲವರ ಸಂಬಳವನ್ನು ತಾನು ತೀರಿಸುವುದಾಗಿ ಒಪ್ಪಿಕೊಂಡು, ಅವರನ್ನೂ ತನ್ನ ಸ್ವಂತ ಸೈನ್ಯದವರನ್ನೂ ಕರೆದುಕೊಂಡು ಹೊರಟು, ಮರಾಟೆಯವರನ್ನು ಬಹಳವಾಗಿ ದಣಿಸಿದನು. ಕೊನೆಗೆ ಮರಾಟೆಯವರ ಸೇನಾನಾಯಕನಾದ ಗೋಪಾಲಹರಿಯು ಹಿಂದೆ ಗೊತ್ತಾಗಿದ್ದ ೩೨ ಲಕ್ಷ ರೂಪಾಯಿಯನ್ನು ಕೊಟ್ಟರೆ ಹೊರಟು ಹೋಗುವುದಾಗಿ ಒಪ್ಪಿಕೊಂಡನು. ಕೂಡಲೇ ನಂಜರಾಜಯ್ಯನು ಅರ್ಧ ಹಣವನ್ನು ನಗದಾಗಿ ತೀರಿಸಿದನು. ನಿಂತ ಅರ್ಧ ಹಣಕ್ಕೆ ಹೈದರನ ಮಾತಿನ ನಂಬಿಕೆಯ ಮೇಲೆ ಮರಾಟೆ ದಂಡಿನ ಸಾಹುಕಾರರೇ ಹೊಣೆಯಾದರು. ಮರಾಟೆಯವರು ಹೋದನಂತರ ಅವರಿಗೆ ಭೋಗ್ಯವಾಗಿದ್ದ ಗಡಿಗಳೆಲ್ಲಾ ಹೈದರನ ವಿಚಾರಣೆಗೆ ಸೇರಿದುವು. ಇದಲ್ಲದೆ ನಂಜರಾಜಯ್ಯನು ಹೈದರನ ಸಾಹಸಕ್ಕೆ ಮೆಚ್ಚಿ "ಬಹದ್ದೂರ್" ಎಂಬ ಬಿರುದನ್ನು ಕೊಟ್ಟು, ಆನೆ ಕುದುರೆ, ನವಪತ್ತು, ತಾಸಿಂ, * ಈ ಮರ್ಯಾದೆಗಳನ್ನೂ ಕೊಟ್ಟನು.

೬೯. ಆದರೆ ಹೈದರನ ಪ್ರಾಬಲ್ಯವು ನಂಜರಾಜಯ್ಯನಿಗೆ ಕೇಡನ್ನು ತಂದಿತು. ದೊಡ್ಡ ಕೃಷ್ಣರಾಜ ಒಡೆಯರ ಹೆಂಡತಿ ದೇವರಾಜಮ್ಮಣ್ಣಿಯವರು ಹೈದರನು ಬಲಿಷ್ಠನೆಂದು ತಿಳಿದು ಅವನ ಮೂಲಕ ನಂಜರಾಜಯ್ಯನ ಅಧೀನದಿಂದ ಹೇಗಾದರೂ ತಾವು ತಪ್ಪಿಸಿಕೊಳ್ಳಬೇಕೆಂದು ಯೋಚಿಸಿ, ಖಂಡೇರಾಯನ ಸಹಾಯದಿಂದ ಹೈದರನನ್ನು ತಮ್ಮ ಕಡೆಗೆ ಮಾಡಿಕೊಂಡರು. ಖಂಡೇರಾಯನು ಸೈನ್ಯದಲ್ಲಿ ಕೆಲವರಿಗೆ ಹೇಳಿಕೊಟ್ಟು, ನಿಂತಿದ್ದ ಸಂಬಳವನ್ನು ಕೊಡಬೇಕೆಂದು ನಂಜರಾಜಯ್ಯನನ್ನು ಅವರಿಂದ ಕೇಳಿಸಿ, ಅವನ ಮನೆಯ ಬಾಗಿಲಲ್ಲಿ ದಂಗೆ ಕುಳ್ಳಿರಿಸಿದನು. ನಂಜರಾಜಯ್ಯನು ಇದೆಲ್ಲಾ ಮೋಸವೆಂದು ತಿಳದುಕೊಂಡು, ತಪ್ಪಿಸಿಕೊಳ್ಳುವುದಕ್ಕೆ ಮಾರ್ಗವಿಲ್ಲದೆ, ತನ್ನ ಅಧಿಕಾರವನ್ನು ದೊರೆಗಳಿಗೊಪ್ಪಿಸಿ, ಕೊಣನೂರೆಂಬ ಸ್ಥಳಕ್ಕೆ ಹೊರಟುಹೋದನು. ಅನಂತರ ಮೊದಲಿದ್ದ ಸೀಮೆಗಳಲ್ಲದ ಇನ್ನೂ ಕೆಲವು ಸೀಮೆಗಳು ಹೈದರನ ವಿಚಾರಣೆಗೆ ಸೇರಿದುವು ಮತ್ತು ಖಂಡೇರಾಯನು ಪ್ರಧಾನಿಯಾದನು.

೭೦. ನಂಜರಾಜಯ್ಯನಿಗೆ ಅಧಿಕಾರತಪ್ಪಿದ್ದು ಹೈದರನಿಗೆ ಅನುಕೂಲವಾಯಿತು, ದೇವರಾಜಮ್ಮಣ್ಣಿಯವರ ಆಸೆ ಮಾತ್ರ ನೆರವೇರಲಿಲ್ಲ. ಅವರು ನಂಜರಾಜಯ್ಯನ ಅಧೀನದಿಂದ ತಪ್ಪಿ ಹೈದರನಿಗೆ ಅಧೀನವಾಗಬೇಕಾಯಿತು. ಹೈದರನು ಸೈನ್ಯವನ್ನು ಹೆಚ್ಚಿಸುತ್ತಲೇ ಒಂದನು, ಗಡಿಗಳ ಹುಟ್ಟುವಳಿಯನ್ನು ಹೆಚ್ಚು ಹೆಚ್ಚಾಗಿ ಕೇಳುತ್ತಲೇ ಬಂದನು. ಈ ನಡತೆಯು ಖಂಡೇರಾಯನಿಗೆ ಕೂಡ ಒಡಂಬಡಲಿಲ್ಲ. ಅವನು ದೇವರಾಜಮ್ಮಣ್ಣಿಯವರ

* ಎಂದರೆ, ಹೈದರನು ಸಭೆಗೆ ಬಂದಾಗ ಎಲ್ಲರೂ ಎದ್ದು ಕೂಡಿಸಿಕೊಳ್ಳುವುದು.

ಸಂಗಡ ಆಲೋಚಿಸಿ ಹೈದರನನ್ನು ಹೊರಡಿಸುವ ಯತ್ನಮಾಡಿದನು. ಇದ ಕ್ಕಾಗಿ, ದೇವನಹಳ್ಳಿಯ ಬಳಿಯಲ್ಲಿ ಇಳಿದಿದ್ದ ಮರಾಟೆ ಸೈನ್ಯವು ತನ್ನ ಸಹಾ ಯಕ್ಕೆ ಬರುವಂತೆ ಗೊತ್ತುಮಾಡಿಕೊಂಡನು.

೭೧. ಅನಂತರ ಖಂಡೇರಾಯನು ಕಾವೇರೀ ನದಿಯಲ್ಲಿ ಪೂರ್ಣ ಪ್ರವಾಹ ಬಂದಿರುವುದನ್ನು ನೋಡಿ, ೧೭೬೦ ನೆಯ ಇಸವಿಯಲ್ಲಿ ಒಂದು ದಿವಸ ಬೆಳಗಾಗುತ್ತಲೆ ಶ್ರೀರಂಗಪಟ್ಟಣದ ಕೋಟೆಯ ಬಾಗಿಲನ್ನು ಹಾಕಿಸಿ ಗುಂಡುಗಳನ್ನು ಹೊಡಿಸುವುದಕ್ಕೆ ಪ್ರಾರಂಭಿಸಿದನು. ಹೈದರನ ಸೈನ್ಯವು ಕೋಟೆಯ ಹೊರಗೆ ಈಗ ದರಿಯಾ ದವಲತ್ತು ಕಟ್ಟಡವು ಇರುವ ಸ್ಥಳದಲ್ಲಿ ಇಳಿದಿತ್ತು. ಇದ್ದಕ್ಕೆ ಇದ್ದ ಹಾಗೆ ಗುಂಡುಗಳು ಬರುವುದನ್ನು ಕಂಡು ಹೈದ ರನು ತನ್ನನ್ನು ಖಂಡೇರಾಯನು ಮೋಸಪಡಿಸಿದನೆಂದು ತಿಳಿದು ಕೊಂಡು, ಸಾಯಂಕಾಲವಾಗುತ್ತಲೇ ಕೆಲವು ಆಪ್ತ ಜನರೊಡನೆ ನದಿಯನ್ನು ದಾಟಿ ಹೊರಟುಹೋದನು. ಮಾರನೆಯ ದಿವಸ ಖಂಡೇರಾಯನು ಹೈದರನ ಹೆಂಡತಿ ಮಕ್ಕಳನ್ನು ಕೋಟೆಯೊಳಕ್ಕೆ ಕರೆದುಕೊಂಡು ಹೊಗಿ ಸೆರೆಯಲ್ಲಿಡಿಸಿ ದನು. ಮತ್ತು ಹೈದರನು ಓಡಿಹೋಗಿರುವದಾಗಿಯೂ, ಕಾಗದಗಳನ್ನು ಬರೆದು ಗಡಿಗೆಳಿಗೆಲ್ಲ ಕಳುಹಿಸಿದನು.

೭೨. ಹೈದರನು ಶ್ರೀರಂಗಪಟ್ಟಣದಿಂದ ಹೋಗಿ ಬೆಂಗಳೂರನ್ನು ಸೇರಿದನು. ಅಲ್ಲಿಯ ಕಿಲ್ಲೇದಾರ್ ಕಬೀರ್‌ಬೇಗನು ಇವನ ಪರವಾಗಿದ್ದನು. ಆದಕಾರಣ, ಹೈಧರನಿಗೆ ವರ್ತಕರಿಂದ ನಾಲ್ಕು ಲಕ್ಷ ರೂಪಾಯಿ ಸಾಲ ತೆಗೆ ದುಕೊಳ್ಳುವುದಕ್ಕೆ ಅನುಕೂಲವಾಯಿತು. ಈ ಮೂಲಕ ಹೈದರನು ಪುನಃ ಸೈನ್ಯವನ್ನು ಸೇರಿಸಿದನು ಇಷ್ಟರಲ್ಲಿಯೇ ಅಲ್ಲಿಲ್ಲಿ ಚದರಿ ಹೋಗಿದ್ದ ಅವನ ಸೈನ್ಯದವರೂ ಬಂದು ಸೇರಿದರು. ಆಗ ಮರಾಟೆಯವರು ಹೈದರನಿಂದ ಲಂಚವನ್ನು ತೆಗೆದುಕೊಂಡು ಹಿಂದಕ್ಕೆ ಹೊರಟುಹೋದರು.

೭೩. ಹೀಗೆ ಅನುಕೂಲವಾಗುತ್ತಲೇ ಹೈದರನು ಬೆಂಗಳೂರಿಂದ ಹೊರಟು ಸೋಸಲೆಯ ಬಳಿ ಕಾವೇರೀ ನದಿಯನ್ನು ದಾಟಿ ನಂಜನಗೂಡಿಗೆ ಬಂದಿಳಿದನು. ಖಂಡೇರಾಯನು ದಂಡನ್ನು ತೆಗೆದುಕೊಂಡು ಹೋಗಿ ಅವ ನನ್ನು ಮುಂದಕ್ಕೆ ಬಿಡದೆ ಸೋಲಿಸಿದನು. ಅನಂತರ ಹೈದರನು ೨೦೦ ಕು ದುರೆಗಳನ್ನು ಮಾತ್ರ ಸಂಗಡ ತೆಗೆದುಕೊಂಡು ಕೊಣನೂರಿಗೆ ಹೋಗಿ, ಅಲ್ಲಿ ಕುದುರೆಗಳನ್ನು ದೂರದಲ್ಲಿ ನಿಲ್ಲಿಸಿ ತಾನುಮಾತ್ರ ನಂಜರಾಜಯ್ಯನ ಬಳಿಗೆ ಹೋಗಿ, ಪೂರ್ವದಲ್ಲಿ ತಾನುಮಾಡಿದ ತಪ್ಪಿಗೆ ತಕ್ಕ ಶಿಕ್ಷೆಯಾಯಿತು ; ತನ್ನ ಕಡೆಯವನಾಗಿದ್ದ ಖಂಡೇರಾಯನೇ ತನಗೆ ಎದುರುಬಿದ್ದಿರುತ್ತಾನೆ ; ತನ್ನ ತಪ್ಪನ್ನು ಈಗ ಮನ್ನಿಸಿ ಸಂರಕ್ಷಣೆಮಾಡಿದರೆ, ಮುಂದೆ ಎಂದಿಗೂ ದ್ರೋಹ ಮಾಡುವುದಿಲ್ಲ—ಎಂದು ಬಹಳವಾಗಿ ಬೇಡಿಕೊಂಡನು. ನಂಜರಾಜಯ್ಯನು ಈ ಮಾತುಗಳಿಗೆ ಮರುಳಾಗಿ ತನ್ನಲ್ಲಿದ್ದ ಸೈನ್ಯವನ್ನು ಕರೆದುಕೊಂಡು ಹೈದ ರನ ಸಂಗಡ ಕಟ್ಟೆಮಳಲವಾಡಿಯ ಬಳಿಗೆಬಂದಿಳಿದನು. ಈ ವರ್ತಮಾನ

ವನ್ನು ಖಂಡೇರಾಯನು ಕೇಳಿ ಜಾಗ್ರತೆಯಾಗಿ ದಂಡನ್ನು ತೆಗೆದುಕೊಂಡು ಅಲ್ಲಿಗೆ ಬಂದನು. ಇದರಿಂದ ನಂಜನಗೂಡು ಬಳಿ ಇದ್ದ ಹೈದರನ ಸೈನ್ಯವು ಬಂದು ಸೇರುವುದಕ್ಕೆ ಅಡ್ಡಿಯಾಯಿತು. ಆಗ ಹೈದರನು ಒಂದು ಉಪಾಯವನ್ನು ಮಾಡಿದನು. ಖಂಡೇರಾಯನ ಜನರು ಲಂಚವನ್ನು ತಿಂದು ಅವನನ್ನು ಹಿಡಿದುಕೊಡುವುದಕ್ಕೆ ಒಪ್ಪಿರುವಂತೆ ಸುಳ್ಳು ಕಾಗದವನ್ನು ನಂಜರಾಜಯ್ಯನ ಹೆಸರಿಗೆ ಬರಸಿ, ಈ ಕಾಗದಗಳು ಖಂಡೇರಾಯನ ಚೋರಪಹರೆಯವರ ಕೈಗೆ ಸಿಕ್ಕುವಹಾಗೆ ಮಾಡಿದನು. ಹೀಗೆ ಸಿಕ್ಕಿದ ಕಾಗದಗಳನ್ನು ಖಂಡೇರಾಯನು ನೋಡಿಕೊಂಡು, ಸರಿಯಾಗಿ ವಿಚಾರಿಸದೆ ದಿಗಿಲು ಪಟ್ಟು ಓಡಿಹೋದನು.

೭೪. ಅನಂತರ ಹೈದರನು ಖಂಡೇರಾಯನ ಸೈನ್ಯದ ಮೇಲೆ ಬಿದ್ದು ಅದನ್ನು ಎದುರಿಸಿದನು. ಆದರೂ ಕೂಡಲೇ ಶ್ರೀರಂಗಪಟ್ಟಣಕ್ಕೆ ಹೋಗಲು ಬಲ ಸಾಲದೆ ನಂಜರಾಜಯ್ಯನನ್ನು ಕಟ್ಟೆಮಳಲವಾಡಿಯಲ್ಲಿಯೇ ಬಿಟ್ಟು ತಾನು ಮಾತ್ರ ಹೊರಟು, ಸತ್ಯಮಂಗಲ ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡು, ಅನಂತರ ಶ್ರೀರಂಗಪಟ್ಟಣಕ್ಕೆ ಬಂದನು. ಅಲ್ಲಿ ತನ್ನ ಕಡೆಯವನಾದ ಖಂಡೇರಾಯನ್ನು ತನಗೊಪ್ಪಿಸಿ ಹಿಂದಣ ಸಂಬಳವನ್ನೆಲ್ಲಾ ತೀರಿಸಿದರೆ, ತಾನು ಇನ್ನೆಲ್ಲಿಯಾದರೂ ಹೊರಟು ಹೋಗುವುದಾಗಿ ದೊರೆಗಳಿಗೆ ಹೇಳಿ ಕಳುಹಿಸಿದನು. ಆದರ ಈ ಮಾತುಗಳನ್ನು ಹೈದರನು ಮನಃಪೂರ್ವಕವಾಗಿ ಆಡಿರಲಿಲ್ಲ ; ಕೊನೆಗೆ ಖಂಡೇರಾಯನನ್ನು ದೊರೆಗಳು ಒಪ್ಪಿಸಬೇಕಾಗಿ ಬಂದಿತು ; ಅವನ ಪ್ರಾಣವನ್ನು ತೆಗೆಯಕೂಡದೆಂದು ದೊರೆಗಳು ಕೇಳಿ ಕೊಂಡುದಕ್ಕೆ ಅವನನ್ನು ಗಿಣಿಯಹಾಗೆ ಸಾಕುವುದಾಗಿ ಹೈದರನು ಹೇಳಿದನು. ಇದಲ್ಲದೆ ಅರಮನೆಯ ವೆಚ್ಚಕ್ಕೆ ಮೂರು ಲಕ್ಷ ವರಹಗಳ ಸೀಮೆ, ನಂಜರಾಜಯ್ಯನಿಗೆ ಒಂದು ಲಕ್ಷ ವರಹದ ಸೀಮೆ, ಇವು ಹೊರತು ಮಿಕ್ಕ ಸೀಮೆಯಲ್ಲಾ ಹೈದರನ ವಿಚಾರಣೆಗೊಳಪಟ್ಟು, ಆಡಳಿತಗಳೆಲ್ಲ ಅವನ ಕೈಸೇರಿದುವು. ಹೈದರನು ತನ್ನ ಬಾಯಿಂದ ಹೊರಟಮಾತುಗಳನ್ನು ಮೀರಿ ತಾನು ನಡೆಯುವವನಲ್ಲವೆಂದು ಹೇಳಿ, ಖಂಡೇರಾಯನನ್ನು ಪಂಜರದಲ್ಲಿ ಸೆರೆಯಿಡಿಸಿ, ಬೆಂಗಳೂರಿಗೆ ಕಳುಹಿಸಿ, ಅಲ್ಲಿ ಗಣಿಗೆ ಕೊಡುವಂತೆ ಬರಿಯ ಅನ್ನವನ್ನೂ ಹಾಲನ್ನೂ ಕೊಡುತಾ ಬಂದನು.

# ೩ ನೆಯ ಭಾಗ.

## ಮುಸಲ್ಮಾನರ ಆಧಿಪತ್ಯ.

### ೧ ನೆಯ ಪ್ರಕರಣ.

#### ಸೀರ್ಯ ಮತ್ತು ಬಿದನೂರು ಹೈದರನಿಗೆ ಸೇರಿದುದು.

೭೫. ಹೈದರನಿಗೆ ಅಧಿಕಾರವೆಲ್ಲಾ ವಶವಾದನಂತರ, ಅವನು ದರ್ಖಾಸುಬೇದಾರ್ ಸಲಬತ್‌ಜಂಗನ ತಮ್ಮನಾದ ಬಸಾಲತ್‌ಜಂಗನೊಡನೆ ಸ್ನೇಹವನ್ನು ಬೆಳೆಯಿಸಿದನು. ಬಳಿಕ "ನವಾಬ್ ಹೈದರಲ್ಲೀಖಾ಼ ಬಹದ್ದೂರ್" ಎಂಬ ಹೆಸರಿನಿಂದ ಸೀರ್ಯದ ನವಾಬ್‌ಗಿರಿಗೆ ಅವನಿಂದ ಸನ್ನದನ್ನು ಪಡೆದನು. ಸೀರ್ಯದ ನವಾಬ್‌ಗಿರಿಯನ್ನು ಕೊಡುವುದಕ್ಕೆ ಬಸಾಲತ್ ಜಂಗನಿಗೆ ಅಧಿಕಾರವಿಲ್ಲವೆಂದು ಹೈದರನು ಸ್ಪಷ್ಟವಾಗಿ ತಿಳಿದಿದ್ದನು. ಆದರೂ ಮುಂದೆ ತನ್ನ ಕಾರ್ಯಕ್ಕೆ ಈ ಏರ್ಪಾಡು ಅನುಕೂಲವೆಂದು ಯೋಚಿಸಿ, ಅವನು ಕೊಟ್ಟ ಸನ್ನದನ್ನು ತೆಗೆದುಕೊಂಡನು.

೭೬. ಅನಂತರ ಬಸಾಲತ್‌ಜಂಗನೊಡನೆ ಸೇರಿ ಸೀರ್ಯದ ಕೋಟೆಯನ್ನೂ ದೊಡ್ಡ ಬಳ್ಳಾಪುರವನ್ನೂ ಸ್ವಾಧೀನ ಮಾಡಿಕೊಳ್ಳಲು ಹೊರಟನು. ಸೀರ್ಯವು ೧೭೬೧ ನೆಯ ಇಸವಿಯಲ್ಲಿ ಸ್ವಾಧೀನವಾಯಿತು. ಇಲ್ಲಿಂದ ಬಸಾಲತ್‌ಜಂಗನು ಆದವಾನಿಗೆ ಹೊರಟುಹೋದನು. ಹೈದರನು ಚಿಕ್ಕಬಳ್ಳಾಪುರವನ್ನು ಸಾಧಿಸಿ ಅನಂತರ ಸೀರ್ಯಕ್ಕೆ ಅಧೀನರಾಗಿದ್ದ ಹರಪನಹಳ್ಳಿ, ರಾಯದುರ್ಗ ಮತ್ತು ಚಿತ್ರದುರ್ಗದ ಪಾಳೆಯಗಾರರಿಂದ ವಾಡಿಕೆಯಾಗಿ ಬರಬೇಕಾಗಿದ್ದ ಪಗದಿಯ ಹಣವನ್ನು ತೆಗೆದುಕೊಂಡನು. ಹೈದರನು ಚಿತ್ರದುರ್ಗದ ಬಳಿಯಲ್ಲಿರುವಾಗ, ಬಿದನೂರು ಸಂಸ್ಥಾನವನ್ನು ಜಯಿಸುವುದಕ್ಕೆ ಕಾರಣವೂ ದೊರೆಯಿತು.

೭೭. ಬಿದನೂರು ಸಂಸ್ಥಾನವು ಈ ಕಾಲದಲ್ಲಿ ರಾಣಿ ವೀರಮ್ಮಾಜಿಯ ಆಳಿಕೆಯಲ್ಲಿ ಇತ್ತು. ಹಿಂದೆ ೧೫೬೦ ನೆಯ ಇಸವಿಯಲ್ಲಿ ಭದ್ರಗೌಡನೆಂಬವನು ವಿಜಯನಗರದ ದೊರೆಯ ಸಹಾಯವನ್ನು ಪಡೆದು, ಕೆಳದಿಯಲ್ಲಿ ರಾಜಧಾನಿಯನ್ನು ಸ್ಥಾಪಿಸಿದನು. ಇವನ ಮಗನು ಕಳದಿಯನ್ನು ಬಿಟ್ಟು ಇಕ್ಕೇರಿಯಲ್ಲಿ ನಿಂತನು. ೧೬೩೯ ನೆಯ ಇಸವಿಯಲ್ಲಿ ಬಿದನೂರು ರಾಜಧಾನಿಯಾಯಿತು. ಈ ಸಂಸ್ಥಾನವನ್ನು ಆಳಿದವರಲ್ಲಿ ಶಿವಪ್ಪನಾಯಕ

ನೆಂಬವನು ಎಲ್ಲರಿಗಿಂತಲೂ ಪ್ರಸಿದ್ಧನಾದವನು. ಈತನು ಹನ್ನೆರಡು ವರುಷಗಳ ವರೆಗೆ ಪ್ರತಿ ಗ್ರಾಮದಲ್ಲಿಯೂ ಭೂಮಿಗಳನ್ನು ವ್ಯವಸಾಯ ಮಾಡಿಸಿ, ವ್ಯವಸಾಯದ ಖರ್ಚನ್ನೂ ಉತ್ಪತ್ತಿಯನ್ನೂ ಸರಾಸರಿ ಹೋಲಿಸಿ, ಭೂಮಿಯ ಸಾರವಿದ್ದಂತೆ ಕಂದಾಯದ ಸಿಸ್ತನ್ನು ಏರ್ಪಡಿಸಿದನು.

೭೮. ಮೇಲೆ ಹೇಳಿದ ವೀರಮ್ಮಾಜಿಯ ಗಂಡನಾದ ಬಸಪ್ಪನಾಯಕನು ಪ್ರಸಿದ್ಧನಾದ ಶಿವಪ್ಪನಾಯಕನ ಸಂತತಿಯವನು. ೧೭೫೫ ನೆಯ ಇಸವಿಯಲ್ಲಿ ಇವನು ಚೆನ್ನಬಸಪ್ಪನಾಯಕನೆಂಬವನನ್ನು ದತ್ತು ಮಾಡಿಕೊಂಡು, ಅವನಿಗೆ ಪಟ್ಟವನ್ನು ಕಟ್ಟಿದನು. ಬಸಪ್ಪನಾಯಕನು ಸತ್ತಮೇಲೆ ವೀರಮ್ಮಾಜಿಯು ಕೆಟ್ಟನಡತೆಗೆ ಬಿದ್ದಳು, ದತ್ತು ಮಗನಾದ ಚೆನ್ನಬಸಪ್ಪನಾಯಕನು ಇದನ್ನು ನೋಡಿ ಸಹಿಸದಿರಲು, ವೀರಮ್ಮಾಜಿಯು ಅವನಿಗೆ ಎಣ್ಣೆಯನ್ನೊತ್ತುತ್ತಿದ್ದ ಜಟ್ಟಿಯೊಬ್ಬನಿಗೆ ಪ್ರೇರೇಪಿಸಿ, ಅವನ ಕುತ್ತಿಗೆಯನ್ನು ಮುರಿಸಿದಳು. ಆದರ ಮತ್ತೊಬ್ಬನು ಈ ಕಾಲದಲ್ಲಿ ತಾನೇ ಚೆನ್ನಬಸಪ್ಪನಾಯಕನೆಂದು ಹೆಸರಿಟ್ಟುಕೊಂಡು, ಹೈದರನನ್ನು ಮರೆಹೊಕ್ಕನು. ಹೈದರನು ಬಿದನೂರನ್ನು ಜಯಿಸುವುದಕ್ಕೆ ಇದು ಒಳ್ಳೆಯ ಸಮಯವೆಂದು ಆಲೋಚಿಸಿಕೊಂಡು, ೧೭೬೩ ನೆಯ ಇಸವಿಯಲ್ಲಿ ದಂಡನ್ನು ತೆಗೆದುಕೊಂಡು ಹೊರಟನು ಮಧ್ಯಮಾರ್ಗದಲ್ಲಿ ಶಿವಮೊಗ್ಗೆಯು ಸ್ವಾಧೀನವಾಯಿತು ಅಲ್ಲಿ ಹೈದರನಿಗೆ ಒಂದು ಲಕ್ಷ ವರಹ ಸಿಕ್ಕಿತು ವೀರಮ್ಮಾಜಿಯು ಹೈದರನ ಸೈನ್ಯವನ್ನು ತಡೆಯುವುದಕ್ಕೆ ಶಕ್ತಿ ಸಾಲದೆ, ಆತನು ಹಿಂದಕ್ಕೆ ಹೋದರೆ ೭೨ ಲಕ್ಷ ರೂಪಾಯಿ ಕೊಡುವುದಾಗಿ ಹೇಳಿ ಕಳುಹಿಸಿದಳು, ಆದರೆ ಹೈದರನು ಈ ಮಾತಿಗೆ ಒಪ್ಪಲಿಲ್ಲ. ಆಗ ವೀರಮ್ಮಾಜಿಯು ಬಳ್ಳಾಳರಾಯನದುರ್ಗಕ್ಕೆ ಓಡಿಹೋದಳು ಬಸವಪ್ಪನಾಯಕನ ಕಾಲದಲ್ಲಿ ಸರ್ವಾಧಿಕಾರಿಯಾಗಿದ್ದ ಲಿಂಗಣ್ಣನೆಂಬವನು ಹೈದರನ ಕಡೆ ಸೇರಿಕೊಂಡು, ಮೈಸೂರು ಸೈನ್ಯವನ್ನು ಕಳ್ಳದಾರಿಯಿಂದ ಬಿದನೂರು ಕೋಟೆಯೊಳಕ್ಕ ಕರೆದುಕೊಂಡು ಹೋದನು. ಪಟ್ಟಣದಲ್ಲಿ ಜನರೇ ಇರಲಿಲ್ಲ ನಿವಾಸಿಗಳೆಲ್ಲರೂ ತಮ್ಮ ತಮ್ಮ ಮಕ್ಕಳು ಮರಿಗಳ ಸಹಿತ ಕಾಡಿನಲ್ಲಿ ಅವಿತುಕೊಂಡಿದ್ದರು, ಇದಲ್ಲದೆ ವೀರಮ್ಮಾಜಿಯು ಅರಮನೆಗೆ ಬೆಂಕಿ ಹೊತ್ತಿಸಿದ್ದಳು. ಹೈದರನು ಉರಿಯನ್ನು ಆರಿಸಿ, ಪಟ್ಟಣವನ್ನೆಲ್ಲಾ ಲೂಟಿ ಮಾಡಿಸಲು, ಸುಮಾರು ಹನ್ನೆರಡು ಕೋಟಿ ರೂಪಾಯಿ ವರೆಗೂ, ಹಣದ ರೂಪವಾಗಿಯೂ, ಪದಾರ್ಥದ ರೂಪವಾಗಿಯೂ ಸಿಕ್ಕಿತು. ಅನಂತರ ಹೈದರನು ಕೆಲವು ಸೈನ್ಯವನ್ನು ಕಳುಹಿಸಿ ಮಂಗಳೂರು, ಹೊನ್ನಾವರ ಮುಂತಾದ ಸ್ಥಳಗಳನ್ನು ಸಾಧಿಸಿ ಬಳ್ಳಾಳರಾಯನ ದುರ್ಗದಲ್ಲಿದ್ದ ವೀರಮ್ಮಾಜಿಯನ್ನು ಸೆರೆಹಿಡಿಸಿ ಮದ್ದಗಿರಿಗೆ ಕಳುಹಿಸಿದನು

೭೯. ಬಳಿಕ ಬಿದನೂರಿಗೆ ''ಹೈದರ್‌ನಗರ ವೆಂದು'' ಹೆಸರಿಟ್ಟು ಅಲ್ಲಿ ಒಂದು ಟಂಕಸಾಲೆಯನ್ನಿಡಿಸಿ ''ಹೈದರಿ'' ಅಥವಾ ''ಬಹದ್ದರಿ'' ಎಂಬ ನಾಣ್ಯಗಳನ್ನು ಮಾಡಿಸಿ, ಸೀಮೆಯಲ್ಲೆಲ್ಲಾ ಅವುಗಳನ್ನು ಉಪಯೋಗಿಸು

ವಂತ ಆಜ್ಞೆ ಮಾಡಿದನು. ಇಷ್ಟರಲ್ಲಿಯೇ ಹೈದರನಿಗೆ ಶರೀರದಲ್ಲಿ ಆಲಸ್ಯವಾಯಿತು. ಈ ಸಮಯದಲ್ಲಿ ಲಿಂಗಣ್ಣನೇ ಮೊದಲಾದ ಕೆಲವು ಜನರು ಸೇರಿ ನಾಡು ಕೂಟವೆಬ್ಬಿಸಿ, ಹೈದರನನ್ನು ಕೊಂದು ನಗರವನ್ನು ತಾವೇ ಆಕ್ರಮಿಸಬೇಕೆಂದು ಪಿತೂರಿ ಮಾಡಿದರು. ಆದರೆ ಈ ಸುದ್ದಿಯು ಪ್ರಧಾನ ವೆಂಕಪ್ಪಯ್ಯನ ಮೂಲಕ ಹೈದರನಿಗೆ ತಿಳಿಯಿತು. ಕೂಡಲೆ ಪಿತೂರಿಗೆ ಸೇರಿದವರನ್ನೆಲ್ಲಾ ಗಲ್ಲಿಗೆ ಹಾಕಿಸಿದನು. ಇದಲ್ಲದೆ ಸುಮಾರು ೩೦೦ ಮಂದಿ ಗುಮಾನಿ ಜನರನ್ನು ಹಿಡಿಸಿ, ಊರು ಬಾಗಲಲ್ಲಿಯೂ ರಸ್ತೆಗಳಲ್ಲಿಯೂ ನೇಣು ಹಾಕಿಸಿದನು. ಅಲ್ಲಿಗೆ ಪುಂಡೆಲ್ಲ ಅಡಗಿ ಹೋಯಿತು.

---

## ೨ನೆಯ ಪ್ರಕರಣ.

### ಮರಾಟೆಯವರೊಡನೆ ಮತ್ತು ಇಂಗ್ಲಿಷರೊಡನೆ ಯುದ್ಧ.

೮೦. ಬಿದನೂರು ಕೈಸೇರಿದನಂತರ, ಹೈದರನು ಹೈದರಾಬಾದು ನಿಸಾಮನ ಸಂಗಡಲೂ ಮರಾಟೆಯವರ ಸಂಗಡಲೂ ಸ್ನೇಹವನ್ನು ಮಾಡಿಕೊಳ್ಳುವುದು ಉಚಿತವೆಂದು ಎಣಿಸಿ, ತನ್ನ ಕಡೆಯ ನಿಯೋಗಿಗಳನ್ನು ಅಲ್ಲಿಗೆ ಕಳುಹಿಸಿದನು. ಹೈದರಾಬಾದಿನಲ್ಲಿ ಹೈದರನ ಕಾರವು ಕೈಗೂಡಿ ನಿಸಾಮನೊಡನೆ ಸ್ನೇಹವಾಯಿತು. ಆದರೆ ಪುನಹೆಯಲ್ಲಿ ಪೇಷ್ವೆ ಮಾಧವರಾಯನು ಹೈದರನ ಯಾವ ಕೋರಿಕೆಗಳಿಗೂ ಕಿವಿಗೊಡಲಿಲ್ಲ.

೮೧. ಇದರಿಂದ ಹೈದರನು ಮರಾಟೆಯವರ ಮೇಲೆ ತಾನೇ ಮೊದಲು ಬೀಳುವುದು ಅನುಕೂಲವೆಂದು ಆಲೋಚಿಸಿ, ಸೈನ್ಯವನ್ನು ತೆಗೆದುಕೊಂಡು ಹೊರಟು ಸವಣೂರು ನವಾಬನಿಂದ ೨ ಲಕ್ಷ ರೂಪಾಯಿ ದಂಡವನ್ನು ತೆಗೆದುಕೊಂಡನು. ಮುಂದೆ ಧಾರವಾಡದ ವರೆಗೆ ಹೋಗಿ ಆ ಸ್ಥಳವನ್ನು ಸ್ವಾಧೀನಮಾಡಿಕೊಂಡು, ಬಿದನೂರಿಗೆ ಹಿಂದಿರುಗಿದನು. ೧೭೬೪ನೆಯ ಇಸವಿಯಲ್ಲಿ ಮಾಧವರಾಯನು ಸೈನ್ಯದೊಡನೆ ಬಿದನೂರು ಕಡೆಗೆ ಹೊರಟನು. ಆಗ ಹೈದರನು ೩೨ ಲಕ್ಷ ರೂಪಾಯಿ ಕೊಟ್ಟು ಸಮಾಧಾನ ಪಡಿಸಿಕೊಳ್ಳಬೇಕಾಯಿತು.

೮೨, ಹೈದರನು ೧೭೬೬ನೆಯ ಈಸವಿಯಲ್ಲಿ ಕಲ್ಲಿಕೋಟೆಯ ಕಡೆಗೆ ಹೊರಟನು. ಅಲ್ಲಿಯ ದೊರೆಯಾದ ಮಾನವಿಕ್ರಮನು ಅವನನ್ನು ತಡೆಯುವುದಕ್ಕೆ ಶಕ್ತಿ ಸಾಲದೆ ಹೆಚ್ಚಾಗಿ ಹಣವನ್ನು ಕೊಡುವುದಾಗಿ ಒಪ್ಪಿಕೊಂಡನು ; ಆದರೆ ಹಣ ಸಲ್ಲುವುದಕ್ಕೆ ಸ್ವಲ್ಪ ಸಾವಕಾಶವಾಯಿತು. ಆಗ ಹೈದರನು ಅವನನನ್ನು ಬಹಳವಾಗಿ ಪೀಡಿಸಿದನು. ಅದನ್ನು ತಡೆಯಲಾರದೆ ಮಾನವಿಕ್ರಮನು ಬೆಂಕಿಯಲ್ಲಿ ಬಿದ್ದು ಪ್ರಾಣವನ್ನು ಬಿಟ್ಟನು. ಅನಂತರ ಹೈದರನುಕಲ್ಲಿಕೋಟೆಯನ್ನು ಮೈಸೂರಿಗೆ ಸೇರಿಸಿಕೊಂಡನು. ಆದರೆ ಅಲ್ಲಿಯ

ಜನರಾದ ನಾಯಮಾರರು ಮಳೆಗಾಲ ಬರುವವರೆಗೂ ಸುಮ್ಮನಿದ್ದು ಆಗ ಮೈಸೂರು ಸೈನ್ಯದ ಮೇಲೆ ಕೈ ಮಾಡುವುದಕ್ಕೆ ಮೊದಲು ಮಾಡಿದರು. ಹೈದರನು ಈ ತಪ್ಪಿಗಾಗಿ ಬಹುಮಂದಿಯನ್ನು ಗಲ್ಲಿಗೆ ಹಾಕಿಸಿ ಸುಮಾರು ೧೫೦೦ ಜನರನ್ನು ಹಿಡಿಸಿ ಶ್ರೀರಂಗ ಪಟ್ಟಣಕ್ಕೆ ಕಳುಹಿಸಿದನು; ಇವರಲ್ಲಿ ೩೦೦ ಜನರು ಮಾತ್ರ ಶ್ರೀರಂಗ ಪಟ್ಟಣವನ್ನು ಸೇರಿದರು; ಉಳಿದವರೆಲ್ಲರೂ ದಾರಿಯಲ್ಲಿ ತಮಗುಂಟಾದ ಕಷ್ಟದಿಂದ ಸತ್ತು ಹೋದರು. ಇದೇ ಇಸವಿಯಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರು ತೀರಿಹೋದರು. ಆದುದರಿಂದ ಹೈದರನು ಅವರ ಮಗ ನಂಜರಾಜ ಒಡೆಯರಿಗೆ ಪಟ್ಟಾಭಿಷೇಕ ಮಾಡಿಸಿದನು. ೧೭೬೭ನೆಯ ಇಸವಿಯಲ್ಲಿ ಹೈದರನು ಶ್ರೀರಂಗ ಪಟ್ಟಣಕ್ಕೆ ಬಂದು ಅರಮನೆಯಲ್ಲಿದ್ದ ಎಲ್ಲಾ ಪದಾರ್ಥಗಳನ್ನೂ ದೋಚಿಕೊಂಡು, ದೊರೆಗಳ ವೆಚ್ಚಕ್ಕೆ ಬಿಟ್ಟಿದ್ದ ಸೀಮೆಯನ್ನೂ ತನ್ನ ವಿಚಾರಣೆಯಲ್ಲಿಟ್ಟುಕೊಂಡು, ಅರಮನೆಯಲ್ಲೆಲ್ಲಾ ತನ್ನ ಕಡೆಯ ಜನರನ್ನು ನೇಮಿಸಿದನು.

೮೩. ಹೈದರನು ಶ್ರೀರಂಗ ಪಟ್ಟಣವನ್ನು ಸೇರಿದ ಸ್ವಲ್ಪ ದಿವಸಗಳಲ್ಲಿಯೇ ಮರಾಟೆಯವರೂ, ಇಂಗ್ಲಿಷರೂ, ಹೈದರಾಬಾದಿನವರೂ ಒಟ್ಟು ಸೇರಿ ದಂಡು ತರುತ್ತಲಿದ್ದಾರೆಂದು ವರ್ತಮಾನ ಬಂದಿತು. ಸೀರ್ಯವನ್ನು ಸಾಧಿಸಬೇಕೆಂದು ಮರಾಟೆಯವರ ಸೇನೆಯು ಹೊರಟಿತು. ಹೈದರನು ತಮ್ಮ ಶತ್ರುಗಳಾದ ಫ್ರೆಂಚ್ ಜನರಲ್ಲಿ ಸ್ನೇಹವನ್ನು ಬೆಳಸಿದುದರಿಂದ, ಇಂಗ್ಲಿಷರು ದಂಡನ್ನು ಕಳುಹಿಸಿದರು. ಹೈದರಾಬಾದ್ ನಿಸಾಮನು ಈ ಸಮಯದಲ್ಲಿ ತಾನೂ ಯಾವುದಾದರೂ ಒಂದು ಪ್ರಯೋಜನವನ್ನು ಪಡೆಯಬೇಕೆಂದು ಹೊರಟನು.

೮೪. ಹೈದರನು ಮರಾಟೆಯವರ ಸೈನ್ಯದ ಮಾರ್ಗದಲ್ಲಿದ್ದ ಕೆರೆಗಳನ್ನೆಲ್ಲಾ ಒಡಿಸಿದ್ದನು, ಬಾವಿಗಳಿಗೆಲ್ಲಾ ಕಳ್ಳಿಗಳನ್ನು ಕಡಿಸಿ ಹಾಕಿಸಿದ್ದನು. ಕಾಲುನಡೆಗಳಿಗೆ ಹುಲ್ಲು ಸಿಕ್ಕಕೂಡದೆಂದು ಮನೆಗಳಿಗೆ ಹೊದ್ದಿಸಿದ್ದ ಹುಲ್ಲನ್ನೂ ಬಿಡದೆ ಸುಡಿಸಿದ್ದನು, ಇದಲ್ಲದೆ ಶತ್ರುಗಳಿಗೆ ಯಾವ ಅನುಕೂಲ್ಯವೂ ದೊರೆಯಕೂಡದೆಂದು ದಾರಿಯಲ್ಲಿದ್ದ ಗ್ರಾಮದವರನ್ನೆಲ್ಲಾ ಅವರವರ ಊರುಗಳನ್ನು ಬಿಟ್ಟು ಕಾಡಿನಲ್ಲಿರುವಂತೆ ಕಟ್ಟು ಮಾಡಿದ್ದನು. ಆದರೂ ಪೇಷ್ವೆ ಮಾಧವರಾಯನು ಈ ಅಡಚಣೆಗಳಿಗೆ ಹಿಂದೆಗೆಯದೆ ಸೀರ್ಯಕ್ಕೆ ಬಂದು ಸೇರಿ ಅದನ್ನು, ಸ್ವಾಧೀನಪಡಿಸಿಕೊಂಡನು. ಆಗ ಹೈದರನು ಮಾಧವರಾಯನಿಗೆ ೩೫ ಲಕ್ಷ ರೂಪಾಯಿ ಕೊಡುವುದಾಗಿ ಒಪ್ಪಿಕೊಂಡು, ಅರ್ಧವನ್ನು ಆಗಲೇ ಕೊಟ್ಟು, ಮಿಕ್ಕ ಅರ್ಧಕ್ಕೆ ಕೋಲಾರ ಮುಂತಾದ ಕೆಲವು ಸ್ಥಗಳನ್ನು ಭೋಗ್ಯಮಾಡಿದನು. ಮೂರು ನಾಲ್ಕು ತಿಂಗಳಲ್ಲಿ ಈ ಹಣವು ಸಂದುದರಿಂದ ಮಾಧವರಾಯನು ಕೋಲಾರವನ್ನು ಬಿಟ್ಟು ಪುನಹಿಗೆ ಹೊರಟು ಹೋದನು.

೮೫. ಆತನು ಹೀಗೆ ಹೊರಟುಹೋದ ದಿವಸವೇ ನಿಸಾಮನೂ ಇಂಗ್ಲಿಷರೂ ಕೋಲಾರದ ಬಳಿಗೆ ಬಂದು ಸೇರಿದರು. ಹೈದರನು ಉಪಾ

ಯದಿಂದ ನಿಸಾಮನನ್ನು ತನ್ನ ಕಡೆ ಮಾಡಿಕೊಂಡನು. ಅನಂತರ ಇಬ್ಬರೂ ಸೇರಿ ಇಂಗ್ಲಿಷರ ಮೇಲೆ ಕಾರ್ಯಭಾಗ ನಡೆಯಿಸುವುದಕ್ಕೆ ಪ್ರಾರಂಭಿಸಿದರು. ಆದರೆ ಚಂಗಮಾವು, ತಿರುವಣ್ಣಾಮಲೆ, ಈ ಎರಡು ಸ್ಥಳಗಳಲ್ಲಿಯೂ ಯುದ್ಧವಾಗಿ ಇಂಗ್ಲಿಷರಿಗೇ ಜಯವಾಯಿತು. ಮೈಸೂರು ಮತ್ತು ಹೈದರಾಬಾದ್ ಸೈನ್ಯಗಳು ಹಿಮ್ಮೆಟ್ಟಿದುವು. ಇದೇ ಪ್ರಕಾರ ಅಂಬೂರುದುರ್ಗವನ್ನು ಸಾಧಿಸುವ ಪ್ರಯತ್ನವೂ ಹೈದರನ ಕೈಗೂಡಲಿಲ್ಲ. ಆಗ ನಿಸಾಮನೂ ಧೈರ್ಯಗೆಟ್ಟು ಹೈದರಾಬಾದಿಗೆ ಹೊರಟುಹೋದನು.

೮೭. ಇಷ್ಟರಲ್ಲಿಯೇ ಮುಂಬೈ ಪ್ರಾಂತದಿಂದ ಹೊರಟಿದ್ದ ಇಂಗ್ಲಿಷರ ದಂಡೊಂದು ಮೈಸೂರಿಗೆ ಸೇರಿದ ಮಂಗಳೂರು ಹೊನ್ನಾವರ ಮೊದಲಾದ ಸ್ಥಳಗಳನ್ನು ಆಕ್ರಮಿಸಿತು. ಹೈದರನು ಕೂಡಲೆ ಸೈನ್ಯದೊಡನೆ ಹೊರಟು, ಇಂಗ್ಲಿಷ್‌ದಂಡು ಆಕ್ರಮಿಸಿದ್ದ ಸ್ಥಳಗಳನ್ನು ಪುನಃ ಸ್ವಾಧೀನಪಡಿಸಿಕೊಳ್ಳುತ್ತಿದ್ದನು. ಈ ಸಮಯದಲ್ಲಿ ಮದ್ರಾಸುಕಡೆಯಿಂದ ಹೊರಟಿದ್ದ ಇಂಗ್ಲಿಷರ ದಂಡು ಕಣಿವೆಹತ್ತಿ ಹೊಸಕೋಟೆಯ ಬಳಿ ಬಂದು ಇಳಿಯಿತು. ಈ ವರ್ತಮಾನವನ್ನು ಕೇಳಿ ಹೈದರನು ಬೆಂಗಳೂರಿಗೆ ಬಂದು ತನ್ನ ಸಂಸಾರವನ್ನೂ ಬೊಕ್ಕಸವನ್ನೂ ಸಾವನದುರ್ಗಕ್ಕೆ ಕಳುಹಿಸಿ, ತಾನು ಸೈನ್ಯದೊಡನೆ ಹೊರಟು ಸತ್ಯಮಂಗಲ, ಕೊಯಮುತ್ತೂರು ಮೊದಲಾದ ಸ್ಥಳಗಳನ್ನು ಆಕ್ರಮಿಸಿದನು. ಅಲ್ಲಿಂದ ಹೊರಟು ದಾರಿಯಲ್ಲಿದ್ದ ಊರುಗಳನ್ನೆಲ್ಲ ಲೂಟಿಮಾಡುತ್ತ ತಂಜಾವೂರು ಮಾರ್ಗವಾಗಿ ಮದರಾಸು ಬಳಿಗೆ ಇದ್ದಕ್ಕಿದ್ದಹಾಗೆ ಬಂದು ಇಳಿದನು. ಮದರಾಸು ಗವರ್ನಮೆಂಟಿನವರು ಇದಕ್ಕೆ ಸಿದ್ಧರಾಗಿರಲಿಲ್ಲವಾದುದರಿಂದ ಸಮಾಧಾನಮಾಡಿಕೊಳ್ಳುವುದಕ್ಕೆ ಒಪ್ಪಿಕೊಂಡರು. ಹೇಗೆಂದರೆ;—(೧) ಯುದ್ಧಾರಂಭವಾಗುವುದಕ್ಕೆ ಮುಂಚೆ ಇದ್ದಂತೆ ಅವರವರ ಸೀಮೆ ಅವರವರಿಗೇ ಇರತಕ್ಕುದು. (೨) ಪರರಾಜರು ಜಗಳಕ್ಕೆ ಕೆಣಕಿದಾಗ ಒಬ್ಬರಿಗೊಬ್ಬರು ಸಹಾಯ ಮಾಡತಕ್ಕುದು. ಹೀಗೆಂದು ೧೭೬೯ನೆಯ ಇಸವಿಯಲ್ಲಿ ಕರಾರು ಹುಟ್ಟಿ, ಯುದ್ಧವು ಶಾಂತವಾಯಿತು.

---

## ೩ ನೆಯ ಪ್ರಕರಣ.

### ಮರಾಟೆಯವರೊಡನೆ ಸ್ನೇಹ.

೮೮. ಇಂಗ್ಲಿಷರೊಡನೆ ಯುದ್ಧವು ಮುಗಿದ ಮೇಲೆ, ಹೈದರನು ಕಡಪ, ಕರ್ನೂಲು ಕಡೆ ಹೋಗಿ, ಅಲ್ಲಿಯ ನವಾಬರುಗಳಿಂದಲೂ, ಇನ್ನೂ ಇತರ ಸ್ಥಳಗಳ ಪಾಳೆಯಗಾರರಿಂದಲೂ, ಕಪ್ಪವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿದನು. ಅವರೆಲ್ಲರೂ ಹೈದರನಿಗೆ ಹಣವನ್ನು ಕೊಟ್ಟು ಸ್ನೇಹ

ವನ್ನು ಮಾಡಿಕೊಂಡರು. ಬಳ್ಳಾರಿಯಲ್ಲಿ ಮಾತ್ರ ಹೀಗೆ ನಡೆಯಲಿಲ್ಲ. ಅಲ್ಲಿಯ ಪಾಳೆಯಗಾರನು ತೀರಿಹೋಗಿ ಅವನ ಹೆಂಡತಿಯೆ ಆಡಳಿತವನ್ನು ನೋಡುತ್ತಿದ್ದಳು, ಇವಳು ಹೈದರನನ್ನು ಧಿಕ್ಕರಿಸಿ ಅವನಿಗೆ ಹೆದರತಕ್ಕವಳಲ್ಲವೆಂದು ತಿಳಿಸುವುದಕ್ಕೋಸ್ಕರ ಅರಸಿನ ಕುಂಕುಮವನ್ನು ಕೊಟ್ಟು ಕಳುಹಿಸಿದಳು. ಆದರೆ ಪೇಷ್ವೆ ಮಾಧವರಾಯನು ೧೭೭೦ ನೆಯ ಇಸವಿಯಲ್ಲಿ ಮೈಸೂರು ಸಂಸ್ಥಾನದಿಂದ ಕಪ್ಪವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಸೈನ್ಯದೊಡನೆ ಹೊರಟನಾದುದರಿಂದ ಹೈದರನು ಸದ್ಯಃ ಬಳ್ಳಾರಿಯನ್ನು ಬಿಟ್ಟು ಮರಾಟೆಯವರನ್ನು ತಡೆಯುವ ಪ್ರಯತ್ನ ಮಾಡಬೇಕಾಯಿತು.

೭೭. ಹೈದರನು ಮೊದಲಿನಂತೆ ಮರಾಟೆಯವರ ದಾರಿಯಲ್ಲಿದ್ದ ಗ್ರಾಮಗಳ ಜನರನ್ನು ಬೇರೆ ಸ್ಥಳಗಳಿಗೆ ಕಳುಹಿಸಿ ಶತ್ರುಗಳಿಗೆ ಹುಲ್ಲು, ನೀರು, ದಿನಸಿ ಸಿಕ್ಕದಂತೆ ಮಾಡಿಸಿದನು. ಇದಲ್ಲದೆ ಸೈನ್ಯವನ್ನು ಕರೆದುಕೊಂಡು ಸಾವನದುರ್ಗದ ಮಾರ್ಗವನ್ನು ಹಿಡಿದು ಹೊರಟನು. ಇಷ್ಟರೊಳಗೆ ಮಾಧವರಾಯನು ಕೋಲಾರ ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡು, ನೆಲಮಂಗಲದ ಸಮೀಪದಲ್ಲಿರುವ ನಿಜಗಲ್ಲಿಗೆ ಮುತ್ತಿಗೆ ಹಾಕಿ, ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಬಳಿಕ ಅಲ್ಲಿದ್ದ ಮೈಸೂರು ಸೈನ್ಯದವರನ್ನು ಸೆರೆಹಿಡಿದು ಅವರಿಗೆ ಭಯವನ್ನು ಹುಟ್ಟಿಸುವುದಕ್ಕೋಸ್ಕರ ಅವರ ಮೂಗನ್ನು ಕೊಯ್ದು ಹೊರಡಿಸುವಂತೆ ಅಪ್ಪಣೆಯನ್ನು ಕೊಟ್ಟನು. ಅವನ ಕಡೆಯ ಜನರು ಅದೇ ಪ್ರಕಾರ ಮಾಡುತ್ತಾ, ಕೊನೆಗೆ ಕಿಲ್ಲೇದಾರ್ ಸರದಾರ್‌ಖಾನನನ್ನು ತಂದು ನಿಲ್ಲಿಸಿದರು. ಆತನು ಅಂಜದೆ ಬರುತ್ತಿರುವುದನ್ನು ಮಾಧವರಾಯನು ಕಂಡು "ಎಲ್ಲರಿಗೂ ಮಾಡಿದಹಾಗೆ, ನಿನ್ನ ಮೂಗನ್ನು ಕೊಯ್ದು ನಿನ್ನನ್ನು ಅವಮಾನಕ್ಕೆ ಗುರಿಮಾಡುವುದು ನ್ಯಾಯವೇ ಖಾನೇ?" ಎಂದು ಕೇಳಿದನು. ಆ ಮಾತಿಗೆ ಸರ್ದಾರ್ ಖಾನನು "ನಿಮ್ಮ ಕೈಗೆ ಸಿಕ್ಕಿರುವುದರಿಂದ ಮೂಗನ್ನು ಕೊಯ್ಯಬಹುದು, ಆದರೆ ಅದರಿಂದುಂಟಾಗುವ ಅವಮಾನವು ನಿಮಗೆ ಆಗುತ್ತದೆಯೇ ಹೊರತು ನನಗೆ ಆಗುವುದಿಲ್ಲ" ಎಂದು ಹೇಳಿದನು. ಮಾಧವರಾಯನು ಆತನ ಧೈರ್ಯಕ್ಕೆ ಮೆಚ್ಚಿ ಅವನನ್ನು ಮರ್ಯಾದೆಯಿಂದ ಬಿಟ್ಟುಬಿಟ್ಟನು.

೭೮. ನಿಜಗಲ್ಲು ಸ್ವಾಧೀನವಾದಬಳಿಕ ಮಾಧವರಾಯನಿಗೆ ದೇಹದಲ್ಲಿ ಆಲಸ್ಯವಾದುದರಿಂದ ದಂಡಿನ ಮುಖ್ಯಾಧಿಕಾರವನ್ನು ತ್ರಿಯಂಬಕ ಮಾಮನಿಗೆ ವಹಿಸಿ, ತಾನು ಪುನಹೆಗೆ ಹೊರಟುಹೋದನು. ೧೭೭೧ ನೆಯ ಇಸವಿಯಲ್ಲಿ ತ್ರಿಯಂಬಕ ಮಾಮನು, ಸಾವನದುರ್ಗದ ಬಳಿ ಹೈದರನು ಇರುವುದನ್ನು ಕೇಳಿ, ಅವನನ್ನು ಅಟ್ಟಿಕೊಂಡು ಹೊರಟನು. ಹೈದರನು ಮರಾಟೆಯವರ ಸೈನ್ಯವು ಸಮೀಪಕ್ಕೆ ಬರುವಷ್ಟರಲ್ಲಿಯೇ ಶ್ರೀರಂಗಪಟ್ಟಣವನ್ನು ಸೇರಬೇಕೆಂದು ಪ್ರಯಾಣಮಾಡಿದನು. ಆದರೆ ತ್ರಿಯಂಬಕಮಾಮನು ಹೈದರನ ಬೆನ್ನಟ್ಟಿ, ಚಿನಕುರಳಿಯ ಬಳಿಯಲ್ಲಿ ಮೈಸೂರ ಸೈನ್ಯವನ್ನು ಅಡ್ಡಗಟ್ಟಿದನು.

ಅಲ್ಲಿ ಯುದ್ಧವಾಯಿತು. ಮೈಸೂರವರಲ್ಲಿ ಬಹು ಜನರು ಹತರಾದರು. ಹೈದರನು ಸಮೀಪದಲ್ಲಿದ್ದ ಒಂದು ಗುಡ್ಡದ ಮೇಲೆ ಹತ್ತಿ ತಲೆ ತಪ್ಪಿಸಿ ಕೊಂಡು ಶ್ರೀರಂಗಪಟ್ಟಣವನ್ನು ಸೇರಿದನು.

೯೦. ಅನಂತರ ತ್ರಿಯಂಬಕ ಮಾಮನು ಸೈನ್ಯದೊಡನೆ ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆಹಾಕಿದನು. ಹದಿನೈದು ತಿಂಗಳು ಕಳೆದರೂ ಮರಾಟೆಯವರನ್ನು ಹೊರಡಿಸುವುದಕ್ಕೆ ಆಗಲಿಲ್ಲ. ಆಗ ಹೈದರನು ಮೂವತ್ತು ಲಕ್ಷ ರೂಪಾಯಿ ಕೊಡುವುದಾಗಿ ಒಪ್ಪಿಕೊಂಡು, ಹಣವು ತೀರುವವರೆಗೆ ಕೋಲಾರ ಮುಂತಾದ ಕೆಲವು ಸ್ಥಳಗಳನ್ನು ಭೋಗ್ಯಮಾಡಿ, ಮರಾಟೆಯವರನ್ನು ಹಿಂದಕ್ಕೆ ಕಳುಹಿಸಿದನು. ೧೭೭೨ ನೆಯ ಇಸವಿ ಜೂನ್ ತಿಂಗಳಲ್ಲಿ ಜಗಳವು ನಿಂತಿತು.

೯೧. ಈ ಮಧ್ಯೆ ಪುನಹೆಯಲ್ಲಿ ಮಾಧವರಾಯನು ತೀರಿಹೋದನು ಆ ಮೇಲೆ ಅವನ ತಮ್ಮನನ್ನು ಅವನ ಚಿಕ್ಕಪ್ಪನಾದ ರಘುನಾಥರಾಯನೆಂಬವನು ಕೊಲ್ಲಿಸಿ ತಾನೇ ಪೇಷ್ವೆಯಾದನು. ಇದರಿಂದ ಅಲ್ಲಿಯ ಮಂತ್ರಿಗಳಿಗೆ ರಘುನಾಥರಾಯನಲ್ಲಿ ಭಕ್ತಿಯು ತಪ್ಪಿ, ದ್ವೇಷವುಂಟಾಗಿದ್ದಿತು. ಈ ಸಮಯವನ್ನು ನೋಡಿಕೊಂಡು ಹೈದರನು ಮರಾಟೆಯವರಿಗೆ ಭೋಗ್ಯಮಾಡಿದ್ದ ಕೋಲಾರ ಮುಂತಾದ ಸ್ಥಳಗಳನ್ನು, ಅವರಿಗೆ ಸಲ್ಲಬೇಕಾಗಿದ್ದ ಹಣವು ಸಲ್ಲುವುದಕ್ಕೆ ಮುಂಚೆಯೇ, ಸ್ವಾಧೀನಪಡಿಸಿಕೊಂಡನು. ರಘುನಾಥರಾಯನಿಗೆ ಹೈದರನ ಸಹಾಯವು ಬೇಕಾಗಿ ಇದ್ದುದರಿಂದ ಭೋಗ್ಯವಾಗಿದ್ದ ಸ್ಥಳಗಳನ್ನು ಬಿಟ್ಟುಬಿಟ್ಟನು, ಆದರೆ ಪುನಹೆಯ ಮಂತ್ರಿಗಳು ಕೆಲವು ದಿವಸಗಳ ಅನಂತರ ಹೈದರನನ್ನು ತಮ್ಮ ಕಡೆಯವನನ್ನಾಗಿ ಮಾಡಿಕೊಂಡರು. ಇದರಿಂದ ತುಂಗಭದ್ರಾ ಕೃಷ್ಣಾನದಿಗಳ ಮಧ್ಯೆ ಇರುವ ಸೀಮೆಯಿಂದ ವರುಷ ಒಂದಕ್ಕೆ ಮರಾಟೆಯವರಿಗೆ ೧೧ ಲಕ್ಷ ರೂಪಾಯಿ ಸಲ್ಲತಕ್ಕುದೆಂದು ೧೭೭೯ ನೆಯ ಇಸವಿಯಲ್ಲಿ ಗೊತ್ತಾಯಿತು.

---

## ೪ ನೆಯ ಪ್ರಕರಣ.

### ಚಿತ್ರದುರ್ಗ ಮುಂತಾದ ಸ್ಥಳಗಳು ಸೇರಿದುದು ; ಚಾಮರಾಜ ಒಡೆಯರು ದತ್ತರಾದುದು.

೯೨. ಹೈದರನ ಕಾಲದಲ್ಲಿ ಕೊಡಗು, ಬಳ್ಳಾರಿ, ಗುತ್ತಿ, ಚಿತ್ರದುರ್ಗ ಮತ್ತು ಕಡಪೆ–ಇವುಗಳು ಮೈಸೂರಿಗೆ ಸೇರಿದುವು. ತ್ರಿಯಂಬಕ ಮಾಮನು ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದ ವೇಳೆಯಲ್ಲಿ ಕೊಡಗಿನ ದೊರೆಯು ಮೈಸೂರು ಸೈನ್ಯಕ್ಕೆ ಬೇಕಾಗುವ ದಿನಸಿಗಳನ್ನು ಒದಗಿಸಿಕೊಡುವಂತೆ ಒಪ್ಪಿ ಆ ಮಾತಿಗೆ ತಪ್ಪಿದ್ದನು. ೧೭೭೪ ನೆಯ ಇಸವಿಯಲ್ಲಿ ಹೈದ

ರನು ಆತನ ದೇಶಕ್ಕೆ ನುಗ್ಗಿ ಕೊಡಗರ ತಲೆಯೊಂದಕ್ಕೆ ಐದು ರೂಪಾಯಿಗಳ ಕೊಟ್ಟು, ಸುಮಾರು ೭೦೦ ಮಂದಿಯನ್ನು ಕೊಲ್ಲಿಸಿದನು. ಮತ್ತು ಅಲ್ಲಿಯ ದೊರೆಯನ್ನು ಶ್ರೀರಂಗ ಪಟ್ಟಣದಲ್ಲಿ ಸೆರೆಯಲ್ಲಿಡಿಸಿದನು.

೯೩. ಹೈದರಾಬಾದ್ ಬಸಾಲತ್ ಜಂಗನು ೧೭೭೫ನೆಯ ಇಸವಿಯಲ್ಲಿ ಬಳ್ಳಾರಿಗೆ ಮುತ್ತಿಗೆ ಹಾಕಿದನು. ಹಿಂದೆ ಅರಿಸಿನ ಕುಂಕುಮವನ್ನು ಕಳುಹಿಸಿದ್ದ ಅಲ್ಲಿಯ ಪಾಳೆಯಗಾರನ ಹೆಂಡತಿಯು ಈಗ ಮೈಸೂರು ಸೈನ್ಯದ ಸಹಾಯವನ್ನು ಕೋರಿದಳು. ಹೈದರನು ಕೂಡಲೆ ಹೊರಟು ಬಸಾಲತ್ ಜಂಗನನ್ನು ಹೊರಡಿಸಿ, ಅನಂತರ ಬಳ್ಳಾರಿಯನ್ನು ತಾನೇ ಸೇರಿಸಿಕೊಂಡನು.

೯೪. ಹೈದರನು ೧೭೭೬ನೆಯ ಇಸವಿಯಲ್ಲಿ ಗುತ್ತಿ ಪ್ರಾಂತ ಹೊರಟು ಅಲ್ಲಿನ ದುರ್ಗಕ್ಕೆ ಮುತ್ತಿಗೆ ಹಾಕಿ, ಅದನ್ನು ಸ್ವಾಧೀನಪಡಿಸಿಕೊಂಡು, ಅಲ್ಲಿನ ಪಾಳೆಯಗಾರ ಮುರಾರಿರಾಯನನ್ನು ಹಿಡಿದು, ಕಬ್ಬಾಳ ದುರ್ಗದಲ್ಲಿ ಸೆರೆಯಲ್ಲಿಡಿಸಿದನು.

೯೫. ಇದೇ ಇಸವಿಯಲ್ಲಿ ಹೈದರನು ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಿದನು. ಕೋಟೆಯೊಳಗಿದ್ದ ಪಾಳೆಯಗಾರನ ಕಡೆಯ ಜನರು, ಪ್ರತಿಸೋಮವಾರವೂ ಬೆಟ್ಟದಮೇಲಿದ್ದ ಕಾಳಿಕಾದೇವಿಯ ಪೂಜೆಯಾದ ನಂತರ ಕಹಳೆಯಶಬ್ದವಾದ ಕೂಡಲೇ ಕೋಟೆಯಿಂದ ಹೊರಗೆ ಬಂದು, ಮೈಸೂರು ಸೈನ್ಯದ ಮೇಲೆಬಿದ್ದು. ಕೈಗೆ ಸಿಕ್ಕಿದ ಜನರ ತಲೆಗಳನ್ನು ಕತ್ತರಿಸಿಕೊಂಡು ಹೋಗಿ ಕಾಳಿಕಾದೇವಿಗೆ ಒಪ್ಪಿಸುತ್ತಿದ್ದರು. ಈ ರೀತಿಯಲ್ಲಿ ಕೆಲವು ದಿವಸಗಳ ವರೆಗೆ ನಡೆಯಿತು. ಕೊನೆಗೆ ಹೈದರನು ಪಾಳೆಯಗಾರ ಮದಕೆರೆ ನಾಯಕನಿಂದ ೧೩ ಲಕ್ಷ ವರಹಗಳು ಬರಬೇಕೆಂದು ಗೊತ್ತುಮಾಡಿಕೊಂಡನು, ಇದಕ್ಕಾಗಿ ಕೆಲವು ನಗಗಳು ಮಾತ್ರ ಹೈದರನ ವಶಕ್ಕೆ ಬಂದಿದ್ದವು ಇಷ್ಟರಲ್ಲಿಯೇ ಹರಿಪಂತನೆಂಬ ಮರಾಟೆ ಸರದಾರನು ದಂಡೆತ್ತಿ ಬರುವ ವರ್ತಮಾನ ಬಂದುದರಿಂದ, ಸಹಾಯಕ್ಕೆ ಬರುವಂತೆ ಮದಕೆರೆ ನಾಯಕನಿಗೆ ಹೇಳಿ, ಹೈದರನು ಹೊರಟು ಹೋದನು ಆದರೆ ಮದಕೆರೆನಾಯಕನು ಹಾಗೆ ಮಾಡದೆ ಹಿಂದೆಯೇ ನಿಂತುಬಿಟ್ಟನು. ಹೈದರನು ಹರಿಪಂತನನ್ನು ಹೊರಡಿಸಿದ ಮೇಲೆ, ಚಿತ್ರದುರ್ಗಕ್ಕೆ ಬಂದು ಪುನಃ ಮುತ್ತಿಗೆ ಹಾಕಿದನು ಮದಕೆರೆನಾಯಕನ ದಂಡಿನಲ್ಲಿ ೩,೦೦೦ ಜನ ಮುಸಲ್‌ಮಾನರಿದ್ದರು ಇವರು ಲಂಚ ತೆಗೆದುಕೊಂಡು ದ್ರೋಹಮಾಡಿದುದರಿಂದ ೧೭೭೯ ನೆ ಇಸವಿಯಲ್ಲಿ ಮದಕೆರೆ ನಾಯಕನು ಹೈದರನಿಗೆ ಶರಣಾಗತನಾದನು. ಹೈದರನು ಅವನನ್ನು ಶ್ರೀರಂಗ ಪಟ್ಟಣದಲ್ಲಿ ಸೆರೆಯಲ್ಲಿಡಿಸಿ ಚಿತ್ರದುರ್ಗವನ್ನು ಮೈಸೂರಿಗೆ ಸೇರಿಸಿಕೊಂಡನು. ಇದಲ್ಲದೆ ಸುಮಾರು ೨,೦೦೦ ಮಂದಿ ಬೇಡರನ್ನು ಹಿಡಿಸಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ಅಲ್ಲ ಅವರನ್ನು ಮಹಮ್ಮದೀಯ ಮತಕ್ಕೆ ಸೇರಿಸಿ, "ಸರ್ಕಾರ ಚೇಲೆಗಳೆಂದು" ಹೆಸರಿಟ್ಟು ಅವರದೊಂದು ಸೈನ್ಯವನ್ನು ಏರ್ಪಡಿಸಿದನು

೯೬. ಚಿತ್ರದುರ್ಗವನ್ನು ಸಾಧಿಸಿದ ನಂತರ ಹೈದರನು ಕಡಪೆಗೆ ಹೊರಟನು. ಅಲ್ಲಿಯ ನವಾಬನ ಬಳಿ ಇದ್ದ ಪಠಾಣರು ಹೈದರನನ್ನು ತಡೆಯುವುದಕ್ಕೆ ಬಹಳ ಸಾಹಸಮಾಡಿದರು. ಆದರೆ ಅದೆಲ್ಲವೂ ವ್ಯರ್ಥವಾಗಿ, ಕಡಗೆ ಅವರೆಲ್ಲರೂ ಕೈಸೆರೆ ಸಿಕ್ಕಿದರು. ಹೈದರನು ಅವರಲ್ಲಿ ಜಾಮೀನು ಕೊಟ್ಟವರನ್ನೆಲ್ಲಾ ತನ್ನ ಸೈನ್ಯಕ್ಕೆ ಸೇರಿಸಿಕೊಂಡನು. ೮೦ ಜನರಿಗೆ ಮಾತ್ರ ಯಾರೂ ಜಾಮೀನಾಗಲಿಲ್ಲ. ಇವರಲ್ಲಿ ಕೆಲವರು,ಒಂದು ದಿವಸ ಅರ್ಧರಾತ್ರಿಯಲ್ಲಿ ಎಲ್ಲರೂ ನಿದ್ರೆಯಲ್ಲಿ ಮೈಮರೆತಿರುವ ಸಮಯವನ್ನು ನೋಡಿಕೊಂಡು ಹೈದರನ ಡೇರೆಯೊಳಕ್ಕೆ ನುಗ್ಗಿ ಪಹರೆಯವರನ್ನು ಕಡಿದುಹಾಕಿದರು. ಕೂಡಲೆ ಹೈದರನಿಗೆ ಎಚ್ಚರವಾಗಲು, ಸುಪತ್ತಿಗೆಯಮೇಲೆ ತಾನೆ ಮಲಗಿದ್ದಂತೆ ಒಂದು ತಲೆದಿಂಬಿಗೆ ಸಕಲಾತಿಯನ್ನು ಹೊದಿಸಿ, ಹಿಂದಿನಿಂದ ಹೊರಕ್ಕೆ ತಪ್ಪಿಸಿಕೊಂಡು ಹೋಗಿ ತನ್ನ ಕಡೆಯವರಿಗೆ ಎಚ್ಚರಮಾಡಿ ಕೆಲವರನ್ನು ಒಳಕ್ಕೆ ಕಳುಹಿಸಿಕೊಟ್ಟನು. ಇವರು ಬಂದು ನೋಡುವ ವೇಳೆಯಲ್ಲಿ ಆ ಪಠಾಣರು ಸುಪ್ಪತ್ತಿಗೆಯ ಮೇಲಿದ್ದ ತಲೆದಿಂಬನ್ನೇ ಹೈದರನೆಂದು ಭಾವಿಸಿ ಚೂರು ಚೂರಾಗಿ ಕಡಿಯುತ್ತಿದ್ದರು. ಹೈದರನ ಕಡೆಯವರು ಇವರನ್ನೆಲ್ಲಾ ಹಿಡಿದು ಪಹರೆಯಲ್ಲಿರಿಸಿದರು. ಅನಂತರ ಹೈದರನು ಕೆಲವರಿಗೆ ಕೈಕಾಲುಗಳನ್ನು ಕೊಯ್ಸಿ, ಅವರನ್ನು ಮರಳಿನಲ್ಲಿ ಹೂಳಿಸಿದನು. ಕೆಲವರನ್ನು ಆನೆಯ ಕಾಲಿಗೆ ಕಟ್ಟಿಸಿ ಎಳೆಸಿದನು. ಹೀಗೆ ಪಠಾಣರ ಬಲವು ತಪ್ಪಿದ ಬಳಿಕ ಕಡಪೆಯ ನವಾಬನು, ಹೈದರನ ಮರೆಹೊಕ್ಕನು. ಆದರೆ ಹೈದರನು ಅವನನ್ನು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಡಿಸಿ, ಕಡಪೆಯನ್ನು ಮೈಸೂರಿಗೆ ಸೇರಿಸಿಕೊಂಡನು.

೯೭. ಹೈದರನು ೧೭೭೦ ನೆಯ ಇಸವಿಯಲ್ಲಿ ಮರಾಟೆಯವರನ್ನು ಸಮಾಧಾನಮಾಡಿ ಕಳುಹಿಸಿದ ನಂತರ, ಹೆಸರಿಗೆ ಮಾತ್ರ ದೊರೆಗಳಾಗಿದ್ದ ನಂಜರಾಜ ಒಡೆಯರು ತ್ರಿಯಂಬಕಮಾಮನೊಡನೆ ಸೇರಿ ತನಗೆ ವಿರೋಧವಾಗಿ ಆಲೋಚನೆ ಮಾಡಿದರೆಂದು ತಿಳಿದು, ಅವರು ಸ್ನಾನದ ಮನೆಯಲ್ಲಿ ಒಬ್ಬರೇ ಇದ್ದ ಕಾಲದಲ್ಲಿ, ಉಸಿರು ಬಿಡದಂತೆ ಮೂಗು ಬಾಯಿಗಳನ್ನು ಹಿಡಿಸಿ ಅವರನ್ನು ಕೊಲ್ಲಿಸಿ ಅವರ ತಮ್ಮಂದಿರಾದ ಚಾಮರಾಜ ಒಡೆಯರಿಗೆ, ಪಟ್ಟವನ್ನು ಕಟ್ಟಿದನು. ೧೭೭೫ ನೆಯ ಇಸವಿಯಲ್ಲಿ ಇವರೂ ತೀರಿಹೋದರು. ಇವರಿಗೆ ಮಕ್ಕಳಿರಲಿಲ್ಲ. ಆದುದರಿಂದ ಇಮ್ಮಡಿ ಕೃಷ್ಣರಾಜ ಒಡೆಯರ ಹೆಂಡತಿ ಲಕ್ಷ್ಮಮ್ಮಣ್ಣಿಯವರು ತಮಗೆ ಬೇಕಾದ ಒಬ್ಬ ಹುಡುಗನನ್ನು ದತ್ತು ಮಾಡಿಕೊಳ್ಳಬೇಕೆಂದಿದ್ದರು, ಆದರೆ ಅವರ ಅಭಿಪ್ರಾಯಕ್ಕೆ ಒಪ್ಪದೆ ಹೈದರನು ವಿಚಿತ್ರವಾದ ರೀತಿಯಲ್ಲಿ ಬೇರೊಂದು ಮಗುವನ್ನು ದತ್ತು ಮಾಡಿಸಿದನು. ಇದಕ್ಕಾಗಿ ರಾಜಬಂಧುಗಳಾದ ಚಿಕ್ಕ ಚಿಕ್ಕ ಮಕ್ಕಳುಗಳನ್ನು ಎಲ್ಲಾ ಕಡೆಯಿಂದಲೂ ಶ್ರೀರಂಗಪಟ್ಟಣಕ್ಕೆ ಕರೆಸಿದನು. ಅಲ್ಲಿ ತನ್ನ ಮನೆಯಲ್ಲಿ ಒಂದು ಸಭೆಯನ್ನು ಮಾಡಿಸಿ, ಒಂದು ಕಡೆಯಲ್ಲಿ ಖರ್ಜೂರ, ದ್ರಾಕ್ಷೆ, ಸಕ್ಕರೆ, ವಿಧವಿಧವಾದ ಹಣ್ಣುಗಳನ್ನೂ, ಮತ್ತೊಂದು ಕಡೆಯಲ್ಲಿ ಅನೇಕ ವಿಧವಾದ ಬಟ್ಟೆಗಳ

ನ್ನೂ, ಆಭರಣಗಳನ್ನೂ, ಇನ್ನೊಂದು ಕಡೆಯಲ್ಲಿ ಆಟದ ಸಾಮಾನುಗಳನ್ನೂ, ಬೇರೆ ಒಂದು ಕಡೆಯಲ್ಲಿ ಕನ್ನಡಿ ಮತ್ತು ಕಠಾರಿಯನ್ನೂ ಇಡಿಸಿ ಅವರವರಿಗೆ ಇಷ್ಟವಿರುವ ಪದಾರ್ಥಗಳನ್ನು ತೆಗೆದುಕೊಳ್ಳುವಂತೆ ಹೇಳಿದನು. ಆಗ ಅವರಲ್ಲಿ ಅರಿಕುಠಾರದ * ದೇವರಾಜೇ ಅರಸಿನವರ ಮೂರುವರ್ಷದ ಮಗು ಕಠಾರಿಯನ್ನೂ ಮತ್ತು ಕನ್ನಡಿಯನ್ನೂ ತೆಗೆದುಕೊಂಡಿತು ಹೈದರನು ಆ ಮಗುವಿಗೆ ಚಾಮರಾಜ ಒಡೆಯರೆಂಬ ಹೆಸರಿನಿಂದ ಪಟ್ಟವನ್ನು ಕಟ್ಟಿದನು.

---

## ೫ನೆಯ ಪ್ರಕರಣ

ಇಂಗ್ಲಿಷರೊಡನೆ ಯುದ್ಧ ; ಹೈದರನ ಮರಣ.

೯೮. ಪೇಷ್ವೆ ಮಾಧವರಾಯನು ಮೈಸೂರಮೇಲೆ ದಂಡೆತ್ತಿ ಬಂದಾಗ ಹೈದರನಿಗೂ ಇಂಗ್ಲಿಷರಿಗೂ ೧೭೬೯ನೆಯ ಇಸವಿಯಲ್ಲಿ ಹುಟ್ಟಿದ್ದ ಒಪ್ಪಂದದ ಪ್ರಕಾರ, ಹೈದರನು ಇಂಗ್ಲಿಷರ ಸಹಾಯವನ್ನು ಕೋರಿದನು. ಆದರೆ ಅವರು ಸಹಾಯವನ್ನು ಮಾಡದೆ ತಪ್ಪಿದರು. ಅದರಿಂದ ಅವನಿಗೆ ಇಂಗ್ಲಿಷರಮೇಲೆ ವೈರಹುಟ್ಟಿ, ಅವರನ್ನು ನೆಚ್ಚಕೂಡದೆಂದು ತಿಳಿದು, ಫ್ರೆಂಚ್ ಜನರನ್ನು ತನ್ನ ಸೈನ್ಯದಲ್ಲಿಟ್ಟುಕೊಂಡನು, ಕೌಂಟ್ ಡಿ ಲಾಲಿ ಎಂಬವನು ಈ ಫ್ರೆಂಚಿನವರಲ್ಲಿ ಮುಖ್ಯಸ್ಥನಾಗಿದ್ದನು. ಪುನಹೆಯ ಮಂತ್ರಿಗಳ ಸಂಗಡ ಸಂಧಿಯಾದ ಮೇಲೆ ಇಂಗ್ಲಿಷರಮೇಲೆ ದಂಡು ಹೊರಡಿಸುವುದಕ್ಕೆ, ಹೈದರನಿಗೆ ಅವಕಾಶ ದೊರೆಕಿತು. ಹೈದರಾಬಾದ್ ನಿಸಾಮನಿಗೂ ಪುನಹೆಯ ಮಂತ್ರಿಗಳಿಗೂ ಬೇರೆ ಬೇರೆ ಕಾರಣಗಳಿಂದ ಇಂಗ್ಲಿಷರಲ್ಲಿ ದ್ವೇಷ ಹುಟ್ಟಿತ್ತು, ಅವರೂ ಹೈದರನೊಡನೆ ಸೇರಿ ಇಂಗ್ಲಿಷರಮೇಲೆ ಕಾರ್ಯಭಾಗ ಮಾಡುವುದಕ್ಕೆ ಮೊದಲು ಮಾಡಿದರು.

೯೯. ಈ ಕಾಲಗಲ್ಲಿ ಇಂಗ್ಲಿಷರ ಮೇಲೆ ದಂಡನ್ನು ಹೊರಡಿಸುವುದಕ್ಕೆ ಹೈದರನಿಗೆ ತಕ್ಕ ನೆಪಗಳೂ ಇದ್ದುವು, ಪಶ್ಚಿಮ ತೀರದಲ್ಲಿರುವ "ಮಾಹಿ" ಎಂಬ ರೇವುಪಟ್ಟಣವು ತನಗೆ ಸೇರಿದುದೆಂದು ಹೈದರನು ಹೇಳಿದರೂ. ಆ ಮಾತನ್ನು ಲಕ್ಷೀಕರಿಸದೆ, ಅದು ಫ್ರೆಂಚರದೇ ಎಂದು ಹೇಳಿ ಇಂಗ್ಲಿಷರು ಅದನ್ನು ಆಕ್ರಮಿಸಿದರು. ಇದಲ್ಲದೆ ಕಡೆಪೆಯು ಮೈಸೂರಿಗೆ ಸೇರಿದಮೇಲೆ. ಇಂಗ್ಲಿಷರು ಹೈದರನ ಅಪ್ಪಣೆ ಇಲ್ಲದೆ ತಮ್ಮ ದಂಡನ್ನು ಆ ಮಾರ್ಗವಾಗಿ ಪ್ರಯಾಣಮಾಡಿಸಿದ್ದರು. ಈ ಪ್ರಕಾರ ಹೈದರನಿಗೆ ತಮ್ಮ ಮೇಲೆ ಮನಸ್ತಾಪವಿದೆಯೆಂದು ತಿಳಿಯುತ್ತಲೇ ಅದನ್ನು ಹೋಗಲಾಡಿಸುವುದಕ್ಕೋಸ್ಕರ ಮದ

---

* ಚಾಮರಾಜ ಒಡೆಯರ ಮಕ್ಕಳಾದ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ತಂದೆಗಳು ಹುಟ್ಟಿದ ಸ್ಥಳದ ಜ್ಞಾಪಕಕ್ಕೋಸ್ಕರ ಆ ಸ್ಥಳಕ್ಕೆ ಚಾಮರಾಜನಗರವೆಂದು ಹೆಸರಿಟ್ಟು ಅಲ್ಲಿ ಚಾಮರಾಜೇಶ್ವರ ದೇವಸ್ಥಾನವನ್ನು ಕಟ್ಟಿಸಿದರು.

ರಾಸ್ ಗವರ್ನಮೆಂಟಿನವರು ಷ್ವಾರ್ಟ್ಸ್ ಎಂಬ ಪಾದ್ರಿಯನ್ನು ಶ್ರೀರಂಗ ಪಟ್ಟಣಕ್ಕೆ ಕಳುಹಿಸಿಕೊಟ್ಟರು. ಆದರೆ ಈತನ ಪ್ರಯತ್ನಗಳು ಫಲಿಸಲಿಲ್ಲ. ೧೭೮೦ ನೆಯ ಇಸವಿ ಜುಲೈ ತಿಂಗಳಲ್ಲಿ ಹೈದರನು ಮೈಸೂರು ಸೈನ್ಯವನ್ನು ಯುದ್ಧಕ್ಕೋಸ್ಕರ ಕಣಿವೆಯ ಕೆಳಕ್ಕೆ ಹೊರಡಿಸಿದನು.

೧೦೦. ಈ ಸೈನ್ಯವು ಇಂಗ್ಲಿಷರ ಸ್ನೇಹಿತನಾದ ಆರ್ಕಾಟ್ ನವಾಬ್ ಮಹಮದಲ್ಲ ಖಾನನ ಸೀಮೆಗೆ ಮೊದಲು ನುಗ್ಗಿತು. ಅಲ್ಲಿ ಹೈದರನು ಊರುಗಳನ್ನೆಲ್ಲಾ ಕೊಳ್ಳೆಹೊಡಿಸಿ, ಅವುಗಳಿಗೆ ಬೆಂಕಿ ಹಚ್ಚಿಸಿ, ಜನರನ್ನು ಗಾಸಿಪಡಿಸಿದನು. ಇದರಿಂದ ಮದರಾಸು ಸುತ್ತುಮುತ್ತು ಸುಮಾರು ೫೦ ಮೈಲಿಗಳವರೆಗೂ ಹಾಳಾಯಿತು. ಹೈದರನು ಪಾಲಿಲೂರೆಂಬ ಸ್ಥಳದಬಳಿ ಗುಂಟೂರು ಕಡೆಯಿಂದ ಹೊರಟುಬರುತ್ತಿದ್ದ ಇಂಗ್ಲಿಷ್ ಸೈನ್ಯದಮೇಲೆ ಬಿದ್ದು, ಅದನ್ನು ಸಂಪೂರ್ಣವಾಗಿ ಸೋಲಿಸಿದನು. ಸೇನಾಪತಿಯಾದ ಬೇಲಿಯೇ ಮೊದಲಾಗಿ ೩೦೦ ಸೋಲ್ಜರುಗಳು ಕೈಸೆರೆ * ಸಿಕ್ಕಿದರು.

೧೦೧. ಇಷ್ಟರಲ್ಲಿಯೇ ಬಂಗಾಳದಲ್ಲಿದ್ದ ಗವರ್ನರ್ ಜನರಲ್ ವಾರನ್‌ಹೇಸ್ಟಿಂಗ್ಸ್ ಸಾಹೇಬನು, ಸರ್ ಐರ್ ಕೂಟ್‌ಎಂಬ ಪ್ರಸಿದ್ಧನಾದ ಸೇನಾ ಪತಿಯೊಡನೆ ಒಂದು ದಂಡನ್ನು ಮದರಾಸ್ ಸೈನ್ಯದ ಸಹಾಯಕ್ಕೆ ಕಳುಹಿಸಿ ಕೊಟ್ಟನು. ಈ ದಂಡು ಬಂದು ಸೇರಿದಮೇಲೆ, ಹೈದರನು ಚೆಂಗಲ್‌ಪೇಟೆ ಮತ್ತು ವಾಂಡಿವಾಸಕ್ಕೆ ತಾನು ಹಾಕಿದ್ದ ಮುತ್ತಿಗೆಗಳನ್ನು ಬಿಡಬೇಕಾಯಿತು. ತರುವಾಯ ಅವನು ತಂಜಾವೂರು ಸೀಮೆಯನ್ನು ಹೊಕ್ಕು ಲೂಟಿಮಾಡಿ ಅಲ್ಲಿ ಸಿಕ್ಕಿದ ಸಮಸ್ತ ಪದಾರ್ಥಗಳನ್ನೂ ಮೈಸೂರಿಗೆ ಸಾಗಿಸಿದನು. ಮತ್ತು ಅನೇಕ ಜನ ಸೇಯಿಗೆಯವರನ್ನು ಮಕ್ಕಳು ಮರಿಗಳೊಡನೆ ಹಿಡಿಸಿ ಶ್ರೀರಂ ಗಪಟ್ಟಣಕ್ಕೆ ಕಳುಹಿಸಿಕೊಟ್ಟನು,

೧೦೨. ಪೋರ್ಟೋನೋವೋ ಎಂಬ ಸ್ಥಳದಲ್ಲಿ ೧೭೮೧ ನೆಯ ಇಸವಿಯಲ್ಲಿ ನಡೆದ ಕದನದಲ್ಲಿ ಹೈದರನಿಗೆ ಸೋಲುಂಟಾಯಿತು. ಅನಂತರ ಪಾಲಿಲೂರ್ ಬಳಿ ಎರಡನೆಯಾವೃತ್ತಿ ಯುದ್ಧವಾಗಿ, ಅಲ್ಲಿಯೂ ಜಯಶ್ರೀಯು ಸರ್‌ಐರ್‌ಕೂಟನ ಕೈಹಿಡಿದಳು. ಹೀಗೆಯೇ ಷೋಳಿಂಗರೆಯ ಬಳಿಯಲ್ಲಿಯೂ ಹೈದರನಿಗೆ ಸೋಲುಂಟಾಯಿತು. ಇದಲ್ಲದೆ ಪಶ್ಚಿಮ ತೀರದಲ್ಲಿಯೂ ಇಂಗ್ಲಿಷರ ದಂಡು ತಲಚೇರಿ ಮುಂತಾದ ಸ್ಥಳಗಳನ್ನು ಆಕ್ರಮಿಸಿಕೊಂಡಿತು.

೧೦೩. ಇಷ್ಟರಲ್ಲಿ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್ ಸಾಹೇ ಬನು, ಉಪಾಯಮಾಡಿ ಮರಾಟೆಯವರನ್ನೂ ಮತ್ತು ನಿಸಾಮನನ್ನೂ ಹೈದರನ ಪಕ್ಷದಿಂದ ಅಗಲಿಸಿದನು. ಹೈದರನಿಗೆ ಸರ್ ಐರ್ ಕೂಟನಿಂದುಂ ಟಾದ ಸೋಲೊಂದುಕಡೆ, ಸರಿಯಾದ ಕಾಲಕ್ಕೆ ಫ್ರೆಂಚಿನವರ ಸಹಾಯ ದೊರೆ ಯದೆ ಇದ್ದುದು ಒಂದು ಕಡೆ, ಪಶ್ಚಿಮತೀರವು ಶತ್ರುಗಳ ಪಾಲಾದುದು

---

* ಈ ಯುದ್ಧದ ಚಿತ್ರವು ಶ್ರೀರಂಗಪಟ್ಟಣದ ದರಿಯಾದವಲತ್ತು ಗೋಡೆಯಮೇಲೆ ಬರೆದಿದೆ.

ತುತ್ತೊಂದು ಕಡೆ—ಹೀಗೆ ಎಲ್ಲಾ ಕಡೆಯಲ್ಲಿಯೂ ಹೊಗಸುತ್ತಾಯಿತು. ಈ ವೇಳೆಯಲ್ಲಿ ಅವನು ಆರ್ಕಾಡು ಸಮೀಪದಲ್ಲಿದ್ದನು. ಅಲ್ಲಿ ಅವನಿಗೆ ಬೆನ್ನು ಫಣಿ ಎಂಬ ವ್ರಣರೋಗವುಂಟಾಗಿ, ೧೭೮೨ನೆಯ ಇಸವಿ ಡಿಸೆಂಬರು ೭ನೆಯ ತಾರೀಖಿನಲ್ಲಿ ಮೃತನಾದನು. ಸಾಯುವಾಗ ಅವನಿಗೆ ೬೦ ವರುಷ ವಯಸ್ಸಾಗಿತ್ತು.

೧೦೪. ಈಕಾಲದಲ್ಲಿ ಪೂರ್ಣಯ್ಯನವರು, ಮೀರ್‌ಸಾದಕ್, ಅಬ್ಬೂ ಮಹಮ್ಮದ್ ಮಿರ್ಜೆ, ತೋಶೀಖಾನೆ ಕೃಷ್ಣರಾಯರು, ಮತ್ತು ಅಂಚೇ ಶಾ ಮುಯ್ಯ—ಇವರುಗಳು ಮುಖ್ಯರಾದ ಅಧಿಕಾರಿಗಳಾಗಿದ್ದರು. ಹೈದರನು ಸತ್ತ ಸಂಗತಿಯನ್ನು ಹೊರಪಡಿಸಿದರೆ, ಸೈನ್ಯದ ಕಟ್ಟು ತಪ್ಪಬಹುದೆಂದು ಪೂರ್ಣಯ್ಯನವರು ಎಚ್ಚರಿಸಲು, ಆ ಮಾತಿಗೆ ಎಲ್ಲರೂ ಒಪ್ಪಿ, ಆ ಸುದ್ದಿಯನ್ನು ಗುಟ್ಟಾಗಿಟ್ಟುಕೊಂಡರು. ಇವರು ಹೈದರನ ಶರೀರವನ್ನು ತೊಳೆಯಿಸಿ ಒಂದು ಪೆಟ್ಟಿಗೆಯಲ್ಲಿಡಿಸಿ, ಹೊರಕ್ಕೆ ಕೆಟ್ಟ ವಾಸನೆ ಬಾರದಂತೆ ಗಂಧದಪುಡಿ, ಪಚ್ಚ ಕರ್ಪೂರ ಪುನುಗು ಮುಂತಾದ ಪದಾರ್ಥಗಳನ್ನು ತುಂಬಿಸಿ, ಪೆಟ್ಟಿಗೆಗೆ ಮೊಹರು ಮಾಡಿಸಿ ಜವಾಹಿರು ಪೆಟ್ಟಿಗೆಯಂತೆ ಅದನ್ನು ಕೋಲಾರಕ್ಕೆ ಕಳುಹಿಸಿ ಕೊಟ್ಟರು. ಈ ಕಾಲದಲ್ಲಿ ಹೈದರನ ಹಿರಿಯ ಮಗನಾದ ಟೀಪುವು, ಇಂಗ್ಲಿಷರಿಂದ ಆಕ್ರಮಿಸಲ್ಪಟ್ಟಿದ್ದ ತಲಚೇರಿ ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಹೋಗಿ, ಪಾಣಿಯಾಣಿ ಎಂಬ ಸ್ಥಳದಲ್ಲಿ ಸೋಲುಂಟಾದುದರಿಂದ ಹೆಚ್ಚಾಗಿ ಸಹಾಯಬೇಕೆಂದು ಹೈದರನಿಗೆ ಹೇಳಿ ಕಳುಹಿಸಿ, ಅಲ್ಲಿಯೇ ಕಾದುಕೊಂಡಿದ್ದನು. ಮೇಲೆ ಹೇಳಿದ ಅಧಿಕಾರಿಗಳು ಹೈದರನ ಮರಣದ ಸಂಗತಿಗೆ ಗುಟ್ಟಾಗಿ ಕಾಗದವನ್ನು ಬರೆಸಿ, ಟೀಪುವಿದ್ದ ಸ್ಥಳಕ್ಕೆ ಕಳುಹಿಸಿದರು. ಅನಂತರ ಇವರೆಲ್ಲರೂ ಪ್ರತಿದಿನವೂ, ಹೈದರನ ಡೇರೆಯೊಳಕ್ಕೆ ಪ್ರವೇಶಿಸಿ, ಅಲ್ಲಿ ಪದ್ಧತಿಯ ಪ್ರಕಾರ ಅವನಿಗೆ ವರಧಿ ಹೇಳಿ, ಅಪ್ಪಣೆಯನ್ನು ಪಡೆಯುವಂತೆ ಜನರಿಗೆ ತೋರ್ಪಡಿಸಿ, ಟೀಪು ಬರುವವರೆಗೂ ಸಕಲವಾದ ಕೆಲಸಗಳನ್ನು ತಾವೇ ನೆರವೇರಿಸುತ್ತಿದ್ದರು.

---

## ೬ನೆಯ ಪ್ರಕರಣ.

### ಹೈದರನ ಗುಣದೋಷಗಳು.

೧೦೫. ಹೈದರನ ದಿವಸದಲ್ಲ ಹೈದರಾಬಾದ್ ನಿಸಾಮನ ಮತ್ತು ಮರಾಟೆಯವರ ಹಾವಳಿಯು ಹೆಚ್ಚಿ, ಈ ಸಂಸ್ಥಾನದ ಹೆಸರೇ ತೊಡೆದುಹೋಗುವ ಹೊತ್ತು ಬಂದಿತ್ತು. ಆದರೆ ಈ ವಿಪತ್ತು ಹೈದರನ ಶೌರ್ಯದಿಂದ ಹೋಗಲಾಡಿಸಲ್ಪಟ್ಟಿತು. ರಾಜ್ಯಾಧಿಕಾರವು ಯಾದವಕುಲದ ಅರಸುಗಳ

ಕ್ಕೆತಪ್ಪಿ ಮುಸಲ್ಮಾನರಿಗೆ, ಸೇರಿದರೂ, ಸಂಸ್ಥಾನದ ಹೆಸರು ಉಳಿದುಕೊಂಡು ಮೊದಲಿಗಿಂತಲೂ ಹೆಚ್ಚಾದ ಪ್ರಸಿದ್ಧಿಯನ್ನು ಪಡೆಯಿತು. ಹೈದರನು ಸಾಯುವ ಕಾಲದಲ್ಲಿ ರಾಜ್ಯವು ಕೃಷ್ಣಾನದಿಯವರೆಗೆ ವಿಸ್ತರಿಸಲ್ಪಟ್ಟಿದ್ದಿತು. ಬಹುಮಂದಿ ಪಾಳೆಯಗಾರರು ಅವನ ಆಶ್ರಯದಲ್ಲಿದ್ದರು. ಬೊಕ್ಕಸದಲ್ಲಿ ೩ ಕೋಟಿ ರೂಪಾಯಿ ಹಣದ ರೂಪದಲ್ಲಿಯೂ, ಮತ್ತು ಬಹಳವಾಗಿ ಜವಾಹಿರುಗಳೂ, ವಸ್ತ್ರಗಳೂ ಇದ್ದುವು, ಸೈನ್ಯದಲ್ಲಿ ೮೮,೦೦೦ ಜನರಿದ್ದರು.

೧೦೬. ಹೈದರನು ಸಣ್ಣ ಕೆಲಸದಿಂದ ದೊಡ್ಡದಾದ ಪದವಿಗೆ ಹತ್ತಿದ ನೆಂಬುದು ತಿಳಿದೇ ಇದೆಯಷ್ಟೆ. ಇವನಿಗೆ ಸರಿಯಾಗಿ ರುಜು ಮಾಡುವ ಮಟ್ಟಿಗೂ ಬರವಣಿಗೆ ಬರುತ್ತಿರಲಿಲ್ಲ. ಹಿಂದುಸ್ಥಾನಿಯ ಭಾಷೆಯಲ್ಲಿ ತನ್ನ ಹೆಸರಿನ ಮೊದಲನೆಯ ಅಕ್ಷರವನ್ನು ತಲೆಕೆಳಗಾಗಿ ಬರೆದು ರುಜು ಮಾಡುತ್ತಿದ್ದನು. "ರಾಜ್ಯದ ಆಡಳಿತವನ್ನು ನಡೆಸುವುದಕ್ಕೆ ಒಬ್ಬನ ಸ್ವಂತ ಸಾಮರ್ಥ್ಯವೇ ಕಾರಣ, ಓದು ಬರಹ ಕಾರಣವಲ್ಲ" ಎಂದು ಈತನು ಹೇಳುತ್ತಿದ್ದನು. ಚಿತ್ರದುರ್ಗವು ಕೈಸೇರಿದಾಗ, ಅಲ್ಲಿಯ ಫೌಜುದಾರಿಯ ಕೆಲಸಕ್ಕೆ ಷೇಕ್ ಆಯಾಸ್ ಎಂಬವನನ್ನು ನೇಮಕಮಾಡಲು, ಆತನು ತನಗೆ ಓದು ಬರಹ ಬಾರದೇ ಇದ್ದುದರಿಂದ ಕೆಲಸವನ್ನು ನಡೆಸುವುದು ಕಷ್ಟವೆಂದು ಹೇಳಿದನು. ಅದಕ್ಕೆ ಹೈದರನು, "ಓದು ಬರೆಹವೇತಕ್ಕೆ, ಅದನ್ನು ಮುತ್ಸದ್ದಿಯರಿಗೂ ಮುನಷಿಯರಿಗೂ ಬಿಡು. ಓದು ಬರೆಹವಿಲ್ಲದೆ ನಾನು ಕೆಲಸವನ್ನು ನಡೆಸುವುದಿಲ್ಲವೇ ? ಕೈಯಲ್ಲಿ ಒಂದು ಕೊರಡೆಯೂ, ಮನಸ್ಸಿನಲ್ಲಿ ತಿಳಿವಳಿಕೆಯೂ ಇದ್ದರೆ ಸಾಕು. ಎಲ್ಲಾ ಕೆಲಸಗಳೂ ಸರಾಗವಾಗಿ ಜರುಗುತ್ತವೆ" ಎಂದು ಹೇಳಿದನು. ಓದುವುದಕ್ಕೂ ಬರೆಯುವುದಕ್ಕೂ ಬಾರದಿದ್ದರೂ ಹೈದರನು ಹಿಂದುಸ್ಥಾನಿ, ಕನ್ನಡ, ಮಹಾರಾಷ್ಟ್ರ, ತೆನುಗು, ತಮಿಳು ಭಾಷೆಗಳಲ್ಲಿ ಚೆನ್ನಾಗಿ ಮಾತನಾಡುತ್ತಿದ್ದನು, ಅವನಿಗೆ ಜ್ಞಾಪಕಶಕ್ತಿಯೂ ಬಹಳವಾಗಿತ್ತು. ತಾನು ನೋಡಿದ ಜನರನ್ನೂ ಕೇಳಿದ ಸಂಗತಿಗಳನ್ನೂ ಎಷ್ಟು ದಿನಗಳಾದರೂ ಮರೆಯುತ್ತಿರಲಿಲ್ಲ.—ಪ್ರತಿದಿನವೂ ಬೆಳಗಾಗುತಲೆ ಮುಖವನ್ನು ತೊಳೆಯುವಾಗ, ಕಳ್ಳಭಂಟರೇ ಮೊದಲಾದವರು ತಿಳಿದುಕೊಂಡು ಬಂದು ಹೇಳಿದ ಸಂಗತಿಗಳನ್ನು ಕೇಳುತ್ತಿದ್ದನು. ಅವಂತರ ದರ್ಬಾರಿನಲ್ಲಿ ಕುಳಿತುಕೊಂಡು, ಬಂದ ಕಾಗದಗಳನ್ನು ಓದಿಸಿ ಕೇಳಿ ಹಿಂದೆ ನಡೆದ ಸಂಗತಿಗಳನ್ನು ನೆನಪಿಟ್ಟುಕೊಂಡು ತಕ್ಕ ಉತ್ತರಗಳನ್ನು ರಾಯಸದವರಿಂದ ಬರೆಯಿಸುತ್ತಿದ್ದನು. ಅವರು ಬರೆದುದನ್ನು ಮತ್ತೊಬ್ಬನಿಂದ ಓದಿಸಿ ಕೇಳಿ, ತಾನು ಹೇಳಿದಂತೆ ಇರುವುದನ್ನೂ ಇಲ್ಲದುದನ್ನೂ ತಿಳಿದುಕೊಳ್ಳುತ್ತಿದ್ದನು.

೧೦೭. ಮುಖ್ಯಸ್ಥಳಗಳಲ್ಲಿ ನಡೆಯುವ ವರ್ತಮಾನಗಳನ್ನು ಬರೆದು ಕಳುಹಿಸುವಂತೆ ಬಹಿರಂಗವಾಗಿ ಒಬ್ಬ ರಾಯಸದವನನ್ನೂ, ಗುಟ್ಟಾಗಿ ಮತ್ತೊಬ್ಬ ರಾಯಸದವನನ್ನೂ ಏರ್ಪಾಡು ಮಾಡಿಟ್ಟು, ಮೋಸಮಾಡುತ್ತ

ದಕ್ಕೆ ಮಾರ್ಗವಿಲ್ಲದಂತೆ ಮಾಡಿದ್ದನು. ಕಳ್ಳಭಂಟರು ಎಲ್ಲೆಲ್ಲಿಯೂ ಇದ್ದು ಕೊಂಡು ಜನರು ಅವರವರ ಮನೆಗಳಲ್ಲಿ ಆಡಿದ ಮಾತುಗಳನ್ನೂ ಸಹ ಬಿಡದೆ ತಿಳಿದುಕೊಂಡು ಹೈದರನಿಗೆ ಹೇಳುತ್ತಿದ್ದರು. ಇದಲ್ಲದೆ ಹೈದರನೇ ರಾತ್ರಿ ವೇಳೆ ರೂಪನ್ನು ಮರೆಸಿಕೊಂಡು ಜನರಿಗೆ ತಿಳಿಯದಂತೆ ಬೀದಿಗಳಲ್ಲಿ ತಿರುಗಿ ಮರ್ಮಗಳನ್ನೆಲ್ಲಾ ಅರಿಯುತ್ತಿದ್ದನು. ಇದರಿಂದ ಹೈದರನ ಹೆಸರು ಜನ ರಿಗೆ ಸಿಂಹಸ್ವಪ್ನವಾಗಿತ್ತು. ಮದುವೆ ಮುಂಜಿಗಳಲ್ಲಿ ಊಟಕ್ಕೆ ಕರೆಯ ಬೇಕಾದರೂ, ಸರ್ಕಾರಕ್ಕೆ ತಿಳಿಸಿ ಕರೆಯಬೇಕಾಗಿತ್ತು, ಅನ್ಯದೇಶದವರು ಮೈಸೂರ ಸೀಮೆಯೊಳಕ್ಕೆ ಬಂದನಂತರ ಹಿಂದಕ್ಕೆ ಹೋಗಬೇಕಾದರೆ, ಅಪ್ಪಣೆಯನ್ನು ಪಡೆದೇ ಹೋಗಬೇಕಾಗಿತ್ತು.

೧೦೮. ಹೈದರನಿಗೆ ಮತ ವೈರವಿರಲಿಲ್ಲ. ಹಿಂದೂ ದೇವಸ್ಥಾನಗ ಳಿಗೆ ಅನೇಕವೇಳೆ ಸಹಾಯ ಮಾಡಿದನು. ಷ್ವಾರ್ಟ್ಸ್ ಪಾದ್ರಿಯು ಶ್ರೀರಂಗ ಪಟ್ಟಣಕ್ಕೆ ಬಂದಿದ್ದಾಗ ಕ್ರೈಸ್ತಮತವನ್ನು ಕುರಿತು ಇಷ್ಟಬಂದಲ್ಲಿ ಜನರಿಗೆ ಹೇಳ ಬಹುದೆಂದು ಅಪ್ಪಣೆ ಕೊಟ್ಟಿದ್ದನು.

೧೦೯. ದರ್ಯಾದವಲತ್‌ಬಾಗ್, ಲಾಲ್‌ಬಾಗ್, ಗಂಜಾಮದ ಪೇಟೆ ಇವೆಲ್ಲವೂ ಹೈದರನ ಕಾಲದಲ್ಲ ಕಟ್ಟಲ್ಪಟ್ಟುವು. ಅವನು ಆಗಿಂದಾಗ ತನ್ನ ಅರಮನೆಯ ಎದುರಿಗೆ ಬಲೆಗಳನ್ನು ಹೂಡಿಸಿ, ಅಲ್ಲಿ ಹುಲಿ, ಕರಡಿ, ಕಾಡುಹಂದಿ ಮುಂತಾದ ದುಷ್ಟಮೃಗಗಳನ್ನು ಬಿಡಿಸಿ ಬೇಟೆಯಾಡುತ್ತಿದ್ದನು. ಕೆಲವು ವೇಳೆಗಳಲ್ಲಿ ಜಟ್ಟಿಗಳನ್ನು ಬಿಟ್ಟು ಅವುಗಳ ಮೇಲೆ ಕೈಮಾಡುವಂತೆ ಹೇಳುತ್ತಿದ್ದನು. ಆ ಮೃಗಗಳಿಂದ ಒಂದುವೇಳೆ ಅಪಾಯವುಂಟಾಗ ಬಹುದೆಂದು ತೋರಿದರೆ ತನ್ನ ಕೈಬಂದೂಕಿನಿಂದ ಗುರಿತಪ್ಪದೆ ಅವುಗಳನ್ನು ಹೊಡೆದು, ಕೆಳಗೆ ಬಿದ್ದಿದ್ದ ಜಟ್ಟಿಗಳ ಪ್ರಾಣವನ್ನು ಉಳಿಸುತ್ತಿದ್ದನು.

೧೧೦. ಹೈದರನಲ್ಲಿ ಕೆಲವು ಕೆಟ್ಟ ಗುಣಗಳೂ ಇದ್ದುವು. ಅವನಿಗೆ ಹಣದ ಮೇಲೆ ಬಹಳ ಆಸೆ ಇತ್ತು. ತನಗೆ ಸ್ವಾಮಿಯಾಗಿದ್ದ ನಂಜರಾಜಯ್ಯನ ಜಹಗೀರನ್ನು ಕಿತ್ತುಕೊಂಡುದಲ್ಲದೆ ಅವನನ್ನು ಸೆರೆಯಲ್ಲಿಯೂ ಇಡಿಸಿದನು. ಜನರನ್ನು ಸುಲಿಗೆ ಮಾಡುವುದಕ್ಕೆ ಉಪಾಯಗಳನ್ನು ಕಂಡು ಹಿಡಿಯುವುದ ರಲ್ಲಿ ಅಂಚೆ ಇಲಾಖೆಯ ಯಜಮಾನನಾಗಿದ್ದ ಶಾಮಯ್ಯನು ಹೈದರನಿಗೆ ಬಹಳ ಸಹಾಯವಾಗಿದ್ದುಕೊಂಡು ಅಂತಹ ಉಪಾಯಗಳನ್ನು ಜಾರಿಗೆ ತರು ವುದರಲ್ಲಿ ಮುಂದಾಳಾಗಿದ್ದನು. ಜನರು ಸುಲಭವಾಗಿ ಹಣವನ್ನು ಕೊಡದೆ ಇದ್ದರೆ, ಅಂತಹವರನ್ನು ಕೊರಡೆಯಿಂದ ಹೊಡಿಸುವುದು, ಹಗ್ಗದಿಂದ ಕಟ್ಟಿಸಿ ಬಿಸಲಿನಲ್ಲಿ ನಿಲ್ಲಿಸುವುದು, ಆನೆಯ ಕಾಲಿಗೆ ಕಟ್ಟಿಸಿ ಎಳೆಸುವುದು, ಹೀಗೆ ವಿಚಿತ್ರ ವಾದ ಹಿಂಸೆಗಳನ್ನು ಮಾಡಿಸುತ್ತಿದ್ದನು. ಸೈನ್ಯಕ್ಕೆ ತಿಂಗಳಿಗೊಂದಾವೃತ್ತಿ ಸಂಬಳವು ಸಲ್ಲುತ್ತಿದ್ದುದನ್ನು ತಪ್ಪಿಸಿ; ಹದಿನೈದು ದಿನಗಳಿಗೊಂದಾವೃತ್ತಿ ಕೊಡುವುದೆಂದು ಗೊತ್ತು ಮಾಡಿದನು. ಸರಿಯಾಗಿ ಹದಿನೈದು ದಿನಗಳು ಕಳೆದೊಡನೆಯೇ ಕೊಡುತ್ತಿರಲಿಲ್ಲ; ಮೂರುನಾಲ್ಕು ದಿವಸಗಳು ಮುಂದಕ್ಕೆ

ತಳ್ಳಿ ಸಂಬಳವನ್ನು ಕೊಟ್ಟು ಆ ದಿವಸ ಮೊದಲು ಮಾಡಿಕೊಂಡು ಮುಂದಿನ ಹದಿನೈದು ದಿವಸಗಳನ್ನು ಎಣಿಸುತ್ತ, ಹೀಗೆ ಕೂಡಿಬಂದ ದಿವಸಗಳ ಸಂಬಳದ ಹಣವನ್ನು ಸರ್ಕಾರಕ್ಕೆ ಉಳಿಸುತ್ತಿದ್ದನು, ಕುದುರೆಯ ಇಲಾಖೆಯವರಿಗೆ ತಿಂಗಳುಗಟ್ಟಲೆಯ ಲೆಕ್ಕ ಹಾಕಿ, ಇಪ್ಪತ್ತು ದಿನಕ್ಕೊಂದಾವೃತ್ತಿ ಮೂರರಲ್ಲಿ ಎರಡು ಭಾಗವನ್ನು ಕೊಟ್ಟು ನಿಂತ ಒಂದು ಭಾಗವನ್ನು ಉಳಿಸಿಕೊಂಡು ಒಂದು ವರ್ಷ ಅಥವಾ ಎರಡು ವರ್ಷಗಳು ಕಳೆದನಂತರ ಒಟ್ಟಾಗಿ ಕೊಡತಕ್ಕುದೆಂದು ಗೊತ್ತುಮಾಡಿ, ಆ ಕಾಲ ಬಂದಾಗ ಲೂಟಿಯಲ್ಲಿ ಸಿಕ್ಕಿದ್ದ ಪದಾರ್ಥಗಳಿಗೆ ಹೆಚ್ಚು ಕ್ರಯ ಕಟ್ಟಿಕೊಟ್ಟು, ಕೊಡಬೇಕಾದ ಹಣಕ್ಕೆ ಸಾಟಿಮಾಡುತ್ತಿದ್ದನು. ಹೈದರನಲ್ಲಿ ಮತ್ತೊಂದು ಕೆಟ್ಟಗುಣವಿತ್ತು. ರೂಪವತಿಯರಾದ ಹೆಂಗಸರು ಎಲ್ಲಿದ್ದರೂ ಅವರನ್ನು ಬಲಾತ್ಕಾರದಿಂದ ತರಿಸಿ, ಬೇಕಾದವರನ್ನು ತನ್ನ ಜನಾನಿಯಲ್ಲಿ ಸೇರಿಸಿಕೊಂಡು, ಉಳಿದವರನ್ನು ದಂಡಿನ ಜನರಲ್ಲಿ ಹಂಚುತ್ತಿದ್ದನು. ಅವನು ಸಾಯುವಾಗ ಅವನ ಜನಾನಿಯಲ್ಲಿ ಸುಮಾರು ೭೦೦ ಮಂದಿ ಹೆಂಗಸರಿದ್ದರು.

———

## ೭ ನೆಯ ಪ್ರಕರಣ.

ಇಂಗ್ಲೀಷರೊಡನೆಯೂ, ಮರಾಟೆಯವರೊಡನೆಯೂ ಸಮಾಧಾನ.

೧೧೧. ಹೈದರನು ಮೃತಪಟ್ಟ ಸಂಗತಿಯು ಟೀಪುವಿಗೆ ತಿಳಿಯುತ್ತಲೇ, ಅವನು ಪಾಣಿಯಾಣಿಯಿಂದ ಹೊರಟು ಕೋಲಾರವನ್ನು ಸೇರಿ, ತನ್ನ ತಂದೆಯ ಶರೀರವನ್ನು ಶ್ರೀರಂಗಪಟ್ಟಣದ ಗುಂಬಜಿನಲ್ಲಿ ಗೋರಿ ಮಾಡುವಂತೆ ಕಳುಹಿಸಿ, ಅನಂತರ ಆರ್ಕಾಡುಬಳಿ ಇಳಿದಿದ್ದ ಮೈಸೂರು ಸೈನ್ಯವನ್ನು ಸೇರಿ ತನ್ನ ತಂದೆಯ ಅಧಿಕಾರವನ್ನು ವಹಿಸಿದನು.

೧೧೨. ಇಷ್ಟರಲ್ಲಿಯೇ ಬೊಂಬಾಯಿಂದ ಹೊರಟಿದ್ದ ಇಂಗಿಷರ ದಂಡೊಂದು ಬಿದನೂರು ಮತ್ತು ಮಂಗಳೂರು, ಈ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿತು. ಆದುದರಿಂದ ಟೀಪುವು ಆ ಪ್ರಾಂತ ಹೊರಟು, ಕೈಬಿಟ್ಟು ಹೋಗಿದ್ದ ಸ್ಥಳಗಳನ್ನು ತಿರುಗಿ ಸ್ವಾಧಿನಪಡಿಸಿಕೊಂಡನು. ಅತ್ತಲಾಗಿ ಮದರಾಸ್ ಕಡೆಯಿಂದ ಹೊರಟಿದ್ದ ಇಂಗ್ಲಿಷ್ ಸೈನ್ಯವೊಂದು ಕರೂರು ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡು ಕೊಯಮುತ್ತೂರನ್ನು ಸೇರಿತು. ಇದಲ್ಲದೆ ತಾವು ಶ್ರೀರಂಗ ಪಟ್ಟಣದಲ್ಲಿ ಸ್ವಲ್ಪ ಗಲಭೆಯನ್ನುಂಟುಮಾಡಿದ ಹೊರತು ತಮಗೆ ಜಯವುಂಟಾಗಲಾರದೆಂದು ಮದರಾಸ್ ಗವರ್ನಮೆಂಟಿನವರು ಆಲೋಚಿಸಿ, ತಂಜಾವೂರಲ್ಲಿದ್ದ ತಿರುಮಲರಾಯ ನಾರಾಯಣ ರಾಯ, ಇವರ ಮೂಲಕ ಇಮ್ಮಡಿಕೃಷ್ಣರಾಜ ಒಡೆಯರ ಹೆಂಡತಿ ಲಕ್ಷ್ಮಮ್ಮ

ಣ್ಣಿಯವರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದರು ; ಹೈದರನು ಬದುಕಿರುವಾಗಲೇ ಇದು ನಡೆದಿದ್ದಿತು. ಹೈದರನನ್ನು ಸೋಲಿಸಿ, ರಾಜಾಧಿಕಾರವನ್ನು ಪುನಃ ರಾಜಮನೆತನಕ್ಕೆ ಕೊಡಿಸುವುದೇ ಈ ಒಪ್ಪಂದದ ಮುಖ್ಯೋದ್ದೇಶ. ಇದರ ಪ್ರಕಾರ ಈಗ ಇಂಗ್ಲಿಷ್ ಸೈನ್ಯವು ಕೊಯಮುತ್ತೂರನ್ನು ಸೇರಿತು. ಆದರೆ ಸೈನ್ಯವು ಮುಂದಕ್ಕೆ ಹೊರಡುವಷ್ಟರಲ್ಲಿಯೇ ತಿರುಮಲರಾಯನ ಕಡೆಯವರು ಶ್ರೀರಂಗಪಟ್ಟಣದ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಮಾಡಿದ್ದ ಪಿತೂರಿಯು ಹೊರಪಟ್ಟು ಅನೇಕರು ಕೊಲ್ಲಲ್ಪಟ್ಟರೆಂದು ವರ್ತಮಾನ ಬಂದಿತು. ಇದರಿಂದ ೧೭೮೪ನೆಯ ಇಸವಿಯಲ್ಲಿ ಮದರಾಸ್ ಗವರ್ನಮೆಂಟಿನವರು ಟೀಪುವಿನೊಡನೆ ಸಮಾಧಾನ ಮಾಡಿಕೊಂಡರು ಇದಕ್ಕೆ ಮಂಗಳೂರು ಒಪ್ಪಂದವೆಂದು ಹೆಸರು. ಇದರಿಂದ, ಯುದ್ಧಕ್ಕೆ ಮುಂಚೆ ಇದ್ದ ಹಾಗೆ ಅವರವರಿಗೆ ಸೇರಿದ ಸೀಮೆಯು ಅವರವರಿಗೇ ಇರತಕ್ಕುದು, ಮತ್ತು ಯುದ್ಧದಲ್ಲಿ ಕೈಸೆರೆ ಸಿಕ್ಕಿದ ಜನರನ್ನು ಎರಡು ಕಡೆಯವರೂ ಬಿಡುಗಡೆ ಮಾಡತಕ್ಕುದು, ಎಂದು ಗೊತ್ತಾಯಿತು.

೧೧೩. ಇಂಗ್ಲಿಷರೊಡನೆ ಯುದ್ಧವು ನಿಂತ ತರುವಾಯ, ಟೀಪುವಿಗೂ ಮರಾಟೆಯವರಿಗೂ ಮನಸ್ತಾಪ ಹುಟ್ಟಿತು. ಪರಶುರಾಂ ಭಾವನ ಬೀಗನಾದ ನರುಗುಂದದ ದೇಸಾಯಿಯಿಂದ ಟೀಪುವು ಬಹಳ ದಂಡವನ್ನು ತೆರಿಸಿದನು. ಇದರಿಂದ ಪುನಹೆಯ ಮಂತ್ರಿ ನಾನಾ ಫರ್ನವೀಸನು ಅವನ ಪಕ್ಷವನ್ನು ವಹಿಸಿ ಟೀಪುವಿನಿಂದ ಬರಬೇಕಾಗಿದ್ದ ಪಗದಿಯನ್ನು ಕೊಡಬೇಕೆಂದು ವರಾತಹಡಿಸಿ ಸೇನೆಯನ್ನು ಕಳುಹಿಸಿದನು ಈ ಸೇನೆಯೊಡನೆ ಹೈದರಾಬಾದ್ ನಿಸಾಮನ ಸೇನೆಯೂ ಹೊರಟಿತು. ಟೀಪುವು ನರುಗುಂದ, ಸಹಣೂರು ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡು ಮರಾಟೆಯವರಿಗೆ ಜಯವಾಗದಂತೆ ತಡೆದಿದ್ದನು. ಆದರೂ ಇಂಗ್ಲಿಷರು ಅವರೊಡನೆ ಸೇರುವರೆಂಬ ಭಯದಿಂದ, ಮರಾಟೆಯವರಿಗೆ ೪೫ ಲಕ್ಷ ರೂಪಾಯಿ ಪಗದಿಕೊಡುವುದಾಗಿಯೂ, ನರುಗುಂದ ಮುಂತಾದ ಸ್ಥಳಗಳನ್ನು ಬಿಟ್ಟು ಕೊಡುವುದಾಗಿಯೂ, ಒಪ್ಪಿಕೊಂಡು ೧೭೮೭ನೆಯ ಇಸವಿಯಲ್ಲಿ ಸಂಧಿ ಮಾಡಿಕೊಂಡನು.

---

## ೮ನೆಯ ಪ್ರಕರಣ.

### ಇಂಗ್ಲಿಷರೊಡನೆ ಮೂರನೆ ಯುದ್ಧ.

೧೧೪. ಇಂಗ್ಲಿಷರಿಗೂ, ನಿಸಾಮನಿಗೂ ೧೭೮೮ನೆಯ ಇಸವಿಯಲ್ಲಿ ಹೊಸದಾಗಿ ಒಂದು ಕರಾರು ಹುಟ್ಟಿ ಇಂಗ್ಲಿಷರು ನಿಸಾಮನ ಸಹಾಯಕ್ಕೆ ಹೈದರಾಬಾದಿನಲ್ಲಿ ಒಂದು ಸೈನ್ಯವನ್ನಿಡುವಂತೆ ಒಪ್ಪಿಕೊಂಡರು.

ಇದರಿಂದ ತನ್ನ ಮೇಲೆ ಮುಂದೆ ಕಾರ್ಯಭಾಗ ಮಾಡುತ್ತಾರೆಂದು ಟೀಪುವಿಗೆ ಸಂಶಯವುಂಟಾಗಿ, ಅವನು ೧೭೮೯ ನೆಯ ಇಸವಿಯಲ್ಲಿ ಅನಂತ ಶಯನ ವನ್ನು ಸ್ವಾಧೀನಪಡಿಸಿಕೊಂಡನು. ಅನಂತ ಶಯನದ ದೊರೆಯು ಇಂಗ್ಲಿ ಷರ ಆಶ್ರಯದಲ್ಲಿದ್ದುದರಿಂದ ಅವರು ಆತನ ಸಹಾಯಕ್ಕಾಗಿ ಹೋದರು. ಮರಾಟೆಯವರಿಗೂ ನಿಸಾಮನಿಗೂ ಟೀಪುವಿನ ಪ್ರಾಬಲ್ಯವನ್ನು ಅಡಗಿಸ ಬೇಕೆಂಬ ಮನಸ್ಸಿದ್ದುದರಿಂದ ಅವರಿಬ್ಬರೂ ಇಂಗ್ಲಿಷರೊಡನೆ ಸೇರಿದರು.

೧೧೫. ಇಂಗ್ಲಿಷರ ಸೇನೆಯು ತಿರುಚನಾಪಳ್ಳಿಯಿಂದ ಹೊರಟು ಕೊಯಮ್ಮುತ್ತೂರು ಮುಂತಾದ ಕೆಲವು ಸ್ಥಳಗಳನ್ನು ಆಕ್ರಮಿಸಿತು. ಇಷ್ಟ ರಲ್ಲಿ ಗವರ್ನರ್ ಜನರಲ್ ಲಾರ್ಡ್ ಕಾರ್ನವಾಲಿಸನು ಕಲ್ಕತ್ತೆಯಿಂದ ಮದರಾಸಿಗೆ ಬಂದು ದಂಡಿನ ಮುಖ್ಯಾಧಿಕಾರವನ್ನು ವಹಿಸಿ, ೧೭೯೧ನೆಯ ಇಸವಿಯಲ್ಲಿ ಮಾರ್ಚಿ ತಿಂಗಳು ೫ ನೆಯ ತಾರೀಖಿಗೆ ಸರಿಯಾಗಿ ಬೆಂಗ ಳೂರು ಬಳಿ ಬಂದಿಳಿದನು. ಟೀಪುವು ಬೆಂಗಳೂರು ಕೋಟೆಯ ಸಂರಕ್ಷಣೆ ಗಾಗಿ ಬಹದ್ದೂರ್ ಖಾನ್ ಎಂಬವನನ್ನು ನೇಮಿಸಿ, ತಾನು ಕೆಂಗೇರಿಯ ಸಮೀಪಕ್ಕೆ ಹೋದನು. ಕೂಡಲೆ ಶತ್ರುಗಳು ಬೆಂಗಳೂರು ಪೇಟೆ ಯನ್ನು ಆಕ್ರಮಿಸಿ ಕೋಟೆಯನ್ನು ಸುತ್ತುಗಟ್ಟಿದರು. ಅನಂತರ ಸ್ವಲ್ಪ ದಿವಸಗಳ ವರೆಗೆ ಸನ್ನಾಹಗಳನ್ನು ಮಾಡಿಕೊಂಡು ಮಾರ್ಚಿ ತಿಂಗಳು ೨೧ ನೆಯ ರಾತ್ರಿ ಬೆಳದಿಂಗಳಲ್ಲಿ ಕೋಟೆಯನ್ನು ಲಗ್ಗೆ ಹತ್ತಿದರು. ಬಹ ದ್ದೂರ್ ಖಾನನು ಜಗಳದಲ್ಲಿ ಮಡಿದನು. ಎರಡು ಕಡೆಯವರಲ್ಲಿಯೂ ಅ ನೇಕ ಜನರು ಹತರಾದರು. ಮೈಸೂರು ಬಾಗಿಲಿಂದ ಕೋಟೆಯೊಳಕ್ಕೆ ಹೋಗುವುದಕ್ಕಾಗದಂತೆ ಹೆಣಗಳು ಬಿದ್ದಿದ್ದುವು; ಸತ್ತು ಬಿದ್ದಿದ್ದ ಜನರ ಉಡುಪುಗಳಿಗೆ ಬೆಂಕಿ ತಗಲಿ, ಉರಿಯೆದ್ದಿತು. ಟೀಪುವು ಮಾಡಿದ ಸಾಹಸ ವೆಲ್ಲ ವ್ಯರ್ಥವಾಗಿ, ಕೊನೆಗೆ ಕೋಟೆಯನ್ನು ಇಂಗ್ಲಿಷರು ಆಕ್ರಮಿಸಿದರು.

೧೧೬. ಈ ಕಾಲದಲ್ಲಿ ತೋಷೀಖಾನೆ ಕೃಷ್ಣರಾಯ ಮತ್ತು ಮಹ ಮ್ಮದ್ ಅಬ್ಬಾಸ್ ಎಂಬವರಿಬ್ಬರು ಶತ್ರುಗಳಿಗೆ ಗುಟ್ಟಾಗಿ ಸಹಾಯ ಮಾಡುತ್ತಿದ್ದಾರೆಂದು ಟೀಪುವಿಗೆ ಸಂಶಯ ಹುಟ್ಟಿತು. ಕೂಡಲೆ ಅವನು ತೋಷೀಖಾನೆ ಕೃಷ್ಣರಾಯನನ್ನೂ ಅವನ ತಮ್ಮಂದಿರನ್ನೂ ಕೊಲ್ಲಿಸಿ, ಕೃಷ್ಣ ರಾಯನ ಹೆಂಡತಿಯನ್ನು ತನ್ನ ಜನಾನಿಗೆ ಸೇರಿಸಿಕೊಂಡನು. ಮಹಮ್ಮದ್ ಅಬ್ಬಾಸನು ಮೊದಲು ಬ್ರಾಹ್ಮಣನಾಗಿದ್ದನು, ಟೀಪುವೇ ಅವನನ್ನು ಬಲಾ ತ್ಕಾರದಿಂದ ಮಹಮ್ಮದೀಯ ಮತಕ್ಕೆ ಸೇರಿಸಿದ್ದನು. ಈಗ ಅವನನ್ನು ಹಿಡಿ ದು ಟೀಪುವಿನ ಎದುರಿಗೆ ನಿಲ್ಲಿಸಲು, ಟೀಪುವು ಅವನನ್ನು ನೋಡಿ ಎಷ್ಟು ದಿನಗಳಿಂದ ಹೀಗೆ ದ್ರೋಹಮಾಡುತ್ತಿದ್ದೀಯೆ? ಎಂದು ಕೇಳಿದನು. ಅದಕ್ಕೆ ಮಹಮ್ಮದ್ ಅಬ್ಬಾಸನು ಸ್ವಲ್ಪವೂ ಹೆದರದೆ—"ನೀವು ಬ್ರಾಹ್ಮಣರನ್ನು ಜಾತಿಗೆಡಿಸಿ ಅವರ ಗುಡಿಗಳನ್ನು ಹಾಳುಮಾಡಿಸಿದಾರಭ್ಯ ನಾನು ದ್ರೋಹ ವನ್ನು ಚಿಂತಿಸುತ್ತಲೇ ಇದ್ದೇನೆ" ಎಂದು ಹೇಳಿದನು. ಅನಂತರ ಟೀಪುವು

ಅವನನ್ನು ಆನೆಯ ಕಾಲಿಗೆ ಕಟ್ಟಿಸಿ, ದಂಡಿನ ಪಾಳೆಯದ ಸುತ್ತಲೂ ಎಳಿಸಿ ಕೊಲ್ಲಿಸಿದನು.

೧೧೭. ಬೆಂಗಳೂರು ಸ್ವಾಧೀನವಾದ ಬಳಿಕ ಕಾರನ್ವಾಲೀಸನು ಕಾನಕಾನಹಳ್ಳಿಯ ಮಾರ್ಗವಾಗಿ ಶ್ರೀರಂಗಪಟ್ಟಣದ ಕಡೆಗೆ ಹೊರಟನು. ಇಷ್ಟರಲ್ಲಿಯೇ ನಿಸಾಮನ ಸೈನ್ಯವೂ ಸಹಾಯಕ್ಕೆ ಬಂದ್ದಿತು. ಇಂಗ್ಲಿಷರು ಮಾರ್ಗದಲ್ಲಿ ಒಂದು ಪ್ರಾಣಿ ಸಂಚರಿಸಿದುದನ್ನು ನಹ ಕಾಣಲಿಲ್ಲ. ಏಕೆಂದರೆ ಟೀಪುವು ದಾರಿಯಲ್ಲಿದ್ದ ಊರುಗಳಿಗೆಲ್ಲಾ ಬೆಂಕಿ ಹಾಕಿಸಿ, ಕೆರೆಗಳನ್ನೆಲ್ಲಾ ಒಡಿಸಿ, ಹುಲ್ಲು, ನೀರು ಮತ್ತು ದಿನಸಿಗಳು ಸಿಕ್ಕದಂತೆ ಮಾಡಿಸಿ, ಜನರನ್ನು ಶಿವನಸಮುದ್ರದಲ್ಲಿರುವಂತೆ ಕಟ್ಟುಮಾಡಿದ್ದನು. ಕಾರ್ನವಾಲಿಸನು ಅರೆಕೆರೆಯ ಬಳಿಗೆ ಬಂದಿಳಿವುದರೊಳಗಾಗಿ, ಟೀಪುವು ಸಮೀಪಕ್ಕೆ ಬಂದನು. ಅರಕೆರೆಯ ಬಳಿ ಶತ್ರುಗಳ ಸಂಗಡ ಯುದ್ಧವಾಗಿ ಟೀಪುವಿಗೆ ಸೋಲಾಯಿತು. ಆದರೆ ದಂಡಿನ ಜನರ ತಿಂಡಿಗೆ ಬೇಕಾದ ಸಾಮಾನುಗಳು ದೊರೆಯುವುದು ಕಷ್ಟವಾಗಿದ್ದುದರಿಂದಲೂ, ಮಳೆ ಹಿಡಿದುದರಿಂದಲೂ, ಕಾರ್ನವಾಲಿಸನು ಶ್ರೀರಂಗಪಟ್ಟಣದ ಕೋಟೆಯ ಮೇಲೆ ಕೈಮಾಡುವುದನ್ನು ನಿಲ್ಲಿಸಿ ಬೆಂಗಳೂರ ಕಡೆಗೆ ಹೊರಟನು. ದಾರಿಯಲ್ಲಿ ಮರಾಟೆಯವರ ಸೇನೆಯು ಬಂದು ಸೇರಿದುದರಿಂದ ಅವನಿಗೆ ಸ್ವಲ್ಪ ಅನುಕೂಲವಾಯಿತು.

೧೧೮. ಅನಂತರ ಕಾರ್ನವಾಲೀಸನು ನಂದೀದುರ್ಗ, ಸಾವನದುರ್ಗ, ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿ ಕೊಂಡನು. ಗುರುಮುಕೊಂಡೆಯು ಹೈದರಾಬಾದ್ ಸೈನ್ಯದ ಕೈಸೇರಿತು, ಶಿವಮೊಗ್ಗೆಯ ಬಳಿ ಮರಾಟೆಯವರಿಗೂ, ಮೈಸೂರವರಿಗೂ ಜಗಳವಾಗಿ, ಮರಾಟೆಯವರಿಗೇ ಜಯವುಂಟಾಯಿತು.

೧೧೯. ಇತ್ತಲಾಗಿ ಟೀಪುವು ಬಾಕರ್‌ಸಾಬಿ, ಮತ್ತು ಕಮ್ರುದ್ದೀನ್ ಖಾನ್ ಎಂಬ ಸರದಾರರನ್ನು ಕಣಿವೆಯ ಕೆಳಕ್ಕೆ ಕಳುಹಿಸಿದನು. ಬಾಕರ್ ಸಾಬಿಯು ಪೆನ್ನಾಗರವನ್ನು ಸೇರಿ ಸುತ್ತುಮುತ್ತಿನ ಗ್ರಾಮಗಳ ಜನರನ್ನು ಕೈಸೆರೆ ಹಿಡಿದು ಶ್ರೀರಂಗಪಟ್ಟಣದ ಕಡೆಗೆ ಹೊರಟನು. ಮರಾಟೆಯವರ ಸೈನ್ಯವೂ, ನಿಸಾಮನ ಸೈನ್ಯವೂ ಇಂಗ್ಲಿಷ್ ಸೈನ್ಯದೊಡನೆಯೇ ಹೊರಟುವು.

೧೨೦. ಶತ್ರುಸೈನ್ಯಗಳು ೧೭೯೨ನೆಯ ಇಸವಿ ಫೆಬ್ರವರಿ ೫ನೆಯ ತಾರೀಖಿನ ದಿನ ಶ್ರೀರಂಗಪಟ್ಟಣದ ಉತ್ತರಕ್ಕೆ ಎರಡು ಹರಿದಾರಿ ದೂರದಲ್ಲಿ ಬಂದಿಳಿದುವು. ಮೈಸೂರು ಸೈನ್ಯವು ಸಮೀಪದಲ್ಲಿಯೇ ಇಳಿದಿದ್ದಿತು ಬೊಂಬಾಯಿನಿಂದ ಹೊರಟಿದ್ದ ಇಂಗ್ಲಿಷ್ ದಂಡು, ಪಿರಿಯಾಪಟ್ಟಣದ ಸಮೀಪಕ್ಕೆ ಬಂದಿದ್ದಿತು. ಈ ದಂಡು ಬಂದು ಸೇರುವವರೆಗೂ ಕಾರನ್ವಾಲೀಸನು ಕೋಟೆಯ ಮೇಲೆ ಲಗ್ಗೆ ಹತ್ತುವ ಪ್ರಯತ್ನಮಾಡುವುದಿಲ್ಲವೆಂದು ಟೀಪುವು ಭಾವಿಸಿ ಸ್ವಲ್ಪ ಮೈಮರೆತಿದ್ದನು. ಆದರೆ ಇಂಗ್ಲಿಷ್ ಸೇನಾ

ಪತಿಯು ಬೊಂಬಾಯಿ ದಂಡು ಬಂದು ಸೇರುವವರೆಗೂ ಕಾಯದೆ, ಫೆಬ್ರವರಿ ೬ನೆಯ ತಾರೀಖಿನ ರಾತ್ರಿ ಸೈನ್ಯವನ್ನು ಹೊರಡಿಸಿದನು. ಈ ಸೈನಿಕರು ಮೈಸೂರು ಪಾಳೆಯವನ್ನು ನುಗ್ಗಿ, ಗುಂಡಿನ ಪೆಟ್ಟಿಗೆ ಅಂಜದೆ ಸನೀನು ಯುದ್ಧ ಮಾಡುತ್ತಾ ಮುಂದೆ ಬಂದರು. ಮೈಸೂರು ಸೈನ್ಯದವರು ದಿಗಿಲುಪಟ್ಟು ನದಿಯನ್ನು ದಾಟಿ ಕೋಟೆಯ ಕಡೆಗೆ ಓಡಿದರು. ಅವರ ಹಿಂದೆಯೇ ಇಂಗ್ಲಿಷಿನವರ ದಂಡು ಜನ್ನಟ್ಟಿ ಬಂದಿತು. ಆದರೆ ಒಡನೆಯೇ ಟೀಪುವಿನ ಕಡೆಯವರು ಕೋಟೆಯ ಬಾಗಿಲನ್ನು ಮುಚ್ಚಿ ಸೇತುವೆಯನ್ನು ಎಳೆದುಕೊಂಡಕಾರಣ ಶತ್ರುಗಳು, ಗಂಜಾಮುದ ಪೇಟೆಯನ್ನು ಹಿಡಿದು ಲಾಲ್‌ಬಾಗ್ ತೋಟದಲ್ಲಿ ನಿಂತರು. ಅನಂತರ ಆ ರಾತ್ರಿ ಅವರನ್ನು ಹೊರಡಿಸುವುದಕ್ಕೆ ಟೀಪುವು ಮಾಡಿದ ಯತ್ನಗಳು ಯಾವುವೂ ಸಾಗಲಿಲ್ಲ.

೧೨೧. ಮಾರನೆಯ ದಿವಸ "ನನ್ನ ಮಾನವನ್ನು ಕಾಯುವವರು ಯಾರೂ ಇಲ್ಲವೇ" ಎಂದು ಟೀಪುವು ಗೋಳಿಟ್ಟನು. ಆಗ ೨,೦೦೦ ಸಿಲೆದಾರರು ಹೊರಟು ಶತ್ರುಗಳನ್ನು ನೂಕುವುದಕ್ಕೆ ಬಹಳವಾಗಿ ಸಾಹಸ ಮಾಡಿದರು. ಆದರೆ ಅದು ವ್ಯರ್ಥವಾಯಿತು. ಇಷ್ಟರಲ್ಲಿ ಬೊಂಬಾಯಿ ದಂಡೂ ಬಂದು ಸೇರಿತು. ಶತ್ರುಗಳು ಕೋಟೆಯನ್ನು ಸುತ್ತುಗಟ್ಟಿದರು. ಟೀಪುವು ಉಪಾಯ ತೋರದೆ ಗತಿಗೆಟ್ಟು ಶತ್ರುಗಳೊಡನೆ ಸಂಧಿಮಾಡಿಕೊಳ್ಳಬೇಕಾಯಿತು. ಕೊಡಗೂ ಸೇರಿ ಮೈಸೂರು ರಾಜ್ಯದಲ್ಲಿ ಅರ್ಧ ರಾಜ್ಯವನ್ನು ಶತ್ರುಗಳಿಗೆ ಬಿಟ್ಟು ಕೊಡಬೇಕೆಂದೂ, ಯುದ್ಧದ ವೆಚ್ಚಕ್ಕೋಸ್ಕರ ೩ ಕೋಟಿಯೂ ೩೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದೂ, ಸೆರೆಯಲ್ಲಿದ್ದ ಇಂಗ್ಲೀಷರ ಕಡೆಯ ಜನರನ್ನು ಬಿಡುಗಡೆ ಮಾಡಬೇಕೆಂದೂ, ಈ ನಿಬಂಧನೆಗಳೆಲ್ಲಾ ಪೂರ್ತಿಯಾಗಿ ನೆರವೇರುವವರೆಗೂ, ಟೀಪುವು ತನ್ನ ಇಬ್ಬರು ಗಂಡುಮಕ್ಕಳನ್ನು ಇಂಗ್ಲಿಷ್‌ನವರ ಸ್ವಾಧೀನಕ್ಕೆ ಓಲಾಗಿ ಒಪ್ಪಿಸಿರಬೇಕೆಂದೂ ಗೊತ್ತಾಯಿ. ಹೀಗೆ ಒಪ್ಪಂದವಾದ ನಂತರ ಮರಾಟೆಯವರಿಗೆ ಅವರ ಎಲ್ಲೆಯಿಂದ ತುಂಗಭದ್ರಾ ನದಿಯ ವರೆಗಿನ ಸೀಮೆಯು ಸೇರಿತು, ಬಳ್ಳಾರಿ ಕಡಪೆ ಪ್ರಾಂತಗಳು ನಿಸಾಮನ ವಶವಾದವು, ಇಂಗ್ಲಿಷರಿಗೆ ಮಲೆಯಾಳ ದಿಂಡಿಗಲ್ಲು ಮುಂತಾದ ಸ್ಥಳಗಳು ಸೇರಿದುವು.

## ೯ನೆಯ ಪ್ರಕರಣ.

### ಶ್ರೀರಂಗಪಟ್ಟಣ ಇಂಗ್ಲಿಷರ ಕೈಸೇರಿದುದು.

೧೨೨. ಕಾರ್ನವಾಲೀಸನು ಶ್ರೀರಂಗಪಟ್ಟಣವನ್ನು ಬಿಟ್ಟು ಹೋದ ಬಳಿಕ ಟೀಪುವು ಚಿಂತೆಯಲ್ಲಿ ಮುಳುಗಿ, ಕೆಲವು ದಿವಸಗಳ ವರೆಗೆ ಅರಮನೆಯನ್ನು ಬಿಟ್ಟು ಹೊರಗೆ ಬರಲಿಲ್ಲ ಅನಂತರ ಮನಸ್ಸನ್ನು ಸಮಾ

ಧಾನ ಪಡಿಸಿಕೊಂಡು ಇಂಗ್ಲಿಷರಿಗೆ ಕೊಡಬೇಕಾಗಿ ಬಂದ ಹಣವನ್ನು ಕೂಡಿಸುವುದಕ್ಕೆ ಉಪಕ್ರಮಿಸಿದನು. ಸರ್ಕಾರದ ಉದ್ಯೋಗದಲ್ಲಿದ್ದವರೂ, ಮತ್ತು ಇತರ ಪ್ರಜೆಗಳೂ ಎರಡುಕೋಟಿ ರೂಪಾಯಿನ ಮೇಲೆ ''ನಸರಾಣೆ'' ಎಂದರೆ ಕಾಣಿಕೆಯ ರೂಪವಾಗಿ ಕೊಡಬೇಕಾಯಿತು. ೧೭೯೪ನೆಯ ಇಸವಿಯಲ್ಲಿ ಹಣವೆಲ್ಲ ಪೂರ್ತಿಯಾಗಿ ತೀರಿಹೋಗಲು, ಇಂಗ್ಲಿಷ್ ಸರ್ಕಾರದವರು ಟೀಪುವಿನ ಇಬ್ಬರು ಮಕ್ಕಳನ್ನು ಹಿಂದಕ್ಕೆ ಕಳುಹಿಸಿ ಕೊಟ್ಟರು.

೧೨೩. ''ಮೈಸೂರು ಹುಲಿ'' ಎನಿಸಿಕೊಂಡಿದ್ದ ಟೀಪುವು ಅರ್ಧ ರಾಜ್ಯವನ್ನು ಕಳೆದುಕೊಂಡ ಕಾರಣದಿಂದಲೂ, ಹೆಚ್ಚಾಗಿ ದಂಡವನ್ನು ತೆತ್ತುದರಿಂದಲೂ, ಮುಂದಕ್ಕೆ ತಮ್ಮ ಗೋಜಿಗೆ ಬರುವುದಿಲ್ಲವೆಂದು ಕಾರ್ನ್‌ವಾಲೀಸನು ತಿಳಿದುಕೊಂಡಿದ್ದನು. ಆದರೆ ಟೀಪುವಿಗೆ ಇಂಗ್ಲಿಷರ ಮೇಲೆ ದ್ವೇಷವು ಇನ್ನೂ ಹೆಚ್ಚಿತು. ಅವರನ್ನು ಯಾವ ಉಪಾಯದಿಂದಲಾದರೂ ಹಿಂದೂದೇಶದಿಂದಲೇ ಹೊರಡಿಸಬೇಕೆಂದು ಆಲೋಚಿಸುವುದಕ್ಕೆ ಉಪಕ್ರಮಿಸಿದನು. ತನ್ನ ಸೈನ್ಯದ ಜನರಲ್ಲಿ ಪ್ರೀತಿಯನ್ನು ಹೆಚ್ಚುಮಾಡಿದನು. ಮರಾಟೆಯವರಿಗೂ ಮತ್ತು ನಿಸಾಮನಿಗೂ ತನ್ನ ಕಡೆಗೆ ಸೇರಬೇಕೆಂದು ಸಲಹೆಗಳನ್ನು ಕಳುಹಿಸಿದನು ಶ್ರೀರಂಗಪಟ್ಟಣದ ಕೋಟೆಯನ್ನು ಬಲವಾಗಿ ಕಟ್ಟಿಸುವುದಕ್ಕಾಗಿ ತನ್ನ ಸೀಮೆಯಲ್ಲೆಲ್ಲಾ ೨೦,೦೦೦ ಜನರನ್ನು ಬಿಟ್ಟಿಹಿಡಿಸಿ ಕೆಲಸಕ್ಕೆ ನೇಮಿಸಿದನು. ತುರಕೀದೇಶದ ಸುಲ್ತಾನನಿಂದಲೂ ಕಾಬೂಲ್ ದೇಶದ ಅಮೀರನಿಂದಲೂ ಸಹಾಯವನ್ನು ಪಡೆದುಕೊಂಡು ಬರುವಂತೆ ತನ್ನ ಕಡೆಯ ಜನರನ್ನು ಕಳುಹಿಸಿದನು. ಇಂಗ್ಲಿಷರಿಗೂ ಫ್ರೆಂಚರಿಗೂ ಯೂರೋಪ್‌ಖಂಡದಲ್ಲಿ ಕಲಹ ನಡೆಯುತ್ತಿರುವುದನ್ನು ಕೇಳಿ, ಫ್ರೆಂಚಿನವರ ಸಹಾಯವನ್ನು ಅಪೇಕ್ಷಿಸಿ, ರಿಪಾಡ್ ಎಂಬವನ ಸಂಗಡ ಇಬ್ರಾಹಿಂ ಖಾನ್, ಹುಸೇನ್ ಅಲ್ಲಿಖಾನ್ ಎಂಬವರನ್ನು ''ಐಲ್ ಆಫ್ ಫ್ರಾನ್ಸ್'' ಎಂಬ ಫ್ರೆಂಚರ ದ್ವೀಪಕ್ಕೆ ಕಳುಹಿಸಿದನು.

೧೨೪. ಈ ಸನ್ನಾಹಗಳೆಲ್ಲ ಗವರ್ನರ್ ಜನರಲ್ ಲಾರ್ಡ್‌ಮಾರ್ನಿಂಗ್‌ಟನ್ನಿಗೆ ತಿಳಿದುಬರಲು ಅವನು ಅವುಗಳ ನಿಜವನ್ನು ತಿಳಿಯುವುದಕ್ಕೋಸ್ಕರ ಒಬ್ಬ ನಿಯೋಗಿಯನ್ನು ತಮ್ಮಲ್ಲಿಗೆ ಕಳುಹಿಸಿಕೊಡುವಂತೆ ಟೀಪುವಿಗೆ ಹೇಳಿ ಕಳುಹಿಸಿದನು. ಟೀಪುವು ಇದಕ್ಕೆ ಉದಾಸೀನವಾಗಿ ಉತ್ತರವನ್ನು ಕಳುಹಿಸಿದೆನು. ಅನಂತರ ೧೭೯೯ನೆಯ ಇಸವಿಯಲ್ಲಿ ಮಾರ್ನಿಂಗ್‌ಟನ್ ಸಾಹೇಬನು ಮದರಾಸ್ ಸೇನಾಪತಿಯಾದ ಜನರಲ್ ಹ್ಯಾರಿಸ್ಸಿಗೆ ಇಂಗ್ಲಿಷ್ ದಂಡನ್ನು ಮೈಸೂರಿನಮೇಲೆ ಹೊರಡಿಸುವಂತೆ ಆಜ್ಞೆಯನ್ನು ಕೊಟ್ಟನು. ಇದಲ್ಲದೆ ಬೊಂಬಾಯಿಯಿಂದಲೂ ಒಂದು ದಂಡು ಹೊರಡುವಂತೆ ಅಲ್ಲಿಗೆ ನಿರೂಪವನ್ನು ಕಳುಹಿಸಿದನು. ನಿಸಾಮನು ಇಂಗ್ಲಿಷರ ಕಡೆಗೆ ಸೇರಿ ಹೈದರಾಬಾದಿನಿಂದ ಒಂದು ಸೈನ್ಯವನ್ನು ಹೊರಡಿಸಿದನು.

೧೨೫. ಸಿದ್ಧೇಶ್ವರನ ಬೆಟ್ಟದ ಹತ್ತಿರ ಮೈಸೂರು ಸೈನ್ಯಕ್ಕೂ ಬೊಂಬಾಯಿ ದಂಡಿಗೂ ಯುದ್ಧವಾಗಿ ಮೈಸೂರಿನವರಿಗೆ ಅಪಜಯವಾಯಿತು. ಇದೇ ಪ್ರಕಾರ ಮಳವಳ್ಳಿಯ ಬಳಿ ಜನರಲ್ ಹಾರಿಸ್ಸಿನ ದಂಡಿನೊಡನೆ ಯುದ್ಧವಾಗಿ ಅಲ್ಲಿಯೂ ಸೋಲುಂಟಾಯಿತು. ಬಳಿಕ ಟೀಪುವು, ಪೂರ್ವದಲ್ಲಿ ಕಾರನ್ವಾಲಿಸನು ಬಂಧಿದ್ದ ಮಾರ್ಗವಾಗಿ ಜನರಲ್ ಹ್ಯಾರಿಸ್ಸಿನ ದಂಡು ಶ್ರೀರಂಗಪಟ್ಟಣಕ್ಕೆ ಬರುವುದೆಂದು ಆಲೋಚಿಸಿ, ಆ ಮಾರ್ಗದಲ್ಲಿ ಕಾಳು, ಕಡ್ಡಿ, ನೀರು ಯಾವುದು ಸಿಕ್ಕದ ಹಾಗೆ ಊರುಗಳನ್ನೆಲ್ಲ ನೆಲಸಮ ಮಾಡಿದನು. ಆದರೆ ಹ್ಯಾರಿಸ್ಸನು ಬೇರೆ ಮಾರ್ಗವನ್ನು ಹಿಡಿದು ಸೋಸಲೆಯ ಹತ್ತಿರ ಕಾವೇರಿಯನ್ನು ದಾಟಿದನು. ಇದರಿಂದ ಟೀಪುವಿಗೆ ದಿಗಿಲುಂಟಾಗಿ, ಒನ್ನೂರಿನ ಹತ್ತಿರ ತನ್ನ ಮುಖ್ಯಾಧಿಕಾರಿಗಳನ್ನೆಲ್ಲಾ ಕರೆಸಿ, ''ನಮ್ಮ ಉಪಾಯಗಳೊಂದೂ ಕೈಗೂಡಲಿಲ್ಲ. ಮುಂದೆ ಏನುಮಾಡೋಣ ! ಎಂದು ಚಿಂತೆಯಿಂದ ಕೇಳಿದನು. ''ನಿಮ್ಮೊಡನೆ ಪ್ರಾಣವನ್ನು ಬಿಡುವುದಕ್ಕೆ ಸಿದ್ಧರಾಗಿದ್ದೇವೆ ಎಂದು ಎಲ್ಲರೂ ಒಂದೇ ಅಭಿಪ್ರಾಯವನ್ನು ಹೇಳಿದರು. ಇಷ್ಟರಲ್ಲಿ ಏಪ್ರಿಲ್ ೫ನೆಯ ದಿವಸ ಜನರಲ್ ಹ್ಯಾರಿಸ್ಸನ ದಂಡು ಶ್ರೀರಂಗಪಟ್ಟಣದ ಪಶ್ಚಿಮದಿಕ್ಕಿನ ಕೋಟೆಯ ಎದುರಿಗೆ ಬಂದು ಇಳಿಯಿತು. ಇದೇ ಪ್ರಕಾರ ಏಪ್ರೆಲ್ ೧೬ನೆಯ ತಾರೀಖಿನಲ್ಲಿ ಬೊಂಬಾಯಿದಂಡು ಉತ್ತರದಿಕ್ಕಿನ ಕೋಟೆಯ ಎದುರಿಗೆ ಇಳಿಯಿತು.

೧೨೬. ಹೀಗೆ ಇಳಿದ ಇಂಗ್ಲಿಷ್ ಸೈನ್ಯವು ಕೋಟೆಯನ್ನು ಸುತ್ತುಗಟ್ಟಿತು. ಇದನ್ನು ನೋಡಿ ಟೀಪುವು ಕೋಟೆಯೊಳಕ್ಕೆ ಪ್ರವೇಶಮಾಡಿ ಬಾಗಿಲುಗಳನ್ನು ಹಾಕಿಸಿದನು. ಕಮ್ರುದ್ದೀನ್‌ಖಾನ್ ಮತ್ತು ಟೀಪುವಿನ ಹಿರಿಯಮಗನಾದ ಪತ್ತೇ ಹೈದರ್, ಇವರುಗಳು ಕೆಲವು ಸೈನ್ಯದೊಡನೆ ಕರಿಯಘಟ್ಟದ ಬಳಿ ಇದ್ದರು. ಇಂಗ್ಲಿಷ್‌ನವನು ಬಂದಿಳಿದ ಮಾರನೆಯ ದಿನ ಮೊದಲುಗೊಂಡು ಮೈಸೂರು ಸೈನ್ಯದ ಸಾಲುಗಳನ್ನು ಹಿಂದಕ್ಕೆ ಒತ್ತರಿಸುತ್ತಲೇ ಒಂದು ಏಪ್ರೆಲ್ ೨೬ನೆಯ ತಾರೀಖಿನಲ್ಲಿ ಕೋಟೆಗೆ ಗುಂಡು ತಗುಲುವಷ್ಟು ದೂರದಲ್ಲಿಳಿದು, ಕೋಟೆಯನ್ನು ಒಡೆಯುವುದಕ್ಕಾರಂಭಿಸಿದರು. ಟೀಪುವು ಅವರನ್ನು ಹಿಮ್ಮೆಟ್ಟಿಸುವುದಕ್ಕೆ ಎಷ್ಟು ಸಾಹಸಮಾಡಿದರೂ ನಡೆಯದೆ ಹೋಯಿತು. ಕೊನೆಗೆ ಮೇ ೩ನೆಯ ತಾರೀಖಿನಲ್ಲಿ ಅವರು ಕಾವೇರಿಯ ಅಂಚನ್ನು ಸೇರಿದರು. ಟೀಪುವು ಇದನ್ನು ನೋಡಿ ಸಂಧಿಮಾಡಿಕೊಳ್ಳುವುದು ಉಚಿತವೆಂದು ಯೋಚಿಸಿ ಜನರಲ್ ಹ್ಯಾರಿಸ್ಸಿಗೆ ಹೇಳಿ ಕಳುಹಿಸಿದನು. ಅದಕ್ಕೆ ಆವನು ಮೈಸೂರು ರಾಜ್ಯದಲ್ಲಿ ಅರ್ಧವನ್ನೂ, ಮತ್ತು ಎರಡುಕೋಟಿ ರೂಪಾಯಿಯನ್ನೂ ಕೊಡಬೇಕೆಂದೂ, ನಂಬಿಕೆಗಾಗಿ ಟೀಪುವಿನ ನಾಲ್ಕು ಜನ ಗಂಡುಮಕ್ಕಳನ್ನೂ ಮತ್ತು ನಾಲ್ಕು ಜನದೊಡ್ಡ ಉದ್ಯೋಗಸ್ಥರನ್ನೂ ಇಂಗ್ಲಿಷ್‌ನವರ ಸ್ವಾಧೀನದಲ್ಲಿ ಬಿಡಬೇಕೆಂದೂ ಉತ್ತರವನ್ನು ಕಳುಹಿಸಿದನು, ಆಗ ಟೀಪುವು ಈ ಮಾತುಗಳಿಗೆ

ಒಪ್ಪಿ ಮಾನ ಕಳೆದುಕೊಳ್ಳುವುದಕ್ಕಿಂತಲೂ ಯುದ್ಧವನ್ನು ಮಾಡಿ ಪ್ರಾಣವನ್ನು ಬಿಡುವುದೇ ಲೇಸೆಂದು ಆಲೋಚಿಸಿ, ಸುಮ್ಮನಾದನು.

೧೨೭. ಅನಂತರ ಇಂಗ್ಲಿಷರು ವಾಯುವ್ಯಮೂಲೆಯ ಕೋಟೆಯನ್ನು (ಗೌತಮಕ್ಷೇತ್ರಕ್ಕೆ ಪೂರ್ವಭಾಗದ ಕೋಟೆ) ಲಗ್ಗೆ ಹತ್ತುವುದಕ್ಕೆ ಸಿದ್ಧಪಡಿಸಿಕೊಂಡಿದ್ದರು. ಜನರಲ್ ಹ್ಯಾರಿಸ್ಸನು ೪ನೆಯ ತಾರೀಖಿನ ದಿವಸ ಹಗಲು ಒಂದೂವರೆ ಘಂಟೆಗೆ ಲಗ್ಗೆ ಹತ್ತುವುದಕ್ಕೆ ಗೊತ್ತುಮಾಡಿದ್ದನು, ಮತ್ತು ಶ್ರೀರಂಗಪಟ್ಟಣದ ಕೋಟೆಯಲ್ಲಿ ಬಹಳ ದಿವಸ ಸೆರೆಯಲ್ಲಿದ್ದು ಅಲ್ಲಿಯ ಒಳಗುಟ್ಟನ್ನು ಚೆನ್ನಾಗಿ ಬಲ್ಲ ಜನರಲ್ ಬೇರ್ಡ್ ಎಂಬವನನ್ನು ಲಗ್ಗೆ ಹತ್ತುವವರ ಮುಂದಾಳಾಗಿ ನೇಮಿಸಿದನು. ಜನರಲ್ ಬೇರ್ಡನು ಕ್ಲಿಪ್ತವಾದ ಕಾಲಕ್ಕೆ ಸರಿಯಾಗಿ ಕತ್ತಿಯನ್ನು ಒರೆಯಿಂದ ಹಿರಿದು ಕೈಯಲ್ಲಿ ಹಿಡಿದುಕೊಂಡು ಮುಂದಾಳಾಗಿ ಹೊರಟನು ಅವನೊಡನೆ ಹತ್ತುವುದಕ್ಕೆ ನೂಲೇಣಿಯೇ ಮುಂತಾದ ಸಾಮಾನುಗಳನ್ನು ತೆಗೆದುಕೊಂಡು ಸೋಲ್ಜರುಗಳೂ ಸಿಪಾಯಿಗಳೂ ಹೊರಟರು. ಹೊರಟ ಆರು ನಿಮಿಷಗಳೊಳಗಾಗಿ ಇವರು ಹೊರಗಿನ ಕೋಟೆಯನ್ನು ಹತ್ತಿ ಇಂಗ್ಲಿಷ್ ಬಾವುಟವನ್ನು ಏರಿಸಿದರು.

೧೨೮. ಈ ವೇಳೆಯಲ್ಲಿ ಟೀಪುವು ಊಟಮಾಡುತ್ತ ಕುಳಿತಿದ್ದನು ಮಧ್ಯಾಹ್ನಕಾಲವಾದುದರಿಂದ ಸೈನ್ಯದವರಲ್ಲಿ ಅನೇಕರು ಊಟದಲ್ಲಿಯೂ ನಿದ್ದೆಯಲ್ಲಿಯೂ ಮೈಮರೆತಿದ್ದರು. ಇದಲ್ಲದೆ ಕಿಲ್ಲೇದಾರ್ ಅಬ್ದುಲ್ ನದೀಂಖಾನನು ಸೈನ್ಯಕ್ಕೆ ಸಂಬಳ ಬಟವಾಡೆ ಮಾಡುವುದಾಗಿ ಬಹುಜನರನ್ನು ಕರೆಯಿಸಿಕೊಂಡಿದ್ದನು. ಟೀಪುವು ಒಂದೆರಡು ತುತ್ತುಗಳನ್ನು ಬಾಯಲ್ಲಿಟ್ಟುಕೊಳ್ಳುವಷ್ಟರಲ್ಲಿಯೇ ಇಂಗ್ಲಿಷರು ಲಗ್ಗೆ ಹತ್ತಿದರೆಂದೂ, ಕೋಟೆಯ ಸಂರಕ್ಷಣೆಗೆ ನೇಮಿಸಲ್ಪಟ್ಟಿದ್ದ ಸೈಯದ್ ಗಫೂರನು ಗುಂಡಿನ ಪೆಟ್ಟಿನಿಂದ ಸತ್ತನೆಂದೂ ವರ್ತಮಾನ ಬಂದಿತು. ಕೂಡಲೆ ಅವನು ಕೈಗಳನ್ನು ತೊಳೆದುಕೊಂಡು ಲಗ್ಗೆ ಹತ್ತಿದ ಕಡೆಗೆ ಹೊರಟನು. ಆದರೆ ಶತ್ರುಗಳು ತನ್ನ ಕಡೆಯ ಜನರನ್ನು ಮೀರಿ ಬರುತ್ತಿರುವುದನ್ನು ಕಂಡು ಹಾಗೆಯೆ ಹಿಂದಿರುಗಿ ಉತ್ತರ ದಿಡ್ಡಿಯ ಬಾಗಿಲ ಹತ್ತಿರಕ್ಕೆ ಹೊರಟನು. ಅಲ್ಲಿ ಬಹುಜನರು ಹತರಾಗಿ ಬಿದ್ದಿದ್ದರು. ಜನರ ನೂಕುನುಗ್ಗಲು ಹೆಚ್ಚಾಗಿತ್ತು ಈ ಗದಲದಲ್ಲಿ ಟೀಪುವಿನ ಕುದುರೆಯ ಕಾಲಿಗೆ ಗುಂಡಿನ ಪೆಟ್ಟು ತಗಲಿತು. ಅವನಿಗೂ ಅವನ ಸಂಗಡ ಇದ್ದ ರಾಜಾಖಾನನಿಗೂ ಗಾಯವಾಗಿ ಇಬ್ಬರೂ ಕೆಳಗೆ ಬಿದ್ದಿದ್ದ ಹೆಣಗಳ ಮೇಲೆ ಬಿದ್ದರು. ಕೂಡಲೆ ಟೀಪುವಿನ ಸೇವಕರು ಅವನನ್ನು ಒಂದು ಪಾಲಕಿಯಲ್ಲಿ ಮಲಗಿಸಿದರು. ತಾವು ಬಿದ್ದಿರುವ ಸಂಗತಿಯನ್ನು ಹೊರಪಡಿಸಿದರೆ ಪ್ರಾಣ ಉಳಿಯುತ್ತದೆಂದು ರಾಜಾಖಾನನು ಟೀಪುವಿಗೆ ಹೇಳಿದನು. ಆ ಮಾತಿಗೆ ಟೀಪುವು ಒಪ್ಪಲಿಲ್ಲ. ಅನಂತರ ಅವನು ಯಾರೂ ಅರಿಯದಂತೆ ಪಾಲಕಿಯಿಂದ ಹೇಗೊ ಮುಂದೆ

ತೆವಳಿಕೊಂಡು ಹೋಗಿ ಹೆಣಗಳ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡನು. ಹೀಗಿರುವಾಗ ಒಬ್ಬ ಸೋಲ್ಜರನು ಅವನ ಸೊಂಟದಲ್ಲಿದ್ದ ಚಿನ್ನದ ನಡುಕಟ್ಟಿಗೆ ಆಸೆಪಟ್ಟು ಕೈ ಹಾಕಿದನು. ಆ ಕಾಲದಲ್ಲಿಯೂ ಟೀಪುವು ಸುಮ್ಮನಿರಲಿಲ್ಲ ತನ್ನ ಕತ್ತಿಯನ್ನು ಎತ್ತಿ ಹೊಡೆಯುವುದಕ್ಕೆ ಕೈ ಬೀಸಿದನು. ಇದನ್ನು ನೋಡಿ ಆ ಸೋಲ್ಜರನು ತನ್ನ ಬಂದೂಕಿನಿಂದ ಟೀಪುವಿನ ತಲೆಗೆ ಹೊಡೆದು ಅವನನ್ನು ಕೊಂದನು.

೧೨೯. ಇಷ್ಟರಲ್ಲಿಯೇ ಜನರಲ್ ಬೇರ್ಡನು ಸೈನ್ಯದೊಡನೆ ದೊಡ್ಡ ಮಸೀತಿಯ ಬಳಿಗೆ ಬಂದು ಸೇರಿದನು. ಅವನಿಗೆ ಟೀಪುವಿನ ಅವಸ್ಥೆಯು ಗೊತ್ತಾಗಿರಲಿಲ್ಲವಾದುದರಿಂದ ಅರಮನೆಯನ್ನು ಒಪ್ಪಿಸಬೇಕು, ಇಲ್ಲವಾದರ ಮುತ್ತಿಗೆ ಹಾಕುವುದಾಗಿ ತಿಳಿಸುವಂತೆ ಮೇಜರ್ ಆಲನ್ ಎಂಬವನನ್ನು ಕಳುಹಿಸಿದನು. ಈತನು ಅರಮನೆಯನ್ನು ಸೇರಿ, ಟೀಪುವಿನ ಇಬ್ಬರು ಮಕ್ಕಳನ್ನು ಕಂಡು, ಅರಮನೆಯ ಬಾಗಿಲನ್ನು ತೆಗಿಸಿದನು. ಜನರಲ್ ಬೇರ್ಡನು ಇಬ್ಬರು ಮಕ್ಕಳನ್ನೂ ಕೋಟೆಯಿಂದ ಹೊರಗೆ ಜನರಲ್ ಹ್ಯಾರಿಸ್ ಸೇನಾಪತಿಯ ಬಿಡಾರಕ್ಕೆ ಕಳುಹಿಸಿಕೊಟ್ಟನು. ಅನಂತರ ಅವನಿಗೆ ಟೀಪುವು ಉತ್ತರ ದಿಡ್ಡಿಯ ಬಳಿ ಸತ್ತು ಬಿದ್ದಿರುವುದು ಗೊತ್ತಾಯಿತು. ಇಷ್ಟೆಲ್ಲಾ ನಡೆಯುವ ಹೊತ್ತಿಗೆ ಕತ್ತಲೆಯಾಯಿತು. ಆದರೂ ಜನರಲ್ ಬೇರ್ಡನು ಉತ್ತರ ದಿಡ್ಡಿಯ ಬಳಿಗೆ ಹೋಗಿ, ಅಲ್ಲಿ ಒಂದರಮೇಲೊಂದು ದಿಕ್ಕಾಪಾಲಾಗಿ ಬಿದ್ದಿದ್ದ ಹೆಣಗಳನ್ನು ದೀವಟಿಗೆಯ ಬೆಳಕಿನಲ್ಲಿ ಎತ್ತಿಸಿ ನೋಡುವಲ್ಲಿ ರಾಜಾಖಾನನು ಸಿಕ್ಕಿದನು. ಅವನಿಗೆ ಇನ್ನೂ ಕುಟುಕ ಜೀವವಿತ್ತು. ಅವನಿಂದ ಟೀಪುವು ಬಿದ್ದಿದ್ದ ಸ್ಥಳವನ್ನು ತಿಳಿದು, ಟೀಪುವಿನ ಶವವನ್ನು ಪಾಲಕ್ಕಿಯಲ್ಲಿಡಿಸಿ ಅರಮನೆಗೆ ಕಳುಹಿಸಿಕೊಟ್ಟನು.

೧೩೦. ಆ ದಿನ ರಾತ್ರಿಯೆಲ್ಲಾ ಪಟ್ಟಣವನ್ನು ಇಂಗ್ಲಿಷ್ ದಂಡಿನ ಜನರು ಲೂಟಿಮಾಡಿದರು. ಇವರುಗಳ ಅವಾಂತರವನ್ನು ತಡೆಯಲಾರದೆ ಹೆಂಗಸರೆಲ್ಲರೂ ಗುಂಪುಗುಂಪಾಗಿ ಬೀದಿಯಲ್ಲಿ ನಿಂತು ಆ ರಾತ್ರಿಯನ್ನು ಕಳೆದರು. ಈ ಕಲಹದಲ್ಲಿ ಸುಮಾರು ೮,೦೦೦ ಜನರು ಸತ್ತರು ಇದರಲ್ಲಿ ಹೆಂಗಸರು, ಗಂಡಸರು, ಚಿಕ್ಕಮಕ್ಕಳು, ಮುದುಕರು ಎಲ್ಲರೂ ಸೇರಿದ್ದರು. ಮೀರ್‌ಸಾದಕನು ಹಲ್ಲಾಹತ್ತುವ ಗಲಿಬಿಲಿಯಲ್ಲಿ ಪೂರ್ವದ ಕೋಟೆಯ ಬಾಗಿಲಿನಿಂದ ಹೊರಕ್ಕೆ ಹೋಗುವ ಪ್ರಯತ್ನದಲ್ಲಿದ್ದನು. ಇವನು ಟೀಪುವಿನ ಉಪ್ಪು ತಿಂದು ಅವನಿಗೆ ಎರಡು ಬಗೆದನೆಂದು ಒಬ್ಬ ಮುಸಲ್ಮಾನನು ಅವನನ್ನು ಕತ್ತಿಯಿಂದ ಕತ್ತರಿಸಿ ಹಾಕಿದನು.

೧೩೧. ಮಾರನೆಯ ದಿವಸ ಇಂಗ್ಲಿಷರು ಟೀಪುವಿನ ಶವವನ್ನು ಸಮಸ್ತ ಮರ್ಯಾದೆಗಳಿಂದ ಲಾಲ್‌ಬಾಗಿನಲ್ಲಿ ಹೈದರನ ಪಕ್ಕದಲ್ಲಿ ಗೋರಿಮಾಡಿಸಿದರು. ''ಮೈಸೂರು ಹುಲಿ'' ಎನಿಸಿಕೊಂಡಿದ್ದ ಟೀಪುವಿನ ರಾಜ್ಯವು ಶತ್ರುಗಳ ಪಾಲಾಯಿತು. ತಾನು ಸಂಪಾದಿಸಿದ ರಾಜ್ಯವನ್ನು ತನ್ನ ಮಗ

ನಾದ ಟೀಪುವು ಕಳೆಯುತ್ತಾನೆಂದು ಹೈದರನು ಬದುಕಿದ್ದಾಗ ಹೇಳು ತ್ತಿದ್ದ ಮಾತು ನಿಜವಾಯಿತು.

---

## ೧೦ನೆಯ ಪ್ರಕರಣ.

### ಟೀಪುವಿನ ರಾಜ್ಯಕ್ರಮವೇ ಮೊದಲಾದುದು.

೧೩೨. ಟೀಪುವು ಬಹುಧೈರ್ಯಶಾಲಿಯೆಂಬುದು ಸ್ಪಷ್ಟವಾಗಿದೆ ಆದರೆ ಇವನಲ್ಲಿ ಅಹಂಕಾರವೂ, ಅನ್ಯಮತಗಳಲ್ಲಿ ದ್ವೇಷವೂ, ತನ್ನ ಮತ ದಲ್ಲಿ ಅಭಿಮಾನವೂ ಹೆಚ್ಚಾಗಿದ್ದುವು.

೧೩೩. ಹೈದರನು ಬದುಕಿರುವವರೆಗೂ ಅಧಿಕಾರವನ್ನೆಲ್ಲ ತನ್ನ ಕೈಯಲ್ಲಿಟ್ಟುಕೊಂಡಿದ್ದರೂ, ಮಹಾರಾಜರಿಗೆ ನಡೆಯಬೇಕಾದ ಮರ್ಯಾದೆಗ ಳನ್ನೆಲ್ಲಾ ನಡೆಸುತ್ತಿದ್ದನು. ಟೀಪುವು ಇವುಗಳನ್ನು ತಪ್ಪಿಸಿದನು. ೧೭೮೨ ನೆಯ ಇಸವಿಯಲ್ಲಿ ಮಂಗಳೂರು ಮತ್ತು ಕೊಡಗಿನ ಪ್ರಾಂತದಲ್ಲಿ ಬಹು ಜನ ಗಂಡಸರನ್ನೂ ಹೆಂಗಸರನ್ನೂ ಹಿಡಿಸಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ಅಲ್ಲಿ ಅವರೆಲ್ಲರನ್ನೂ ಒಂದೇದಿವಸ ಮಹಮದೀಯ ಮತಕ್ಕೆ ಸೇರಿಸಿ, ಆದಿನ ದಾರಭ್ಯ "ಪಾದಷಹ" ಎಂಬ ಬಿರುದನ್ನು ವಹಿಸಿದನು. ಇದಕ್ಕೆ ಮುಂಚೆ, ಮೈಸೂರು ಪಟ್ಟಣವಿದ್ದರೆ ರಾಜಮನೆತನದ ಜ್ಞಾಪಕವಿರುವುದೆಂದು ಭಾವಿಸಿ, ಆ ಊರಿನಲ್ಲಿದ್ದ ಮನೆಗಳನ್ನು ಕೆಡಹುವುದಕ್ಕೂ ಊರಿಗೆ ಸ್ವಲ್ಪ ದೂರದಲ್ಲಿ "ನಸರ್‌ಬಾದ್" ಎಂಬ ಹೆಸರಿಂದ ಬೇರೆ ಕೋಟೆಯನ್ನು ಕಟ್ಟಿಸುವುದಕ್ಕೂ ಆರಂಭಿಸಿದನು.

೧೩೪. ಮಹಮದೀಯ ಮತವನ್ನು ವೃದ್ಧಿಪಡಿಸುವುದಕ್ಕೋಸ್ಕರ ಟೀಪುವು ಪ್ರತಿ ಗ್ರಾಮದಲ್ಲಿಯೂ ಒಂದು ಮಸೀತಿಯನ್ನು ಕಟ್ಟಿಸಿ, ಅಲ್ಲಿನ ಮುಸಲ್ಮಾನರೆಲ್ಲರೂ ಪ್ರತಿ ಶುಕ್ರವಾರವೂ ತಪ್ಪದೆ ನಮಾಸಿಗೆ ಹೋಗ ಬೇಕೆಂದು ಗೊತ್ತುಮಾಡಿದ್ದನು. ಹಾಗೆ ಯಾರಾದರೂ ತಪ್ಪಿಸಿಕೊಂಡರೆ ಅಂತಹವರು ಸರ್ಕಾರಕ್ಕೆ ದಂಡ ಕೊಡಬೇಕೆಂದು ವಿಧಿಸಿದ್ದನು. ಇದಲ್ಲದೆ ಆಗಿಂದಾಗ ಇತರ ಮತಕ್ಕೆ ಸೇರಿದ ಜನರನ್ನು ಕರೆಯಿಸಿ, ಮಹಮದೀಯ ಮತಕ್ಕೆ ಸೇರಬೇಕೆಂದು ಹೇಳುತ್ತಿದ್ದನು. ಈ ಮಾತನ್ನು ಮೀರುವುದಕ್ಕೆ ಅಂಜಿ ಅನೇಕರು ಟೀಪುವು ಹೇಳಿದಂತೆ ಮಾಡುತ್ತಿದ್ದರು. ಮಹಮದೀಯ ಮತಕ್ಕೆ ವಿರುದ್ಧವೆಂದು ಸಾರಾಯಿ, ಹೆಂಡ, ಮತ್ತು ಅಫೀಮು, ಗಾಂಜಾ, ಇಂತಹ ಅಂಗಡಿಗಳನ್ನು ಸೀಮೆಯಲ್ಲಿ ಎಲ್ಲಾ ಕಡೆಯಲ್ಲಿಯೂ ಮುಚ್ಚಿಸಿ ದ್ದನು. ಇದರಿಂದ ಸರ್ಕಾರಕ್ಕೆ ಬರುತ್ತಿದ್ದ ವರಮಾನವು ತಪ್ಪಿದುದರಿಂದ ಅದಕ್ಕೆ ಪ್ರತಿಯಾಗಿ ಹಿಂದೂ ದೇವಸ್ಥಾನಗಳ ತಸ್ತೀಕನ್ನೆಲ್ಲಾ ಸೇರಿಸಿ

ಕೊಂಡನು. ಟೀಪುವು ಸಾಯುವ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿರುವ ಎರಡು ದೇವಸ್ಥಾನಗಳ ತಸ್ತೀಕು ಮಾತ್ರ ಉಳಿದಿತ್ತು. ಮಿಕ್ಕ ದೇವ ಸ್ಥಾನಗಳ ವರಮಾನವನ್ನೆಲ್ಲಾ ತಾನೇ ಸೇರಿಸಿಕೊಂಡಿದ್ದನು.

೧೩೫. ಟೀಪುವು ತನ್ನ ರಾಜ್ಯದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದ್ದನು. ದೇಶದ ಮೊದಲಿನ ವಿಭಾಗಗಳನ್ನು ಬಿಟ್ಟು, ೫,೦೦೦ ವರಹ ಉತ್ಪತ್ತಿಯಾಗುವ ಸೀಮೆಗೆ ಒಂದು ತುಕ್ಕಡಿಯೆಂದೂ, ೨೦ ರಿಂದ ೩೦ ತುಕ್ಕಡಿಗಳಿಗೆ ಒಂದು ಜಿಲ್ಲೆಯೆಂದೂ, ವಿಂಗಡಿಸಿದನು. ಪ್ರತಿ ತುಕ್ಕಡಿಯೂ ಒಬ್ಬ ಅಮಿಲನ ವಿಚಾರಣೆ ಯಲ್ಲಿಯೂ, ಪ್ರತಿಜಿಲ್ಲೆಯೂ ಒಬ್ಬ ''ಅಸೂಪ್'' ಎಂಬ ಅಧಿಕಾರಿಯ ವಿಚಾರಣೆಯಲ್ಲಿಯೂ ಇರತಕ್ಕದ್ದೆಂದು ಗೊತ್ತು ಮಾಡಿದ್ದನು. ಇದಲ್ಲದೆ ಮೈಸೂರಿಗೆ ''ನಸರಾಬಾದ್,'' ಮಳವ ಳ್ಳಿಗೆ 'ಗುಲುಷಣಾಬಾದ್' ದೇವನಹಳ್ಳಿಗೆ ''ಯೂಸೂಫಾಬಾದ್'' ಹೀಗೆ ಪ್ರತಿಯೂರಿಗೂ ಬೇರೆಬೇರೆ ಹೆಸರನ್ನಿಡುತ್ತಿದ್ದನು. ಹುಜೂರಿನಲ್ಲಿ ಸೈನ್ಯದ ಆಡಳಿತಗಳ ವಿಚಾರಕ್ಕ ಒಂದು ಕಚೇರಿ, ಜಮೀನು ವಿಚಾರಕ್ಕೆ ಒಂದು ಕಚೇರಿ, ಜಹಜುಗಳ ವಿಚಾರಕ್ಕೆ ಒಂದು ಕಚೇರಿ, ಕೋಟೆಗಳ ವಿಚಾರಕ್ಕೆ ಒಂದು ಕಚೇರಿ, ಹಣ ಕಾಸುಗಳ ವಿಚಾರಕ್ಕೆ ಒಂದು ಕಚೇರಿ, ವ್ಯಾಪಾರ ವಿಚಾರಕ್ಕೆ ಒಂದು ಕಚೇರಿ, ಈ ಪ್ರಕಾರ ಆರು ಕಚೇರಿಗಳನ್ನು ಏರ್ಪಡಿಸಿದ್ದನು. ಗ್ರಾಮುಗಳಿಂದ ಬರುತ್ತಿದ್ದ ಲೆಕ್ಕ ಪತ್ರಗಳು ಕನ್ನಡದಲ್ಲಿ ಬರೆಯಲ್ಪಡುತ್ತಿದ್ದುವು ತುಕ್ಕುಡಿ ಕಚೇರಿಯಲ್ಲಿ ಹಿಂದವಿಯನ್ನೂ ಅದಕ್ಕೆ ಮೇಲ್ಪಟ್ಟ ಕಚೇರಿಗಳಲ್ಲೆಲ್ಲಾ ಫಾರ್ಸಿಲಿಪಿಯನ್ನೂ ಉಪಯೋಗಿಸುತ್ತಿದ್ದರು. ಟೀಪುವು ಎಲ್ಲಾ ತುಕ್ಕಡಿ ಗಳಲ್ಲಿಯೂ ಜಿಲ್ಲಾಗಳಲ್ಲಿಯೂ ಮುಸಲ್ಮಾನರನ್ನೇ ಕೆಲಸಕ್ಕೆ ನಿಯಮಿಸಿದನು ಇವರನ್ನು ವರುಷಕ್ಕೊಂದಾವೃತ್ತಿ ಶ್ರೀರಂಗಪಟ್ಟಣಕ್ಕೆ ಕರೆಯಿಸಿ, ಅವರ ತಲೆಯ ಮೇಲೆ ಕೊರಾನ್ ಪುಸ್ತಕವನ್ನಿಟ್ಟು, ಅನ್ಯಾಯಮಾಡುವದಿಲ್ಲವಂದು ಪ್ರಮಾಣಮಾಡಿಸುತ್ತಿದ್ದನು, ಇದಲ್ಲದೆ ಅಸೂಪ್ ಮುಂತಾದ ಮುಖ್ಯಾಧಿ ಕಾರಿಗಳು ಅವರ ಹೆಂಡಿರು ಮಕ್ಕಳನ್ನು ನಂಬಿಕೆಗಾಗಿ ಶ್ರೀರಂಗ ಪಟ್ಟಣದಲ್ಲಿಯೇ ಬಿಟ್ಟಿರುವಂತೆ ವಿಧಿಸಿದ್ದನು. ಆದರೆ ಈ ಅಧಿಕಾರಿಗಳು ಕೆಲಸ ತಿಳಿಯದೆ, ಇತರರಿಂದ ಕೆಲಸ ಮಾಡಿಸಿ ತಾವು ಕೆಟ್ಟ ನಡತೆಯಲ್ಲಿದ್ದು ಕೊಂಡಿರುತ್ತಿದ್ದರು. ಟೀಪುವಿಗೆ ಒಂದುವೇಳೆ ಇವರ ನಡತೆ ತಿಳಿದು ಬಂದರೂ, ಮುಸಲ್ಮಾನರೆಂಬ ಅಭಿಮಾನದಿಂದ ಅವರನ್ನು ಶಿಕ್ಷಿಸುತ್ತಿರಲಿಲ್ಲ ಇಂಗ್ಲಿಷರ ಪ್ರಾಬಲ್ಯವು ವ್ಯಾಪಾರದಿಂದುಂಟಾಯಿತೆಂದು ಟೀಪುವು ಚೆನ್ನಾ ಗಿ ತಿಳಿದುಕೊಂಡು, ಅದರಂತೆ ತನ್ನ ದೇಶದಲ್ಲಿಯೂ ಅಲ್ಲಲ್ಲ ವ್ಯಾಪಾರದ ಕೋಠಿಗಳನ್ನು ಸ್ಥಾಪಿಸಿದ್ದನು ರಾಜ್ಯದ ಒಳ ಸಂದರ್ಭಗಳು ಹೊರಪಡ ದಿರುವುದಕ್ಕೂ, ಮತ್ತು ಪದಾರ್ಥಗಳ ಕ್ರಯವು ಹೆಚ್ಚಾಗದಂತಿರುವುದಕ್ಕೂ ಮೈಸೂರು ದೇಶದಿಂದ ಯಾವ ಪದಾರ್ಥವನ್ನೂ ಹೊರಗೆ ತೆಗೆದುಕೊಂಡು ಹೋಗಕೂಡದೆಂದೂ, ಹೊರಗಿನಿಂದ ತರಕೂಡದೆಂದೂ, ವಿಧಿಸಿದ್ದನು.

ಹೊಗೆಯಸೊಪ್ಪು, ಗಂಧದಮರ, ಮೆಣಸು, ಚಿನ್ನ, ಬೆಳ್ಳಿ ಇವುಗಳ ವರಮಾನವು ಸರಕಾರಕ್ಕೆ ಸಲ್ಲತಕ್ಕುದೆಂದು ನಿಷ್ಕರ್ಷೆ ಮಾಡಿದನು. ಹೀಗೆಯೇ ಸೀಮೆಯಲ್ಲಿದ್ದ ತೂಕದ ಬಟ್ಟುಗಳು, ಅಳತೆಯ ಸೇರುಗಳು, ನಾಣ್ಯಗಳು, ಇವೆಲ್ಲವನ್ನೂ ಬೇರೆ ಮಾಡಿದನು.

---

## ೪ನೆಯ ಭಾಗ.

### ಇಂಗ್ಲಿಷರ ಮೇಲ್ವಿಚಾರಣೆ.

### ೧ನೆಯ ಪ್ರಕರಣ.

ಹಿಂದೂರಾಜ್ಯವು ಪುನಃ ಸ್ಥಾಪಿತವಾದುದು,

೧೩೭. ಟೀಪುವಿನ ರಾಜ್ಯವನ್ನು ಸಾಧಿಸುವುದಕ್ಕೆ ಇಂಗ್ಲಿಷರೂ ಮತ್ತು ನಿಸಾಮನೂ ಸಾಹಸ ಮಾಡಿದುದರಿಂದ, ಅವರಿಬ್ಬರೇ ಸೀಮೆಯನ್ನೆಲ್ಲಾ ಸಮಪಾಲಾಗಿ ಹಂಚಿಕೊಳ್ಳಬಹುದಾಗಿತ್ತು. ಆದರೆ ಅವರು ಹಾಗೆ ಮಾಡದೆ ರಾಜ್ಯವನ್ನು ನಾಲ್ಕು ಭಾಗಗಳಾಗಿ ಒಡೆದರು. ಅವುಗಳಲ್ಲಿ ೨೪, ೨೪ ಲಕ್ಷ ರೂಪಾಯಿ ಹುಟ್ಟುವಳಿಯಾಗತಕ್ಕ ಎರಡು ಭಾಗಗಳನ್ನು ಇಂಗ್ಲಿಷರೂ ಮತ್ತು ನಿಸಾಮನೂ ಹಂಚಿಕೊಂಡರು. ೫೦ ಲಕ್ಷ ರೂಪಾಯಿ ಹುಟ್ಟತಕ್ಕ ಮತ್ತೊಂದು ಭಾಗದಲ್ಲ ಮೈಸೂರು ಸಂಸ್ಥಾನವನ್ನು ತಿರುಗಿ ಸ್ಥಾಪಿಸಿದರು. ೧೨ ಲಕ್ಷ ರೂಪಾಯಿ ಹುಟ್ಟುವ ಉಳಿದ ಭಾಗವನ್ನು ಮರಾಟೆಯವರಿಗೆ ಕೊಡತಕ್ಕುದೆಂದು ಗೊತ್ತುಮಾಡಿದರು. ಇದರಿಂದ ಇಂಗ್ಲಿಷರಿಗೆ ಕೊಯಮುತ್ತೂರು, ಮಂಗಳೂರು ಮುಂತಾದ ಪ್ರಾಂತಗಳು ಸೇರಿದುವು; ಮತ್ತು ಶ್ರೀರಂಗಪಟ್ಟಣದ ಕೋಟೆಯೊಡನೆ ಕಾವೇರಿ ಮಧ್ಯ ಪ್ರದೇಶವನ್ನು ತಮ್ಮ ಅದ್ಭುತಜಯದ ಜ್ಞಾಪಕಕ್ಕಾಗಿ ಅವರು ತಮ್ಮ ಸ್ವಾಧೀನದಲ್ಲಿಯೇ ಇಟ್ಟುಕೊಂಡರು. ನಿಸಾಮನಿಗೆ ಗುತ್ತಿ, ಗುರುಮಕೊಂಡೆ ಮತ್ತು ಚಿತ್ರದುರ್ಗದ ಉತ್ತರಕ್ಕಿರುವ ಸೀಮೆ ಇವು ಸೇರಿದುವು. ಹರಪನಹಳ್ಳಿ, ಆನೆಗೊಂದಿ, ಮುಂತಾದ ಸ್ಥಳಗಳು ಮರಾಟೆಯವರಿಗೇ ಎಂದು ವಿಂಗಡಿಸಿಟ್ಟಿದ್ದ ಸೀಮೆಯಲ್ಲಿ ಸೇರಿದ್ದುವು.

೧೩೮. ಟೀಪುವಿನ ಮಕ್ಕಳನ್ನೂ ಮತ್ತು ಅವನಿಗೆ ಸಂಬಂಧಪಟ್ಟ ಇತರ ಜನರನ್ನೂ ವೇಲೂರಿಗೆ ಕಳುಹಿಸಿದರು. ಅನಂತರ ಹೈದರನು ದತ್ತು ಮಾಡಿಸಿದ್ದ ಚಾಮರಾಜ ಒಡೆಯರ ಮಗ ಕೃಷ್ಣರಾಜ ಒಡೆಯರಿಗೆ ಮೈಸೂರಿನ ನಸರ್‌ಬಾದ್ ಕೋಟೆಯಲ್ಲಿ ೧೭೯೯ನೆಯ ಇಸವಿ ಜೂನ್ ೩೦ನೆಯ

ತಾರೀಖಿನಲ್ಲಿ ಪಟ್ಟಾಭಿಷೇಕವಾಯಿತು. ಆಗ ಜನರಲ್ ಹ್ಯಾರಿಸ್ಸನು ಇಂಗ್ಲಿಷ್ ಸರ್ಕಾರದ ಪ್ರತಿನಿಧಿಯಾಗಿಯೂ ಮಿಾರ್ ಆಲಂ ಎಂಬವನು ನಿಸಾಮನ ಪ್ರತಿನಿಧಿಯಾಗಿಯೂ ಮುದ್ರೆಯುಂಗುರವನ್ನು ಕೃಷ್ಣರಾಜ ಒಡೆಯರಿಗೆ ಒಪ್ಪಿಸಿದರು. ಈ ಕಾಲದಲ್ಲಿ ದೊರೆಗಳಿಗೆ ಐದುವರ್ಷ ವಯಸ್ಸಾಗಿತ್ತು. ಇವರು ದೊಡ್ಡವರಾಗುವ ವರೆಗೂ ದಿವಾನ್ ಪೂರ್ಣಯ್ಯನವರು ಮಂತ್ರಿಯಾಗಿದ್ದು ಆಡಳಿತವನ್ನು ನಡೆಸತಕ್ಕುದೆಂದು ಗೊತ್ತಾಯಿತು. ಇಂಗ್ಲಿಷ್ ಸರ್ಕಾರದವರ ಪರವಾಗಿ ಮೇಲ್ವಿಚಾರಣೆಗೆ ''ರೆಸಿಡೆಂಟ್'' ಎಂಬ ಹೆಸರಿನಿಂದ ಒಬ್ಬ ಅಧಿಕಾರಿಯು ನಿಯಮಿಸಲ್ಪಟ್ಟನು.

೧೩೮. ಇದುವರೆಗೂ ಮೈಸೂರು ಸಂಸ್ಥಾನವು ಸ್ವಲ್ಪ ಹೆಚ್ಚು ಕಡಿಮೆಯಾಗಿ ಸ್ವತಂತ್ರವಾಗಿತ್ತು. ಇಲ್ಲಿಂದ ಮುಂದಕ್ಕೆ ಇಂಗ್ಲಿಷರ ಅಧಿಕಾರಕ್ಕೆ ಒಳಪಟ್ಟು ಆಶ್ರಿತ ಸಂಸ್ಥಾನಗಳಲ್ಲಿ ಒಂದು ಮುಖ್ಯ ಸಂಸ್ಥಾನವಾಯಿತು. ಮೊದಲು ಮೊಗಲ್ ಚಕ್ರವರ್ತಿಗಳೂ ಅನಂತರ ಮರಾಟೆಯವರೂ ಈ ದೇಶದಿಂದ ಆಗಾಗ ಪಗದಿಯನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಅಲ್ಲಿ ರಾಜ್ಯವಾಳುತ್ತಿದ್ದವರು ತಮ್ಮ ಆಡಳಿತಗಳಲ್ಲಿ ಅವರಿಂದ ವಿಧಿಸಲ್ಪಟ್ಟ ಯಾವ ಕಟ್ಟುಗಳಿಗೂ ಒಳಪಟ್ಟಿರಲಿಲ್ಲ, ಮೈಸೂರು ದೇಶವು ಇಂಗ್ಲಿಷರ ಕೈಸೇರಿದ ಮೇಲೆ, ಈ ಸ್ವಾತಂತ್ರ್ಯವು ತಪ್ಪಿ, ಕೆಲವು ಕಟ್ಟುಗಳಿಗೆ ಒಳಪಡಬೇಕಾಯಿತು. ಕೃಷ್ಣರಾಜ ಒಡೆಯರಿಗೂ ಗವರ್ನರ್ ಜನರಲ್ ಲಾರ್ಡ್ ಮಾರ್ನಿಂಗ್‌ಟನ್ ಸಾಹೇಬರಿಗೂ ೧೭೯೯ನೆಯ ಇಸವಿ ಜುಲೈ ತಿಂಗಳಲ್ಲಿ ಒಂದು ತಹನಾಮು ಹುಟ್ಟಿತು. ಈ ತಹನಾಮೆಯ ಪ್ರಕಾರ ವಿವರವೇನೆಂದರೆ—

(೧) ಇಂಗ್ಲಿಷ್ ಸರ್ಕಾರದವರು ಈ ದೇಶದ ಸಂರಕ್ಷಣೆಗೋಸ್ಕರ ಇಲ್ಲಿ ಒಂದು ಸೈನ್ಯವನ್ನಿಡತಕ್ಕುದು, ಇದಕ್ಕಾಗಿ ದೊರೆಗಳು ವರುಷ ಒಂದಕ್ಕೆ ೨೪॥ ಲಕ್ಷ ರೂಪಾಯಿ ಕೊಡತಕ್ಕುದು, ದೇಶಕ್ಕೆ ಶತ್ರುಗಳಿಂದ ಬಾಧೆಯುಂಟಾದಾಗ ಯುದ್ಧಕ್ಕೋಸ್ಕರಲೂ ಮತ್ತು ಇತರ ವಿಷಯಕ್ಕಾಗಿಯೂ ತಗಲುವ ವೆಚ್ಚಕ್ಕಾಗಿ ಗವರ್ನರ್ ಜನರಲ್ ಸಾಹೇಬರು ಕೇಳುವಷ್ಟು ಹಣವನ್ನು ಕೊಡತಕ್ಕುದು.

(೨) ಇಂಗ್ಲಿಷರಿಗೆ ಸಲ್ಲಬೇಕಾದ ಹಣವು ಕ್ರಮವಾಗಿ ಸಲ್ಲುವುದಕ್ಕೆ ಅಡಚಣೆಯುಂಟಾಗಬಹುದೆಂದು ಗವರ್ನರ್ ಜನರಲ್ ಸಾಹೇಬರಿಗೆ ತೋರಿದರೆ ಅವರು ದೇಶದ ಆಡಳಿತಗಳಲ್ಲಿ ಪ್ರವೇಶಮಾಡಿ, ತಕ್ಕ ಏರ್ಪಾಡುಗಳನ್ನು ಮಾಡಬಹುದು. ಅಥವಾ ತಮಗೆ ಬರಬೇಕಾದ ಹಣಕ್ಕೆ ಆಧಾರವಾಗಿ ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟು ಭಾಗವನ್ನು ತಮ್ಮ ಸ್ವಾಧೀನಮಾಡಿಕೊಳ್ಳಬಹುದು.

(೩) ಈ ಪ್ರಕಾರ ಸೀಮೆಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭವುಂಟಾದಾಗ, ಮಹಾರಾಜರು ಯಾವ ತಡೆಯೂ ಇಲ್ಲದೆ ಬಿಟ್ಟುಬಿಟ್ಟರೆ

ಇಂಗ್ಲಿಷ್ ಸರ್ಕಾರದವರು ಆದಾಯ ವೆಚ್ಚಗಳ ಲೆಕ್ಕವನ್ನು ಮಹಾರಾಜರಿಗೆ ಕ್ರಮವಾಗಿ ಒಪ್ಪಿಸತಕ್ಕುದು, ಮತ್ತು ಅವರ ವೆಚ್ಚಕ್ಕಾಗಿ ವರ್ಷಕ್ಕೆ ೩ ಲಕ್ಷ ರೂಪಾಯಿಯೂ ಮತ್ತು ಖರ್ಚು ಕಳೆದು ನಿಂತ ಹಣದಲ್ಲಿ ಐದರಲ್ಲಿ ಒಂದು ಪಾಲೂ ಕೊಡತಕ್ಕುದು.

(೪) ಇಂಗ್ಲಿಷರಿಗೆ ತಿಳಿಸದೆ ಮೈಸೂರು ದೊರೆಗಳು ಇತರ ದೇಶದ ದೊರೆಗಳೊಡನೆ ರಾಜ್ಯ ಸಂಬಂಧವಾಗಿ ಸ್ನೇಹವನ್ನು ಬೆಳೆಸಕೂಡದು

(೫) ದೇಶದಲ್ಲಿ ಕೋಟೆಗಳನ್ನು ಹೊಸದಾಗಿ ಕಟ್ಟುವುದಕ್ಕಾಗಲೀ ಮತ್ತು ಕೆಡಹುವುದಕ್ಕಾಗಲಿ ಗವರ್ನರ್ ಜನರಲ್ ಸಾಹೇಬರೇ ಗೊತ್ತು ಮಾಡತಕ್ಕುದು.

(೬) ಸರ್ಕಾರದ ಆಡಳಿತಗಳಲ್ಲಿಯೂ, ಪ್ರಜೆಗಳಿಗೆ ಅನುಕೂಲವನ್ನುಂಟುಮಾಡುವುದರಲ್ಲಿಯೂ, ದೊರೆಗಳ ಗೃಹಕೃತ್ಯವಿಚಾರದಲ್ಲಿಯೂ, ಗವರ್ನರ್ ಜನರಲ್ ಸಾಹೇಬರು ಹೇಳುವ ಮಾತುಗಳಿಗೆ ಮಹಾರಾಜರು ಕಿವಿಗೊಡತಕ್ಕುದು ಎಂದು ನಿಶ್ಚಯವಾಯಿತು.

ಕೃಷ್ಣರಾಜ ಒಡೆಯರು ಚಿಕ್ಕವರಾಗಿದ್ದುದರಿಂದ ಇಮ್ಮಡಿ ಕೃಷ್ಣರಾಜಒಡೆಯರ ಹೆಂಡತಿ ಲಕ್ಷ್ಮಮ್ಮಣ್ಣಿಯವರೂ ಮತ್ತು ಧಿವಾನ್ ಪೂರ್ಣಯ್ಯನವರೂ ತಹನಾಮೆಗೆ ರುಜು ಹಾಕಿದರು.

---

## ೨ನೆಯ ಪ್ರಕರಣ.

### ಪೂರ್ಣಯ್ಯನವರ ಮಂತ್ರಿತ್ವ.

೧೪೯. ಪೂರ್ಣಯ್ಯನವರು ಅಧಿಕಾರವನ್ನು ವಹಿಸಿದ ನಂತರ, ಧೋಂಡೋಜಿವಾಗ್ ಎಂಬ ಮರಾಟೆಯವನೂ ಮತ್ತು ಐಗೂರು ಪಾಳೆಯಗಾರ ವೆಂಕಟಾದ್ರಿನಾಯಕನೂ ಸೀಮೆಯಲ್ಲಿ ಪುಂಡುಮಾಡಿದರು. ಧೋಂಡೋಜಿವಾಗನನ್ನು ಟೀಪುವು ಮಹಮ್ಮದೀಯ ಮತಕ್ಕೆ ಸೇರಿಸಿ ಕಾಡುಮೃಗಗಳನ್ನು ಕಟ್ಟುವಂತೆ ಸರಪಣಿಗಳಿಂದ ಕಟ್ಟಿಸಿ, ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಡಿಸಿದನು. ಇಂಗ್ಲೀಷರು ಹಲ್ಲ ಹತ್ತಿದ ದಿವಸ ಅವನು ತಪ್ಪಿಸಿಕೊಂಡು ನಗರದ ಪ್ರಾಂತ ಹೊರಟು, ಅಲ್ಲಿ ಊರುಗಳನ್ನೆಲ್ಲಾ ಕೊಳ್ಳೆ ಮಾಡುವುದಕ್ಕೆ ಉಪಕ್ರಮಿಸಿದನು. ಆದರೆ ಮೈಸೂರು ದಂಡು ಇವನನ್ನು ಶಿಕಾರಿಪುರದ ಬಳಿ ಸೋಲಿಸಿ, ಇವನ ಹಾವಳಿಯನ್ನು ಅಡಗಿಸಿತು. ಟೀಪುವು ಸತ್ತನಂತರ, ವೆಂಕಟಾದ್ರಿನಾಯಕನು ತಾನು ಮೈಸೂರು ಸಂಸ್ಥಾನಕ್ಕೆ ಕೊಡುತ್ತಿದ್ದ ಪಗದಿಯನ್ನು ಕೊಡದೆ ಸ್ವತಂತ್ರನಾಗಬೇಕೆಂದು ದಂಡು ಕಟ್ಟಿದನು. ಆದರೆ ಅವನ ಪ್ರಯತ್ನವು ಸಾಗಲಿಲ್ಲ. ಪೂರ್ಣಯ್ಯನವರು ಅವನ ಸೀಮೆಯನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು. ಅನಂತರ

ಸೀಮೆಯಲ್ಲಿದ್ದ ತುಂಟುಪಾಳಯಗಾರರಲ್ಲಿ ಅನೇಕರಿಗೆ ವೇತನಗಳನ್ನಾಗಲಿ ಸರ್ಕಾರದ ಉದ್ಯೋಗಗಳನ್ನಾಗಲೀ ಕೊಟ್ಟು ವಶಪಡಿಸಿಕೊಂಡು, ಮತ್ತು ಅವರೆಲ್ಲರೂ ಮೈಸೂರಿನಲ್ಲಿಯೇ ಇರಬೇಕೆಂದು ಗೊತ್ತು ಮಾಡಿದರು. ಇದೇ ಪ್ರಕಾರ ಟೀಪುವಿನ ಸೇನಾಜನಗಳಿಗೆ ಕೆಲಸಗಳನ್ನು ಮಾಡಿಕೊಟ್ಟು, ಅವರಿಂದುಂಟಾಗಿದ್ದ ಹಾವಳಿಯನ್ನೂ ತಪ್ಪಿಸಿದರು. ಹೀಗೆ ಅನೇಕವಿಧ ವಾದ ಉಪಾಯಗಳಿಂದ ದೇಶದಲ್ಲುಂಟಾಗುತ್ತಿದ್ದ ಗಲಭೆಯನ್ನು ಅಡಗಿಸಿ ಜನರಿಗೆ ಭಯವನ್ನು ತಪ್ಪಿಸಿದರು.

೧೪೦. ಖಜಾನೆ, ಕಂದಾಯ, ಚಿಲ್ಲರೆ ಬಾಬು ಕುದುರೆ ರಾವುತರು ಕಾಲುಬಲ, ಮತ್ತು ಕಂದಾಚಾರವೆಂಬದಾಗಿ ದೇಶದ ಆಡಳಿತಗಳು ಆರು ಇಲಾಖೆಗಳಾಗಿ ವಿಂಗಡಿಸಿ ನಡೆಯಿಸಲ್ಪಡುತ್ತಿದ್ದುವು. ನ್ಯಾಯ ಶೋಧನೆ ಗಾಗಿ ಪ್ರತ್ಯೇಕ ನ್ಯಾಯಸ್ಥಾನಗಳಿರಲಿಲ್ಲವಾದುದರಿಂದ ೧೮೦೫ನೆಯ ಇಸವಿ ಯಲ್ಲಿ "ಅದಾಲತ್" ಕಚೇರಿ ಎಂದು ಒಂದು ಕಚೇರಿ ಏರ್ಪಾಡಾಯಿತು. ಆದರೆ ಅಲ್ಲಿನ ಅಧಿಕಾರಿಗಳು ದಿವಾನರ ಆಲೋಚನೆಯನ್ನು ಕೇಳದೆ ತೀರ್ಪ ನ್ನು ಹೇಳುತ್ತಿರಲಿಲ್ಲ. ಬೆಂಗಳೂರು, ಬಿದನೂರು ಮತ್ತು ಚಿತ್ರದುರ್ಗ, ಈ ಮೂರು ಸ್ಥಳಗಳಲ್ಲಿ ಸುಬೇದಾರರೆಂಬ ಅಧಿಕಾರಿಗಳಿದ್ದರು. ಇವರ ಕೈಕೆ ಳಗೆ ತಾಲ್ಲೂಕು ಅಮಿಲದಾರುಗಳಿದ್ದರು. ಈ ಸುಬೇಧಾರರೂ ಮತ್ತು ಅ ಮಿಲದಾರೂ ಪಂಚಾಯಿತರ ಸಹಾಯದಿಂದ ವ್ಯಾಜ್ಯಗಳನ್ನು ಮತ್ತು ತಪ್ಪಿತ ಗಳನ್ನು ವಿಚಾರಿಸುತ್ತಿದ್ದರು.

೧೪೧. ಭೂಮಿಯ ಕಂದಾಯ, ಸುಂಕ, ಚಿಲ್ಲರೆ ತೆರಿಗೆ, ಅಬ್ಕಾರಿ, ಹೊಗೆಯಸೊಪ್ಪು ಇವುಗಳಿಂದ ಸರಕಾರದ ಉತ್ಪತ್ತಿಯು ಆಗುತ್ತಿದ್ದಿತು. ಟೀಪುವು ಸಾಯುವ ಕಾಲದ ವರೆಗೂ ಸರಕಾರಕ್ಕೆ ಬಾರದೆ ನಿಂತಿದ್ದ ಹಣ ವನ್ನು ಪೂರ್ಣಯ್ಯನವರು ಮಂತ್ರಿತ್ವಕ್ಕೆ ಬಂದಮೇಲೆ ವಸೂಲ್ ಮಾಡಲು ಹೊರಟು, ಒಂದೊಂದು ಸಮಯದಲ್ಲಿ ಸೋಡಿಯನ್ನು ಮಾಡಿ ಮುಂದೆ ಹಿಂದೂ ಧರ್ಮಶಾಸ್ತ್ರದ ಪ್ರಕಾರ ತೆರಿಗೆಗಳನ್ನು ತೆಗೆದುಕೊಳ್ಳುವುದಾಗಿ ಪ್ರಜೆಗಳಿಗೆ ತಿಳಿಸಿದರು. ಇದರಿಂದ, ಖುಷ್ಕೀ ಜಮೀನಿನಲ್ಲಿ ಬೆಳೆದ ಅರ್ಧ ವನ್ನು ತರೀ ಜಮೀನಿನಲ್ಲಿ ಬೆಳದ ದವಸದಲ್ಲಿ ವಾಟಿಕೆಯಾಗಿ ಅರ್ಧದ ಕ್ರಯವನ್ನೂ ರೈತರು ಕೊಡುವಂತಾಯಿತು. ಅಡಿಕೆ, ತೆಂಗು ಮುಂತಾದ ತೋಟಗಳಿಗೆ ಕಂದಾಯವನ್ನು ಕ್ಲಿಪ್ತಮಾಡಿ, ಆ ಕಂದಾಯವನ್ನು ತಪ್ಪದೆ ಕೊಟ್ಟುಕೊಂಡು ಬರುವವರೆಗೂ, ಅವುಗಳ ಬಾಧ್ಯತೆಯು ತಲೆತಲೆಗೂ ರೈತ ರಿಗೆ ಸೇರಿದುದೆಂದು ಗೊತ್ತುಮಾಡಿದರು. ರೈತರು ಅಪೇಕ್ಷಿಸಿದರೆ ಇದೇ ಪ್ರಕಾರ ತರೀ, ಖುಷ್ಕಿ ಜಮೀನುಗಳಿಗೂ ನಡೆಸಿಕೊಡುವುದಾಗಿ ಹೇಳಿದರು ಮೈಸೂರು ಮತ್ತು ಪಟ್ಟಣ ಅಷ್ಟಗ್ರಾಮ ತಾಲ್ಲೂಕುಗಳಲ್ಲಿ ಭೂಮಿಯನ್ನು ಕ್ರಮವಾಗಿ ಅಳತೆ ಮಾಡಿಸಿದರು. ಅನೇಕ ಸ್ಥಳಗಳಲ್ಲಿ ವ್ಯವಸಾಯ ಮಾಡುವವರಿಲ್ಲದೆ ಭೂಮಿಯು ಪಾಳುಬಿದ್ದಿದ್ದುದರಿಂದ, ಇತರ ಕಡೆಯಿಂದ

ರೈತರನ್ನು ಕರೆಸಿ, ಅವರಿಗೆ ಸರಕಾರದಿಂದ ಮುಂಗಡವನ್ನು ಕೊಟ್ಟು ವ್ಯವಸಾಯ ಮಾಡಿಸಿದರು. ಸರಕಾರದ ಕಂದಾಯವನ್ನು ಮೊದಲಿನಂತೆ ಗುತ್ತಿಗೆಗೆ ಕೊಟ್ಟರೆ ಸರಕಾರಕ್ಕೆ ನಷ್ಟವೂ ಜನರಿಗೆ ತೊಂದರೆಯೂ ಆಗುವುದೆಂದು ಆಲೋಚಿಸಿ, ಆ ಪದ್ಧತಿಯನ್ನು ತಪ್ಪಿಸಿ, ಹಣವನ್ನು ಬರಮಾಡಿಕೊಳ್ಳುವುದಕ್ಕೆ ಸರಕಾರದಿಂದಲೇ ಜನರನ್ನು ನೇಮಿಸಿದರು. ಪೂರ್ಣಯ್ಯನವರು ಟೀಪುವಿನ ಕಾಲದಲ್ಲಿ ತಪ್ಪಿಹೋಗಿದ್ದ ದೇವಾದಾಯ ಬ್ರಹ್ಮಾದಾಯಗಳನ್ನು ಹಿಂದಕ್ಕೆ ಕೊಟ್ಟುದಲ್ಲದೆ ಅವನು ಮುಸಲ್ಮಾನರ ಮಸೀತಿಗಳಿಗೆ ಕೊಟ್ಟಿದ್ದ ತಸ್ತೀಕುಗಳನ್ನೆಲ್ಲಾ ಹಾಗೆಯೇ ಸ್ಥಿರಪಡಿಸಿದರು. ದೇಶದಲ್ಲಿ ಅನೇಕ ಕೆರೆಗಳನ್ನು ಕಟ್ಟಿಸಿ ಕಾಲುವೆಗಳನ್ನು ತೋಡಿಸಿದರು ಪ್ರಯಾಣಿಕರ ಅನುಕೂಲ್ಯಕ್ಕೋಸ್ಕರ ಅಲ್ಲಲ್ಲಿ ಸತ್ರಗಳನ್ನೂ ಬಂಗಲೆಗಳನ್ನೂ ಏರ್ಪಡಿಸಿದರು. ಜನರಿಗೆ ಸಿಡುಬು ಹಾಕಿಸುವದಕ್ಕೆ ತಕ್ಕ ಏರ್ಪಾಡುಗಳನ್ನೂ ಮಾಡಿದರು,

೧೪೩. ಇದಲ್ಲದೆ ಇಂಗ್ಲಿಷರಿಂದ ಸಂಸ್ಥಾನವು ಊರ್ಜಿತವಾಯಿತೆಂದು ಅವರಲ್ಲಿ ಬಹಳವಾಗಿ ಅನುರಾಗವನ್ನು ಹೆಚ್ಚಿಸಿದರು. ಇಂಗ್ಲಿಷ್ ಸೇನಾಪತಿಯಾದ ಕರ್ನಲ್ ವೆಲ್ಲೆಸ್ಲಿಯ ಜ್ಞಾಪಕಾರ್ಥವಾಗಿ ಶ್ರೀರಂಗಪಟ್ಟಣದಬಳಿ ಕಾವೇರೀನದಿಗೆ ಸೇತುವೆಯನ್ನು ಕಟ್ಟಿಸಿ, ಅದಕ್ಕೆ ವೆಲ್ಲೆಸ್ಲಿ ಸೇತುವೆಯೆಂದು ಹೆಸರಿಟ್ಟರು. ರೆಸಿಡೆಂಟ್ ಕ್ಲೋಸ್ ಸಾಹೇಬನ ಜ್ಞಾಪಕಕ್ಕೋಸ್ಕರ ಕ್ಲೋಸ್‌ಪೇಟೆಯನ್ನು ಕಟ್ಟಿಸಿದರು. ಇದೇ ಪ್ರಕಾರ ರೆಸಿಡೆಂಟ್ ಸಾಹೇಬನ ಜ್ಞಾಪಕಕ್ಕಾಗಿ ಶ್ರೀರಂಗಪಟ್ಟಣಕ್ಕೆ ಉತ್ತರದಲ್ಲಿ ಒಂದು ದೊಡ್ಡ ಕಲ್ಲುಕಂಬದ ಮೇಲೆ ಶಾಸನವನ್ನು ಬರೆಯಿಸಿ ನೆಡಿಸಿದರು ಇಂಗ್ಲಿಷರಿಗೂ ಮರಾಟೆಯವರಿಗೂ ಯುದ್ಧವಾದಾಗ, ಇಂಗ್ಲೀಷರ ಸಹಾಯಕ್ಕೆ ಮೈಸೂರು ಸೈನ್ಯವನ್ನು ಕಳುಹಿಸಿದರು. ಇದೇ ಪ್ರಕಾರ ೧೮೦೯ನೆಯ ಇಸವಿಯಲ್ಲಿ ಇಂಗ್ಲಿಷ್ ಸೈನ್ಯದವರಲ್ಲಿ ಕೆಲವರು ಪಿತೂರಿ ಮಾಡಿ ತಮ್ಮ ಅಧಿಕಾರಿಗಳಿಗೆ ಎದುರುಬೀಳಲು ಮೈಸೂರು ಸೈನ್ಯವನ್ನು ಕಳುಹಿಸಿ ವೆಬ್ಬನ ಶಾಸನದ ಕಲ್ಲಿನ ಬಳಿ ಅವರನ್ನು ಸೋಲಿಸಿದರು. ಅಂದಿನಿಂದ ಈ ಕಲ್ಲಿಗೆ ''ರಣಗಂಬ'' ವೆಂದು ಹೆಸರಾಯಿತು.

೧೪೪. ಹೀಗೆ ಅನೇಕ ವಿಧದಲ್ಲಿ ದೇಶಕ್ಕೆ ಕ್ಷೇಮವನ್ನುಂಟುಮಾಡಿದುದರಿಂದ, ಪೂರ್ಣಯ್ಯನವರಿಗೆ ದೊರೆಗಳು ಎಳಂದೂರನ್ನು ಜಹಗೀರಾಗಿ ಕೊಟ್ಟರು. ಪೂರ್ಣಯ್ಯನವರು ೧೮೧೧ನೆಯ ಇಸವಿಯ ವರೆಗೂ ದಿವಾನ್‌ಗಿರಿಯನ್ನು ಮಾಡುತ್ತಿದ್ದು, ಆ ಇಸವಿಯಲ್ಲಿ ಕೃಷ್ಣರಾಜ ಒಡೆಯರಿಗೆ ಅಧಿಕಾರವನ್ನು ಒಪ್ಪಿಸಿದರು. ಅನಂತರ ಇವರು ಚಿರಕಾಲ ಜೀವಿಸದೆ ೧೮೧೨ನೆಯ ಇಸವಿಯಲ್ಲಿಯೇ ಶ್ರೀರಂಗಪಟ್ಟಣದಲ್ಲಿ ಸ್ವರ್ಗಸ್ಥರಾದರು.

೧೪೫. ಇವರಿಗೆ ರಾಜತಂತ್ರದಲ್ಲಿ ಅಪಾರವಾದ ಶಕ್ತಿಯಿದ್ದಿತು. ಇವರು ಹೈದರನ ಕಾಲದಲ್ಲಿ ಅನ್ನದಾನಸೆಟ್ಟಿ ಎಂಬ ವರ್ತಕನ ಬಳಿ ಮುತ್ಸ

ದ್ಧಿಯಾಗಿದ್ದು, ಅನಂತರ ತೋಷೀಖಾನೆಯ ದಫ್ತರದ ಕೆಲಸ ನೋಡುತ್ತಿದ್ದ ವೆಂಕಟರಮಣಯ್ಯನೆಂಬವನ ಬಳಿಯಲ್ಲಿ ಮುನೆಷೀ ಕೆಲಸವನ್ನು ಪಡೆದರು. ತಮ್ಮ ಕೆಲಸದಲ್ಲಿ ಬಹು ಶ್ರದ್ಧೆಯನ್ನೂ ಜಾಣತನವನ್ನೂ ತೋರಿಸಿದುದರಿಂದ ವೆಂಕಟರಮಣಯ್ಯನು ಮೃತನಾದ ಬಳಿಕ ಅವನ ಕೆಲಸವು ಇವರಿಗೇ ಆಯಿತು. ಒಂದಾವೃತ್ತಿ ಅಂಚೆ ಶಾಮಯ್ಯನ ಕಣ್ಣು ಪೂರ್ಣಯ್ಯನವರ ಮೇಲೆ ಬಿದ್ದಿತು. ಇವರ ಮೇಲೆ ಇಲ್ಲದ ತಪ್ಪುಗಳನ್ನು ಹೊರಿಸಿ ಹೆಚ್ಚಾಗಿ ದಂಡವನ್ನು ತೆಗೆಯುವುದಕ್ಕೋಸ್ಕರ ಗಿಡ್ಡಂಗಿಯಲ್ಲಿ ಕೂಡಿಸಿದ್ದನು. ಆಗ ಬರ್ಕಿಶ್ರೀನಿವಾಸ ರಾಯರೆಂಬವರು ಸಹಾಯ ಮಾಡಿ ಇವರನ್ನು ಗಿಡ್ಡಂಗಿಯಿಂದ ಬಿಡಿಸಿದರು. ಪೂರ್ಣಯ್ಯನವರು ಕೊಡಬೇಕಾಗಿ ಬಂದ ದಂಡವನ್ನು ಅನ್ನದಾನಸೆಟ್ಟಿಯು ತಾನೇ ವಹಿಸಿ ತೀರಿಸಿ, ಅವರ ಕೆಲಸವು ಅವರಿಗೇ ನಿಲ್ಲುವಂತೆ ಮಾಡಿದನು. ಹೈದರನು ಸಾಯುವ ಕಾಲದಲ್ಲಿ ಇವರು ದಂಡಿನಸರಬರಾಯಿ ಮೇಲ್ವಿಚಾರಣೆಯ ಕೆಲಸದಲ್ಲಿದ್ದರು. ಹೈದರನು ಸತ್ತ ಸುದ್ದಿಯನ್ನು ಪ್ರಕಟಿಸಿದರೆ ದಂಡಿನ ಕಟ್ಟು ತಪ್ಪಿ ಕೆಲಸ ಕೆಡುವುದೆಂದು ಮೊದಲು ಎಚ್ಚರಿಸಿದವರೇ ಇವರು. ಟೀಪ್ಪುವಿನ ಕಾಲದಲ್ಲಿ ಇವರು ಖಜಾನೆಗೆ ಅಧ್ಯಕ್ಷರಾಗಿದ್ದರು. ಅವನು ಅವರ ಶಕ್ತಿಗೆ ಮೆಚ್ಚಿ "ಮೀರ್‌ಮಿರಾಣ್ ಎಂಬ ಬಿರುದನ್ನು ಕೊಟ್ಟಿದ್ದನು. ಇಂತಹವರನ್ನು ಇಂಗ್ಲಿಷರು ಮಂತ್ರಿತ್ವಕ್ಕೆ ನೇಮಿಸಿದುದರಿಂದ ದೇಶಕ್ಕೆ ಬಹಳವಾಗಿ ಉಪಕಾರವಾಯಿತು. ಪೂರ್ಣಯ್ಯನವರ ಹೆಸರನ್ನು ಈಗಲೂ ಈ ದೇಶದ ಜನರು ಮರೆತಿಲ್ಲ.

---

## ೩ನೆಯ ಪ್ರಕರಣ.

### ಕೃಷ್ಣರಾಜ ಒಡೆಯರು.

೧೮೧೧. ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವತಂತ್ರರಾಗಿ ರಾಜ್ಯವಾಳುವುದಕ್ಕೆ ಉಪಕ್ರಮಿಸಿದ ನಂತರ, ಇಂಗ್ಲಿಷ್ ರೆಸಿಡೆಂಟು ದೇಶದ ಆಡಳಿತಗಳಲ್ಲಿ ಮುಂಚಿನಂತೆ ಹೆಚ್ಚಾಗಿ ಪ್ರವೇಶಮಾಡುವುದನ್ನು ಬಿಟ್ಟನು. ಕೃಷ್ಣರಾಜಒಡೆಯರಿಗೆ ಇನ್ನೂ ಅನುಭವ ಕಡಿಮೆಯಾಗಿದ್ದುದರಿಂದ ಅವರ ಸಮೀಪದಲ್ಲಿದ್ದ ಅಧಿಕಾರಿಗಳ ಸಹಾಯವು ಹೆಚ್ಚಾಗಿ ಬೇಕಾಯಿತು; ಆದರೆ ಈ ಅಧಿಕಾರಿಗಳು ತಮ್ಮ ಸ್ವಪ್ರಯೋಜನವನ್ನು ಮುಂದುಮಾಡಿಕೊಂಡರೆ ಹೊರತು ಮಹಾರಾಜರ ಪುರೋಭಿವೃದ್ಧಿಯನ್ನು ನೋಡಲಿಲ್ಲ. ಇದರಿಂದ ಪೂರ್ಣಯ್ಯನವರು ಕೂಡಿಸಿಟ್ಟಿದ್ದ ಮೂರುಕೋಟಿ ರೂಪಾಯಿಗಳು ೩–೪ ವರ್ಷಗಳಲ್ಲಿಯೇ ವೆಚ್ಚವಾಗುವಂತೆ ಮಾಡಿದರು. ಇದಲ್ಲದೆ ತಾಲ್ಲೂಕುಗಳ ಉತ್ಪತ್ತಿಯನ್ನು ಪ್ರತಿವರ್ಷವೂ ಗುತ್ತಿಗೆಗೆ ಕೊಟ್ಟು ಹೆಚ್ಚಾಗಿ ಹಣ

ವನ್ನು ಕೊಟ್ಟವರಿಗೆ ''ಅಮಲ್ದಾರಿ ಕೆಲಸವನ್ನು'' ಕೊಡುತ್ತಿದ್ದರು ಈ ಅಮಲ್ದಾರರು ಮುಂದಿನ ವರ್ಷ ತಮಗೆ ಅಧಿಕಾರವಿರುತ್ತದೆಯೋ ಇಲ್ಲವೋ ಎಂಬ ಸಂಶಯದಿಂದ, ''ಗಾಳಿ ಬಂದಾಗಲೆ ತೂರಿಕೊಳ್ಳಬೇಕೆಂಬ'' ಗಾದೆಗೆ ಅನುಸಾರವಾಗಿ, ಆದಮಟ್ಟಿಗೆ ರೈತರಿಂದ ಹಣವನ್ನು ದೋಚಿಕೊಳ್ಳುವುದಕ್ಕೆ ಉಪಕ್ರಮಿಸಿದರು. ಅವರಲ್ಲಿ ಕೆಲವರು ಕಳ್ಳರೊಡನೆ ಪಾಲಿಗೆ ಮಾತಾಡಿಕೊಂಡು ಅವರು ಮಾಡಿದ ಹಾವಳಿಗಳಿಗೆ ಕಣ್ಣುಮುಚ್ಚಿಕೊಂಡು ಸುಮ್ಮನಿರುತ್ತಿದ್ದರು.

೧೪೬. ಪ್ರಜೆಗಳಿಗೆ ಅಸಮಾಧಾನವುಂಟಾಗಲಿಕ್ಕೆ ಇತರ ಕಾರಣಗಳೂ ಇದ್ದುವು. ಶ್ರೀರಂಗಪಟ್ಟಣವು ಇಂಗ್ಲಿಷರ ಕೈಸೇರುವುದಕ್ಕೆ ಮುಂಚೆ, ಜನರಿಗೆ ಸುಲಭವಾಗಿ ಜೀವನವು ಸಿಕ್ಕುತ್ತಿದ್ದಿತು. ದೊಡ್ಡ ಸೈನ್ಯವಿದ್ದುದರಿಂದ ಅನೇಕರು ಸೈನ್ಯಕ್ಕೆ ಸೇರಿಕೊಂಡು ಜೀವನಮಾಡುತಿದ್ದರು, ಅನೇಕಜನ ಕೈವಾಡದವರಿಗೆ ಕೆಲಸವಿದ್ದಿತು. ಸೈನ್ಯದವರಿಗೆ ಬಹಳ ದಿನಸಿಯು ಬೇಕಾಗುತ್ತಿದ್ದಿತು. ಇದರಿಂದ ಬೆಳೆ ಮಾಡಿದವರಿಗೆ ಅವರವರ ಬೆಳೆಗೆ ಹೆಚ್ಚಾಗಿ ಕ್ರಯವು ದೊರೆಯುತ್ತಿದ್ದಿತು. ಇಂಗ್ಲಿಷರು ಈ ದೇಶದಲ್ಲಿ ನೆಲೆಯಾಗಿ ನಿಂತಮೇಲೆ ಸೈನ್ಯವು ಕಡಿಮೆಯಾಯಿತು, ಮತ್ತು ಇತರ ವಿದದಲ್ಲಿ ಜನಗಳಿಗೆ ಸಿಕ್ಕುತ್ತಿದ್ದ ಲಾಭವೂ ನಿಂತು ಹೋಯಿತು.

೧೪೭. ಈ ಕಾರಣಗಳಿಂದ, ೧೮೩೦ನೆಯ ಇಸವಿಯಲ್ಲಿ ನಗರ ಪ್ರಾಂತದ ಜನರು ಕೂಟವನ್ನು ಕೂಡಿಕೊಂಡು, ಸರ್ಕಾರವನ್ನು ಅಲಕ್ಷ್ಯಮಾಡುವುದಕ್ಕೆ ಪ್ರಾರಂಭಿಸಿದರು. ಅಲ್ಲಿಯ ಫೌಜುದಾರನಾಗಿದ್ದ ರಾಮರಾಯನೆಂಬವನು ಮುಖ್ಯಮುಖ್ಯವಾದ ಕೆಲಸಗಳನ್ನೆಲ್ಲಾ ತನ್ನ ಸ್ವಂತ ಜನಗಳಿಗೇ ಕೊಟ್ಟು, ಅವರು ಮಾಡಿದ ಅನ್ಯಾಯಗಳನ್ನೆಲ್ಲಾ ದೊರೆಗಳಿಗೆ ತಿಳಿಯದಂತೆ ಮರೆಮಾಜುತ್ತಿದ್ದನು,

೧೪೮. ಈ ಸಮಯದಲ್ಲಿ ಕುಂಸಿ ಸ್ಥಳದವನಾದ ಮಲ್ಲನೆಂಬವನು ಬೂದಿಬಸಪ್ಪನೆಂದು ಹಸರಿಟ್ಟುಕೊಂಡು, ತಾನು ಬಿದನೂರು ರಾಣಿ ವೀರಮ್ಮಾಜಿಗೆ ಮೊಮ್ಮಗನಾಗಬೇಕೆಂದೂ, ಬಿದನೂರನ್ನು ಸಂಗ್ರಹಿಸುವುದಕ್ಕೆ ತಾನು ಹೊರಟಿರುವುದಾಗಿಯೂ ಹೇಳಿಕೊಳ್ಳುತ್ತಾ, ಅನೇಕ ಜನರನ್ನು ಭ್ರಮೆಗೊಳಿಸಿ ತನ್ನ ವಶಮಾಡಿಕೊಂಡನು. ೧೮೩೦ನೆಯ ಇಸವಿ ಆಗಸ್ಟು ತಿಂಗಳಲ್ಲಿ ಇವನು ಕೂಡಿಸಿದ್ದ ಸೈನ್ಯವು ಅನಂತಪುರಕ್ಕೆ ಮುತ್ತಿಗೆ ಹಾಕಿತು. ಆದರೆ ಕೋಟೆಯು ಸ್ವಾಧೀನವಾಗಲಿಲ್ಲ. ಹೊಳೆಹೊನ್ನೂರು, ಹೊನ್ನಾಳಿ ಮುಂತಾದ ಸ್ಥಳಗಳಲ್ಲಿ ರೈತರು ಬೂದಿ ಬಸಪ್ಪನ ಕಡೆಗೆ ಸೇರಿಕೊಂಡು ದೊಂಬಿ ಮಾಡುವುದಕ್ಕಾರಂಭಿಸಿದರು. ಇಷ್ಟರಲ್ಲಿಯೇ ಮೈಸೂರಲ್ಲಿದ್ದ ತರೀಕೆರೆ ಪಾಳಯಗಾರ ರಂಗಪ್ಪನಾಯಕನು ತನ್ನ ಮಗ ಹನುಮಪ್ಪನಾಯಕ, ಮತ್ತು ಸೋದರಳಿಯ ಸರ್ಜಪ್ಪನಾಯಕ, ಇವರುಗಳೊಡನೆ ತಪ್ಪಿಸಿಕೊಂಡು ಹೋಗಿ ಪುಂಡೆದ್ದ ರೈತರನ್ನು ಸೇರಿಕೊಂಡು

ಕೌಲೆದುರ್ಗವನ್ನೂ, ಕಾಮನ ದುರ್ಗವನ್ನೂ ಸ್ವಾಧೀನಮಾಡಿಕೊಂಡನು. ಬೆಂಗಳೂರು ಪ್ರಾಂತದಲ್ಲಿಯೂ, ಚಿತ್ರದುರ್ಗದ ಪ್ರಾಂತದಲ್ಲಿಯೂ ರೈತರು ಕೂಟವನ್ನು ಕೂಡುವುದಕ್ಕಾರಂಭಿಸಿದರು.

೧೪೯. ಕೃಷ್ಣರಾಜ ಒಡೆಯರು ರೈತರ ಅಸಮಾಧಾನವನ್ನು ತಾವೇ ವಿಚಾರಿಸಬೇಕೆಂದು ಡಿಸೆಂಬರು ತಿಂಗಳಲ್ಲಿ ಮೈಸೂರಿಂದ ಚೆನ್ನ ರಾಯಪಟ್ಟಣದ ಕಡೆಗೆ ಹೊರಟರು. ಮಾರ್ಗದಲ್ಲಿದ್ದ ರೈತರು ಕಂದಾಯ ವು ಅಧಿಕವಾಗಿರುವುದೆಂದೂ, ಸರ್ಕಾರದ ಉದ್ಯೋಗಸ್ಥರು ಪ್ರಜೆಗಳ ಕಷ್ಟವನ್ನು ಕೇಳದೆಯೂ, ಹೆಂಗಸರಿಗೆ ಮಾನಭಂಗ ಮಾಡಿಯೂ, ಇನ್ನೂ ಇತರ ವಿಧಗಳಲ್ಲಿ ಹಿಂಸೆ ಮಾಡುತ್ತಾರೆಂದೂ ತಮ್ಮ ತಮ್ಮ ಸಂಕಟಗಳನ್ನು ಹೇಳಿಕೊಂಡರು. ಮಹಾರಾಜರು ಅವುಗಳನ್ನೆಲ್ಲ ವಿಚಾರಿಸಿ, ತಪ್ಪುಮಾಡಿದ ಅಧಿಕಾರಿಗಳಿಗೆ ಶಿಕ್ಷೆಮಾಡಿ ಜನರನ್ನು ಸಮಾಧಾನಪಡಿಸಿದರು. ಅನಂತರ ಕಾಮನದುರ್ಗ, ಕವಲೆದುರ್ಗ ಮೊದಲಾದ ಸ್ಥಳಗಳನ್ನು ತಿರುಗಿ ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದ, ದಿವಾನ್ ವೆಂಕಟೇ ಅರಸಿನವರನ್ನೂ, ಬಕ್ಷಿ ಅಣ್ಣಪ್ಪನನ್ನೂ, ನಗರದ ಪ್ರಾಂತ ಕಳುಹಿಸಿ, ದೊರೆಗಳು ಮೈಸೂರಿಗೆ ಹಿಂದಿರುಗಿದರು.

೧೫೦. ವೆಂಕಟೇ ಅರಸಿನವರು ೧೮೩೧ನೆಯ ಇಸವಿ ಫೆಬ್ರುವರಿ ತಿಂಗಳಲ್ಲಿ ಕೌಲೆದುರ್ಗವನ್ನು ಸಾಧಿಸಿದರು. ಅನಂತರ ಹೊನ್ನಾಳಿ, ನಗರ ಮುಂತಾದ ಸ್ಥಳಗಳೂ ಕೈಸೇರಿದುವು. ಇದರಿಂದ ರೈತರ ಕೂಟ ಒಡೆದು ಅವರು ಚೆದರಿ ಹೋದರು. ಪಾಳಯಗಾರರು ಮಾತ್ರ ಇನ್ನೂ ಸಿಕ್ಕಿರಲಿಲ್ಲ. ಇಷ್ಟರಲ್ಲಿಯೇ ಕೃಷ್ಣರಾಜ ಒಡೆಯರಿಗೆ ಮೈಸೂರು ರಾಜ್ಯ ಭಾರವು ಕೈತಪ್ಪಿ ಹೋಯಿತು.

೧೫೧. ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಸಾಹೇಬರು ನಡೆದ ಅಸಂಗತಗಳೆಲ್ಲ ದೊರೆಗಳ ತಪ್ಪಿತದಿಂದಲೇ ಉಂಟಾಯಿತೆಂದು ಭಾವಿಸಿ, ಪಗದಿ ಹಣಕ್ಕೆ ಕುಂದುಕ ಬಂದೀತೆಂಬ ಭಯದಿಂದ ೧೮೦೯ನೆಯ ಇಸವಿಯಲ್ಲಿ ಹುಟ್ಟಿದ ತಹನಾಮೆಯ ಪ್ರಕಾರ ಆಡಳಿತವನ್ನು ಇಂಗ್ಲಿಷರಿಗೆ ಒಪ್ಪಿಸಬೇಕೆಂದು ದೊರೆಗಳಿಗೆ ಕಾಗದವನ್ನು ಬರೆದು ಕಳುಹಿಸಿದರು, ಟೀಪು ಸತ್ತ ಕಾಲದಲ್ಲಿ ಇಂಗ್ಲಿಷರು ಮಾಡಿದ ಉಪಕಾರವನ್ನು ಸ್ಮರಿಸಿ ದೊರೆಗಳು ೧೮೩೧ನೆಯ ಇಸವಿ ಅಕ್ಟೋಬರು ೩ನೆಯತಾರೀಖಿನಲ್ಲಿ ರಾಜ್ಯವನ್ನು ಇಂಗ್ಲಿಷ್ ಅಧಿಕಾರಿಗಳ ವಶಕ್ಕೆ ಒಪ್ಪಿಸಿಬಿಟ್ಟರು. ಕೃಷ್ಣರಾಜ ಒಡೆಯರು ಆ ಕಾಲದಲ್ಲಿ ತಾಳ್ಮೆಯನ್ನಿಟ್ಟುಕೊಳ್ಳದೆ ದುಡುಕಿದ್ದರೆ, ಪ್ರಬಲರಾದ ಇಂಗ್ಲಿಷರು ಮೈಸೂರು ಸಂಸ್ಥಾನದ ಹೆಸರನ್ನೇ ತೊಡೆದುಬಿಟ್ಟು, ತಮ್ಮ ದೇಶಕ್ಕೆ ಈ ಸೀಮೆಯನ್ನು ಸೇರಿಸಿಕೊಳ್ಳುತ್ತಿದ್ದರು. ದೊರೆಗಳು ಹಾಗೆ ಮಾಡದೆ ಇಂಗ್ಲಿಷರೊಡನೆ ಮುಂದಕ್ಕೂ ಸ್ನೇಹವನ್ನು ಬೆಳೆಸಿದುದರಿಂದ, ಈ ಸಂಸ್ಥಾನವು ಪುನಃ ನಿಲ್ಲುವುದಕ್ಕೆ ಕಾರಣವಾಯಿತು.

## ೪೭ನೆಯ ಪ್ರಕರಣ.

### ಇಂಗ್ಲಿಷರ ಆಳಿಕೆ.

೧೫೨. ಇಂಗ್ಲಿಷರು ಈ ದೇಶದಲ್ಲಿ ೧೮೩೧ನೆಯ ಇಸವಿಯಿಂದ ೧೮೮೧ನೆಯ ಇಸವಿಯ ವರೆಗೆ ಐವತ್ತು ವರ್ಷಗಳ ಕಾಲ ರಾಜ್ಯವಾಳಿದರು. ಮೊದಲು, ಕಮಿಷನರೆಂಬ ಇಬ್ಬರು ಇಂಗ್ಲಿಷ್ ಅಧಿಕಾರಿಗಳು ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇವರಲ್ಲದೆ ರೆಸಿಡೆಂಟೂ ಮೊದಲಿನಂತೆ ಇದ್ದನು. ಕೆಲವು ದಿನಗಳ ನಂತರ ಈ ಏರ್ಪಾಡು ತಪ್ಪಿ, ಒಬ್ಬ "ಕಮಿಷನರ್" ಮಾತ್ರ ಇರತಕ್ಕದ್ದೆಂದು ಗೊತ್ತಾಯಿತು. ಇದಲ್ಲದೆ ಇಂಡಿಯಾ ಗವರ್ನಮೆಂಟಿನವರು ಈ ದೇಶವನ್ನು ಮದರಾಸು ಗವರ್ನಮೆಂಟಿನವರ ಮೇಲ್ವಿಚಾರಣೆಯಿಂದ ತಪ್ಪಿಸಿ ತಮ್ಮ ಮೇಲ್ವಿಚಾರಣೆಯಲ್ಲಿಯೇ ಇಟ್ಟುಕೊಂಡರು. ೧೮೬೩ನೆಯ ಇಸವಿಯಲ್ಲಿ ಕಮಿಷನರ್, ಎಂಬ ಅಧಿಕಾರದ ಹೆಸರು. "ಚೀಫ್ ಕಮಿಷನರ್" ಎಂದಾಯಿತು.

೧೫೩. ಸರ್‌ಮಾರ್ಕ್ ಕಬ್ಬನ್ ಸಾಹೇಬರು ಈ ದೇಶಕ್ಕೆ ಮೊದಲನೆಯ ಕಮಿಷನರಾಗಿದ್ದರು. ಅವರು ೧೮೬೧ನೆಯ ಇಸವಿಯ ವರೆಗೂ ಅಧಿಕಾರದಲ್ಲಿದ್ದು, ಪ್ರಾಯಶಃ ಹಿಂದಿನ ಪದ್ಧತಿಯಂತೆಯೇ ಆಡಳಿತವನ್ನು ನಡಸಿದರು. ಇವರು ಈ ದೇಶದಿಂದ ಹೊರಟುಹೋದ ನಂತರ ಇವರ ಜ್ಞಾಪಕ ಚಿಹ್ನೆಯಾಗಿರುವುದಕ್ಕಾಗಿ ಬಂಗಳೂರಲ್ಲಿ ಇವರ ಪ್ರತಿಮೆಯು ಸ್ಥಾಪಿಸಲ್ಪಟ್ಟಿತು. ಈ ಪ್ರತಿಮೆಯು ದಿವಾನ್‌ಕಚೇರಿ ಎದುರಿಗೆ ಈಗಲೂ ಇದೆ. ಕಬ್ಬನ್‌ಸಾಹೇಬರ ನಂತರ ಬಂದ ಬೌರಿಂಗ್ ಮತ್ತು ಇತರ ಚೀಫ್‌ಕಮಿಷನರುಗಳ ದಿವಸದಲ್ಲಿ ಅನೇಕ ಹೊಸ ಏರ್ಪಾಡುಗಳು ಮಾಡಲ್ಪಟ್ಟುವು.

೧೫೪. ದೇಶವು ಮೂರು ಡಿವಿಜನ್‌ಗಳಲ್ಲಿ ಅಡಕವಾಗಿರುವ ಎಂಟು ಡಿಸ್ಟ್ರಿಕ್ಟುಗಳಾಗಿ ವಿಭಾಗಿಸಲ್ಪಟ್ಟಿತು. ಸರಕಾರದ ಉದ್ಯೋಗಸ್ಥರ ಸಂಬಳಗಳೆಲ್ಲಾ ಹೆಚ್ಚಿಸಲ್ಪಟ್ಟುವು ಮತ್ತು ಯೂರೋಪಿಯನ್ ಅಧಿಕಾರಿಗಳ ಸಂಖ್ಯೆಯೂ ಹೆಚ್ಚಾಯಿತು.

೧೫೫. ಭೂಮಿಯ ಕಂದಾಯವನ್ನು ಗುತ್ತಿಗೆಗೆ ಕೊಡುವುದರಿಂದ ರೈತರಿಗೆ ತೊಂದರೆಯುಂಟಾಗುತ್ತಿದ್ದಿತು. ಆ ಪದ್ಧತಿಯನ್ನು ತಪ್ಪಿಸಿ ಪ್ರತಿಯೊಬ್ಬ ರೈತನಿಂದಲೂ ಸರಕಾರದವರೇ ಹಣವನ್ನು ಬರಮಾಡಿಕೊಳ್ಳಬಹುದೆಂದು ಏರ್ಪಾಡಾಯಿತು. ಇದಲ್ಲದೆ ಬೆಳೆ ಬಂದಮೇಲೆ ಕಂದಾಯವನ್ನು ಕೊಡಬಹುದೆಂಬುದಾಗಿಯೂ, ಒಂದೇ ಗಂಟಿನಲ್ಲಿ ಕೊಡುವುದಕ್ಕೆ ಪ್ರತಿಯಾಗಿ ಕಿಸ್ತುಗಳಲ್ಲಿ ಕೊಡಬಹುದೆಂಬದಾಗಿಯೂ ನಿಬಂಧನೆಯಾ

ಯಿತು. ಇದರಿಂದ ರೈತರಿಗೆ ಸಾಧಾರಣವಾಗಿ ಅವರವರ ಭೂಮಿಗಳ ಮೇಲೆ ಉಳುಮೆಯ ಹಕ್ಕು ಮಾತ್ರವಿದ್ದಿತು, ಪ್ರತಿವರ್ಷವೂ ತಮ್ಮ ತಮ್ಮ ಭೂಮಿಗಳನ್ನು ವ್ಯವಸಾಯಮಾಡಿ, ಆದ ಬೆಳೆಯಲ್ಲಿ ಗ್ರಾಮದ ಆಯಗಾರ ರಿಗೆ ಗೊತ್ತಾದ ಆಯವನ್ನು ಮೊದಲು ಕೊಟ್ಟು, ಉಳಿದ ದವಸದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಅರ್ಧವನ್ನು ಸರಕಾರದ ಕಂದಾಯಕ್ಕೆ ಕೊಟ್ಟು ನಿಂತುದನ್ನು ತಾವು ತೆಗೆದುಕೊಳ್ಳುತ್ತಿದ್ದರು. ಒಂದುವೇಳೆ ವ್ಯವಸಾಯ ಮಾಡದೆ ಭೂಮಿಯನ್ನು ಪಾಳುಬಿಟ್ಟರೆ ಸರಕಾರದವರು ಆ ಭೂಮಿಯನ್ನು ಮತ್ತೊಬ್ಬನಿಗೆ ಕೊಟ್ಟು ವ್ಯವಸಾಯಮಾಡಿಸುತ್ತಿದ್ದರು. ಹೀಗೆ 'ಬಟಾಯಿ' ಎಂದರೆ ದವಸದ ಪಾಲಿಗೆ ಸಾಗುವಳಿ ಮಾಡುತ್ತಿದ್ದುದರಿಂದ, ದವಸವು ಎಷ್ಟಾಯಿತೋ ತಿಳಿಯುವುದಕ್ಕೋಸ್ಕರ ಸರಕಾರದವರು ಆಗಾಗ ಬೆಳೆ ಯನ್ನು ಪರೀಕ್ಷೆ ಮಾಡಬೇಕಾಗಿದ್ದಿತು. ಇದರಿಂದ ರೈತರಿಗೆ ತೊಂದರೆ ಯುಂಟಾಗಿದ್ದಿತು. ಇದಲ್ಲದೆ ಟೀಪು ಸತ್ತನಂತರ, ಪ್ರಜಾಸಂಖ್ಯೆಯೂ ಹೆಚ್ಚಿ ಭೂಮಿಗೆ ಮೇಲಾಟವಾಯಿತು. ಮೇಲ್ಪಟ್ಟ ಕಚೇರಿಗಳಲ್ಲಿ ಭೂಮಿಯ ಹಿಡಿವಳಿಗೆ ಸಂಬಂಧಪಟ್ಟ ಲೆಕ್ಕಗಳು ಕ್ರಮವಾಗಿಲ್ಲದೆ ಇದ್ದುದರಿಂದ ತುಂಟ ಜನರು ಸರಕಾರಕ್ಕೂ ರೈತರಿಗೂ ಮೋಸಪಡಿಸುವುದಕ್ಕೆ ಅನುಕೂಲ ವಿದ್ದಿತು. ಈ ಬಾಧಕಗಳನ್ನು ನಿಲ್ಲಿಸುವುದಕ್ಕೋಸ್ಕರ ಪ್ರತಿ ರೈತರಿಗೂ ಅವನ ಭೂಮಿಯ ವಿವರವನ್ನೂ ಕಂದಾಯವನ್ನೂ ಕಾಣಿಸಿ ಪ್ರತಿ ವರ್ಷ ದಲ್ಲಿಯೂ ಒಂದು ಪಟ್ಟೆಯನ್ನು ಕೊಡತಕ್ಕದೆಂದು ಗೊತ್ತಾಯಿತು. ಇದ ಲ್ಲದೆ ೧೮೬೩ನೆಯ ಇಸವಿಯಲ್ಲಿ ಭೂಮಿಯನ್ನು ಕ್ರಮವಾಗಿ ಅಳತೆಮಾಡಿ ಕಂದಾಯದ ದರಗಳನ್ನು ಕಟ್ಟುಮಾಡಿಸುವುದಕ್ಕೋಸ್ಕರ "ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್" ಇಲಾಖೆಯು ಏರ್ಪಾಡಾಯಿತು. ಇದರಿಂದ ರೈ ತರು ಅವರವರ ಭೂಮಿಗೆ ಗೊತ್ತಾದ ಕಂದಾಯವನ್ನು ತಪ್ಪದೆ ಕೊಟ್ಟು ಕೊಂಡು ಬರುವವರೆಗೆ ಅಂತಹ ಭೂಮಿಗಳ ಮೇಲೆ ಕ್ರಯ ಭೋಗ್ಯ ಮುಂ ತಾದುವನ್ನು ಮಾಡುವ ಸ್ವಾತಂತ್ರ್ಯವುಂಟೆಂದೂ, ಕಂದಾಯದ ದರ ಗೊತ್ತಾ ದಾರಭ್ಯ ಮುಂದೆ ಮೂವತ್ತು ವರ್ಷಗಳ ಕಾಲ ಸರ್ಕಾರದವರು ಕಂದಾ ಯವನ್ನು ಹೆಚ್ಚಿಸುವುದಿಲ್ಲವೆಂದೂ, ರೈತರು ತಮ್ಮ ಸ್ವಂತ ಪ್ರಯತ್ನ ದಿಂದ ಭೂಮಿಯ ಗುಣವನ್ನು ಹೆಚ್ಚಿಸಿ ಬೆಳೆಯನ್ನು ಹೆಚ್ಚುಮಾಡಿಕೊಂಡಿ ದ್ದರೆ ಅಂತಹ ಸಂದರ್ಭದಲ್ಲಿ ಕಂದಾಯವನ್ನು ಹೆಚ್ಚುಮಾಡುವುದಿಲ್ಲವೆಂದೂ ನಿಷ್ಕರ್ಷೆಯಾಯಿತು.

೧೫೬. ದೇಶದಲ್ಲಿ ಅನೇಕ ವಿಧವಾದ ಸಾಯರ್ ತೀರ್ವೆಗಳೂ ಸುಂಕಗಳೂ ಇದ್ದುದರಿಂದ ವ್ಯಾಪಾರಕ್ಕೆ ಅಡಚಣೆಯೂ, ಜನಗಳಿಗೆ ಹಿಂ ಸೆಯೂ, ಬಹಳವಾಗಿ ಆಗುತ್ತಿದ್ದುವು. ಧಾನ್ಯ, ಕಾಲುನಡೆ, ಕುಲುಮೆ, ಕಾಯಿಪಲ್ಯ, ಜಾತಿ ಕಸಬು, ಇವೇ ಮುಂತಾದುವುಗಳಲ್ಲ ತೆರಿಗೆಯನ್ನು ಕೊಡಬೇಕಾಗಿತ್ತು. ಮದುವೆ, ಮುಂಜಿ, ಗೃಹಪ್ರವೇಶ, ಜನನ, ಮರಣ,

ನಾಮಕರಣ, ಚೌಲ, ಇವುಗಳಿಗೂ ತೆರಿಗೆಗಳಿದ್ದುವು. ಇಂಗ್ಲಿಷ್ ಗವರ್ನ್ಮೆಂಟ್ ಸ್ಥಾಪನೆಯಾದ ಮೇಲೆ ಈ ತರಿಗೆಗಳಲ್ಲಿ ಅನೇಕ ತೆಗೆದುಹಾಕಲ್ಪಟ್ಟುವು. ಇದರಿಂದ ವ್ಯಾಪಾರವು ಹೆಚ್ಚಿ ಜನರಿಗೆ ಅನುಕೂಲವುಂಟಾಯಿತು.

೧೫೭. ನ್ಯಾಯವಿಚಾರಣೆಯ ವಿಷಯದಲ್ಲಿ, ಇಂಗ್ಲಿಷರ ಆಳಿಕೆಯಲ್ಲಿ ಅನೇಕ ಹೊಸ ಏರ್ಪಾಡುಗಳು ನಡೆದುವು' ೧೮೬೨ನೆಯ ಇಸವಿಯಲ್ಲಿ ಪಂಚಾಯಿತರನ್ನು ವಿಚಾರಣೆಗೆ ಕರೆಯುವ ಪದ್ಧತಿ ನಿಂತುಹೋಯಿತು. ನ್ಯಾಯವಿಚಾರಣೆಯ ಕಾನೂನಿನಲ್ಲಿ ಹೇಳಿರುವಂತೆ ನಡೆಯಬೇಕೇಹೊರತು ಬೇರೆ ವಿಧವಾಗಿ ನಡೆಯಕೂಡದೆಂದು ಗೊತ್ತಾಯಿತು. ದೊರೆತನ ಮಾಡತಕ್ಕವರು ನ್ಯಾಯಾಧಿಪತಿಗಳನ್ನು ತಾವು ಹೇಳಿದಂತೆ ತೀರ್ಮಾನಿಸಬೇಕೆಂದು ಹೇಳುವ ಸ್ವಾತಂತ್ರ್ಯ ತಪ್ಪಿಹೋಯಿತು. ಇದಲ್ಲದೆ ತಪ್ಪಿತ ಮಾಡಿರಬಹುದೆಂದು ಸಂಶಯಕ್ಕೊಳಗಾದ ಜನರನ್ನು ವಿಚಾರಣೆಯಿಲ್ಲದೆ ಬಹುಕಾಲ ನಿರ್ಬಂಧದಲ್ಲಿಡುವುದಕ್ಕಾಗಲಿ, ಸರಕಾರದವರಿಗೆ ಅಧಿಕಾರವಿಲ್ಲವೆಂದು ನಿಷ್ಕರ್ಷೆಯಾಯಿತು. ಕಲ್ಲು ಹೊರಿಸಿ ನಿಲ್ಲಿಸುವುದು, ಕಾದ ನೆಲದಮೇಲೆ ಸಿಲ್ಲಿಸುವುದು, ಕೋಳಕ್ಕೆ ಹಾಕುವುದು, ಇಕ್ಕುಳದಲ್ಲಿ ಕೀಳಿಸುವುದು—ಈ ವಿಧವಾದ ಶಿಕ್ಷೆಗಳು ನಿಂತುಹೋದುವು.

೧೫೮. ಪೂರ್ವದಲ್ಲಿ ಒಳ್ಳೆಯ ರಸ್ತೆಗಳಿಲ್ಲದೆ ವ್ಯಾಪಾರಕ್ಕೆ ಅಡಚಣೆಯಾಗಿತ್ತು. ಎತ್ತುಗಳ ಮೇಲೆ ವ್ಯಾಪಾರದ ದಿನಸಿಗಳನ್ನು ಹೇರಿಕೊಂಡು ಹೋಗುತ್ತಿದ್ದರು. ಇಂಗ್ಲಿಷರು ಸೀಮೆಯಲ್ಲೆಲ್ಲಾ ರಸ್ತೆಗಳನ್ನು ಮಾಡಿಸಿ ಸೇತುವೆಗಳನ್ನು ಕಟ್ಟಿಸಿ, ಸಾಲು ಮರಗಳನ್ನು ನೆಡಿಸಿದರು. ೧೮೬೪ನೆಯ ಇಸವಿಯಲ್ಲಿ ಮದರಾಸಿನಿಂದ ಬೆಂಗಳೂರಿಗೆ ರೈಲುಮಾರ್ಗವು ಮಾಡಲ್ಪಟ್ಟಿತು. ಪ್ರಜೆಗಳ ವಿದ್ಯಾಭ್ಯಾಸಕ್ಕೋಸ್ಕರ ಅಲ್ಲಲ್ಲಿ ವಿದ್ಯಾಶಾಲೆಗಳೂ ಸ್ಥಾಪಿಸಲ್ಪಟ್ಟವು.

೧೫೯. ಹೀಗೆ ಇಂಗ್ಲಿಷರು ಅನೇಕ ವಿಧದಲ್ಲಿ ಈ ದೇಶದ ಜನರಿಗೆ ಸೌಖ್ಯವನ್ನುಂಟುಮಾಡಿದರು. ಅವರ ಆಳಿಕೆಯಲ್ಲಿ ಜನರಿಗೆ ಸ್ವಾತಂತ್ರ್ಯವೂ ಹೆಚ್ಚಿತು. ಯಾವ ವಿಷಯವನ್ನಾದರೂ ಜನಗಳು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಸರ್ಕಾರದವರಿಗೆ ತಿಳಿಸುವಂತಾಯಿತು.

---

## ೫ನೆಯ ಪ್ರಕರಣ.

### ಇಂಗ್ಲಿಷರು ರಾಜ್ಯವನ್ನು ಹಿಂದಕ್ಕೆ ಕೊಟ್ಟುದು.

೧೬೦. ಇಂಗ್ಲಿಷರು ೧೮೩೧ನೆಯ ಇಸವಿಯಲ್ಲಿ ಈ ರಾಜ್ಯವನ್ನು ವಹಿಸಿಕೊಂಡಾಗ, ಮುಂದಕ್ಕೆ ಸಂಪೂರ್ಣವಾಗಿ ಕೃಷ್ಣರಾಜ ಒಡೆಯರ ಕೈತಪ್ಪಿಸಬೇಕೆಂದು ಅವರಿಗೆ ಅಭಿಪ್ರಾಯವಿರಲಿಲ್ಲ. ೧೮೩೪ನೆಯ ಇಸ

ವಿಯಲ್ಲಿ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಸಾಹೇಬರು ಈ ದೇಶಕ್ಕೆ ಬಂದಾಗ ದೊರೆಗಳಿಗೆ ರಾಜ್ಯವನ್ನು ತಪ್ಪಿಸಿದ್ದು ನ್ಯಾಯವಲ್ಲವೆಂದು ತಿಳಿದು ಮುಕ್ಕಾಲುಪಾಲು ಸೀಮೆಯನ್ನು ಅವರಿಗೆ ಹಿಂದಕ್ಕೆ ಕೊಡಬೇಕೆಂದೂ, ಮಿಕ್ಕ ಕಾಲುಪಾಲು ಸೀಮೆಯನ್ನು ಪಗದಿಯ ಹಣಕ್ಕೆ ಆಧಾರವಾಗಿ ಇಂಗ್ಲಿಷರೆ ಅನುಭವಿಸಬೇಕು. ಇಂಗ್ಲೆಂಡಿನಲ್ಲಿದ್ದು ಮೇಲ್ವಿಚಾರಣೆ ಮಾಡುತ್ತಿದ್ದ ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಬರೆದು ಕಳುಹಿಸಿದರು. ಆದರೆ ಅವರು ದೇಶವನ್ನು ತಹಬಂದಿಗೆ ತಂದ ನಂತರ ಸಂಪೂರ್ಣವಾಗಿ ಕೊಟ್ಟು ಬಿಡಬಹುದೆಂದು ಉತ್ತರವನ್ನು ಕಳುಹಿಸಿದರು.

೧೬೧. ಅನಂತರ ದೊರೆಗಳು ರಾಜ್ಯವನ್ನು ಕೊಡಬೇಕೆಂದು ಆಗಿಂದಾಗ ಕೇಳುತ್ತಲೇ ಇದ್ದರೂ, ಕಾಲಹರಣವಾಗುತ್ತಲೇ ಬಂದಿತು. ಕೊನೆಗೆ ಗವರ್ನರ್ ಜನರಲ್ ಲಾರ್ಡ್ ಡಾಲ್‌ಹೂಸಿ ಸಾಹೇಬರು ಟೀಪು ಸತ್ತಾಗ ರಾಜ್ಯವನ್ನು ಕೃಷ್ಣರಾಜ ಒಡೆಯರಿಗೆ ಕೊಟ್ಟುದು ತಪ್ಪೆಂದೂ, ಇವರು ಗತಿಸಿದ ನಂತರ ಸೀಮೆಯನ್ನು ಇಂಗ್ಲಿಷರೇ ಸೇರಿಸಿಕೊಳ್ಳಬೇಕಾಗಿತ್ತೆಂದೂ ಅಭಿಪ್ರಾಯ ಪಟ್ಟರು. ಆದರೆ ಕೃಷ್ಣರಾಜ ಒಡೆಯರು ಧೈರ್ಯಗೆಡಲಿಲ್ಲ, ಇಂಗ್ಲಿಷರಮೇಲೆ ದ್ವೇಷವನ್ನೂ ಮಾಡಲಿಲ್ಲ. ೧೮೫೭ನೆಯ ಇಸವಿಯಲ್ಲಿ ನಡೆದ ನಾನಾಸಾಹೇಬನ ದಂಗೆಯಲ್ಲಿಯೂ ಈ ದೇಶದ ಜನರು ಇಂಗ್ಲಿಷರಮೇಲೆ ಬೀಳದಂತೆ ದೊರೆಗಳು ಅವರನ್ನು ತಡೆದರು. ಇದಲ್ಲದೆ ತಮಗೆ ರಾಜ್ಯವು ಹಿಂದಕ್ಕೆ ಬರುವ ವಿಷಯದಲ್ಲಿ ತಕ್ಕ ಜನರ ಮೂಲಕ ಇಂಗ್ಲೆಂಡಿನಲ್ಲಿ ಬಹಳವಾಗಿ ವಾದಿಸುತ್ತಲೇ ಬಂದರು. ಕೊನೆಗೆ ಕೃಷ್ಣರಾಜ ಒಡೆಯರು ೧೮೬೫ನೆಯ ಇಸವಿಯಲ್ಲಿ ದತ್ತು ಮಾಡಿಕೊಂಡಿದ್ದ ಚಾಮರಾಜ ಒಡೆಯರಿಗೆ ರಾಜ್ಯವನ್ನು ಕೊಡುವುದಾಗಿ ಇಂಗ್ಲಿಷ್ ಗವರ್ನ್‌ಮೆಂಟಿನವರು ೧೮೬೭ರಲ್ಲಿ ತೀರ್ಮಾನಮಾಡಿದರು. ಕೃಷ್ಣರಾಜ ಒಡೆಯರಿಗೆ ತಾವು ಬದುಕಿರುವಾಗಲೇ ಪುನಃ ರಾಜ್ಯವಾಳಬೇಕೆಂದು ಬಹಳ ಆಸೆಯಿತ್ತು. ಆದರೆ ಇದು ಕೈಗೂಡುವುದಕ್ಕೆ ಮುಂಚೆ ೧೮೬೮ನೆಯ ಇಸವಿಯಲ್ಲಿ ಇವರು ಸ್ವರ್ಗಸ್ಥರಾದರು.

೧೬೨. ಕೃಷ್ಣರಾಜ ಒಡೆಯರು ಸೂಕ್ಷ್ಮಬುದ್ಧಿಯುಳ್ಳವರಾದುದರಿಂದ ಈ ಸಂಸ್ಥಾನವನ್ನು ತಕ್ಕ ಉಪಾಯಗಳಿಂದ ಹಿಂದಿರುಗಿಸಿಕೊಂಡರು. ಇಂಗ್ಲಿಷರು ಬಲಿಷ್ಠರಾದುದರಿಂದ ಅವರೊಡನೆ ಸ್ನೇಹವಾಗಿದ್ದು, ಕೆಟ್ಟ ಆಲೋಚನೆಗೆ ಕಿವಿಗೊಡದೆ, ಇಂಗ್ಲಿಷರು ತಮಗೆ ಆಗಿಂದಾಗ ವಿರೋಧವಾಗಿ ಉತ್ತರವನ್ನು ಕಳುಹಿಸಿದರೂ ಧೈರ್ಯವನ್ನು ಬಿಡದೆ ೩೬ ವರ್ಷಗಳ ಕಾಲ ಒಂದೇ ರೀತಿಯಲ್ಲಿ ಸಾಹಸಮಾಡಿ, ಮೊದಲಿದ್ದಂತೆ ಮೈಸೂರು ಸಂಸ್ಥಾನವನ್ನು ನಿಲ್ಲಿಸಿದರು. ಈ ವಿಷಯದಲ್ಲಿ ಕೃಷ್ಣರಾಜಒಡೆಯರು ಮಾಡಿದ ಸಾಹಸವು ಕೊಂಡಾಡತಕ್ಕುದಾಗಿದೆ.

೧೬೩. ಕೃಷ್ಣರಾಜ ಒಡೆಯರು ತೀರಿಹೋದ ನಂತರ ಇಂಗ್ಲಿಷ್ ಗವರ್ನ್‍ಮೆಂಟಿನವರು ಚಾಮರಾಜ ಒಡೆಯರಿಗೆ ಪಟ್ಟವನ್ನು ಕಟ್ಟಿ, ಅವರಿಗೆ ಸರಿಯಾದ ವಯಸ್ಸು ಬಂದಮೇಲೆ ದವಲತ್ತನ್ನು ಕೊಡುವುದಾಗಿ ತಿಳಿಯಪಡಿಸಿದರು. ಅನಂತರ ಮಹಾರಾಜರಿಗ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿ, ರಾಜ್ಯದಲ್ಲಿ ಅವಶ್ಯಕವಾದ ಅನೇಕ ಬದಲಾವಣೆಗಳನ್ನು ಮಾಡಿದರು. ೧೮೭೭–೭೮ನೆಯ ಇಸವಿಯಲ್ಲಿ ಬಂದ ದೊಡ್ಡದಾದ ಕ್ಷಾಮದಿಂದ ಸರಕಾರಕ್ಕೆ ೮೦ ಲಕ್ಷ ರೂಪಾಯಿ ಸಾಲವಾಯಿತು. ಇತರ ವಿಷಯಗಳಲ್ಲಿ ಇವರು ಮಾಡಿದ ಏರ್ಪಾಡುಗಳೆಲ್ಲಾ ಸರಿಯಾಗಿ ನಡೆದುವು.

೧೬೪. ೧೮೮೧ನೆಯ ಇಸವಿಯಲ್ಲಿ ಚಾಮರಾಜಒಡೆಯರಿಗೆ ೧೮ ವರುಷ ತುಂಬಲು ಅದೇ ಇಸವಿ ಮಾರ್ಚಿ ತಿಂಗಳು ೨೫ರಲ್ಲ ರಾಜ್ಯವು ಅವರಿಗೆ ಒಪ್ಪಿಸಲ್ಪಟ್ಟಿತು. ಈ ಕಾಲದಲ್ಲಿ ಲಾರ್ಡ್ ರಿಪನ್ ಸಾಹೇಬರು ಗವರ್ನರ್ ಜನರಲ್ಲಾಗಿದ್ದರು. ಚೀಫ್ ಕಮಿಷನರಾಗಿದ್ದ ಗಾರ್ಡನ್ ಸಾಹೇಬರಿಗೆ ರೆಸಿಡೆಂಟ್ ಕೆಲಸವಾಯಿತು. ಮಹಾರಾಜರಿಗೆ ದವಲತ್ತು ಪ್ರಾಪ್ತವಾದುದಕ್ಕೋಸ್ಕರ ಇಲ್ಲಿಯ ಪ್ರಜೆಗಳೆಲ್ಲರೂ ಬಹಳ ಸಂತೋಷಪಟ್ಟರು.

೧೬೫. ದವಲತ್ತು ಆಗುವದಕ್ಕೆ ಮುಂಚೆ ನಡೆದಿದ್ದ ಹಿಂದಣ ತಹನಾಮೆಗಳಿಗೆ ಪ್ರತಿಯಾಗಿ ಹೊಸದಾಗಿ ತಹನಾಮೆಯೊಂದು ಹುಟ್ಟಿತು. ಪೂರ್ಣಯ್ಯನವರ ದಿವಸದಲ್ಲಿ ಯುದ್ಧಕಾಲದಲ್ಲಿ ಇಂಗ್ಲಿಷರ ಸಹಾಯಕ್ಕೆ ೪,೦೦೦ ಕುದುರೆಯನ್ನು ಕಳುಹಿಸಬೇಕೆಂದು ಗೊತ್ತಾಗಿತ್ತು. ಈಗ ಇದು ತಪ್ಪಿ, ಇದಕ್ಕೆ ಪ್ರತಿಯಾಗಿ ಮಹಾರಾಜರು ಪ್ರತಿವರುಷವೂ ೧೦॥ ಲಕ್ಷ ರೂಪಾಯಿಗಳನ್ನೂ ಪಗದಿಗಾಗಿ ೨೪॥ ಲಕ್ಷ ರೂಪಾಯಿಗಳನ್ನೂ, ಅಂತು ಒಟ್ಟು ೩೫ ಲಕ್ಷ ರೂಪಾಯಿಗಳನ್ನೂ ಕೊಡತಕ್ಕದೆಂದು ಕ್ಲಿಪ್ತವಾಯಿತು. ಟಂಕಸಾಲೆಯನ್ನಿಡಿಸಿ ನಾಣ್ಯವನ್ನು ಹಾಕಿಸುವ ಸ್ವಾತಂತ್ರ್ಯವು ಮಹಾರಾಜರಿಗೆ ತಪ್ಪಿ ಹೋಯಿತು. ಇಂಗ್ಲಿಷ್ ಗವರ್ನ್‍ಮೆಂಟಿನವರಿಂದ ಆಗಿಂದಾಗ ಹಾಕಿಸಲ್ಪಡುವ ನಾಣ್ಯಗಳೇ ಇಲ್ಲಿಯೂ ಚಲಾವಣೆಯಲ್ಲಿರತಕ್ಕುದೆಂದು ಗೊತ್ತಾಯಿತು. ಇಂಗ್ಲಿಷರ ಆಳಿಕೆಯಲ್ಲಿ ಹುಟ್ಟಿದ ಕಾನೂನುಗಳನ್ನು ತೆಗೆದು ಹಾಕಬೇಕಾದರೂ, ವ್ಯತ್ಯಾಸ ಮಾಡಬೇಕಾದರೂ, ಮೈಸೂರ ಸರಕಾರದವರು ಗವರ್ನರ್ ಜನರಲ್ ಸಾಹೇಬರ ಅನುಮತಿಯನ್ನು ಮೊದಲೇ ಪಡೆದು ಹಾಗೆ ಮಾಡಬೇಕೆಂದು ನಿಬಂಧನೆಯಾಯಿತು. ಉಳಿದ ವಿಷಯಗಳು ೧೭೯೯ನೆಯ ಇಸವಿಯಲ್ಲಿ ಹುಟ್ಟಿದ ತಹನಾಮೆಯಲ್ಲಿದ್ದಂತೆಯೇ ಈ ತಹನಾಮೆಯಲ್ಲಿಯೂ ಕಾಣಿಸಲ್ಪಟ್ಟುವು.

---

## ೬ನೆಯ ಪ್ರಕರಣ.

### ಚಾಮರಾಜ ಒಡೆಯರು.

೧೬೬. ಚಾಮರಾಜ ಒಡೆಯರಿಗೆ ಪಟ್ಟವಾದ ನಂತರ ರಂಗಾಚಾರ್ಯರಿಗೆ ದಿವಾನಗಿರಿಯಾಯಿತು. ೧೮೮೩ನೆಯ ಇಸವಿಯಲ್ಲಿ ಇವರು ತೀರಿಹೋದುದರಿಂದ, ಸರ್ ಕೆ. ಶೇಷಾದ್ರಯ್ಯರವರಿಗೆ ದಿವಾನ್ ಕೆಲಸವಾಯಿತು ಸರಕಾರದವರು ಆಗಿಂದಾಗ ಮಾಡುವ ಏರ್ಪಾಡುಗಳು ಪ್ರಜೆಗಳಿಗೆ ಅನುಕೂಲವೇ ಅಲ್ಲವೇ ಎಂದು ತಿಳಿಸುವುದಕ್ಕೋಸ್ಕರ ಆಲೋಚನಾಸಭೆಯೊಂದು (Council) ಏರ್ಪಡಿಸಲ್ಪಟ್ಟಿತು ಇದಲ್ಲದೆ ಸೀಮೆಯಲ್ಲಿರುವ ಮುಖ್ಯ ಮುಖ್ಯ ಜಮೀನ್ದಾರರು, ವರ್ತಕರು, ಮುಂತಾದವರ ಅಪೇಕ್ಷೆಗಳನ್ನು ಮತ್ತು ಅಭಿಪ್ರಾಯಗಳನ್ನೂ ಸುಲಭವಾಗಿ ತಿಳಿಯುವುದಕ್ಕೋಸ್ಕರ ಪ್ರಜಾ ಪ್ರತಿನಿಧಿ ಸಭೆಯೊಂದು ಏರ್ಪಟ್ಟಿತು. ಈ ಸಭೆಯು ಮೊಟ್ಟಮೊದಲು ೧೮೮೧ ನೆಯ ಇಸವಿ ನವರಾತ್ರಿಯಲ್ಲಿ ಮೈಸೂರಲ್ಲಿ ಸೇರಿತು. ಈ ಸಭೆಯಲ್ಲಿ ಹಿಂದಣ ವರ್ಷದ ಆಡಳಿತಗಳ ಮುಖ್ಯ ವಿಷಯಗಳನ್ನೂ, ಮುಂದೆ ನಡೆಸುವ ಮುಖ್ಯವಾದ ಏರ್ಪಾಡುಗಳನ್ನೂ ದಿವಾನರು ಪ್ರತಿನಿಧಿಗಳಿಗೆ ತಿಳಿಸಿ, ಅವರು ಹೇಳುವ ವಿಷಯಗಳನ್ನೂ ಕೇಳಿ, ಅವುಗಳಿಗೆ ತಕ್ಕ ಉತ್ತರಗಳನ್ನು ಹೇಳುವ ಪದ್ಧತಿಯುಂಟಾಗಿದೆ.

೧೬೭. ಕ್ಷಾಮ ನಿವಾರಣೆಗಾಗಿ ಅನೇಕ ಹೊಸ ಏರ್ಪಾಡುಗಳು ಮಾಡಲ್ಪಟ್ಟವು. ೧೮೭೭–೭೮ನೆಯ ಇಸವಿಯ ಕ್ಷಾಮದಲ್ಲಿ ಅನ್ಯದೇಶದಿಂದ ಧಾನ್ಯವು ಈ ದೇಶಕ್ಕೆ ಜಾಗ್ರತೆಯಾಗಿ ಬರುವದಕ್ಕೆ ತಕ್ಕ ಸಾಧನಗಳು ಕಡಿಮೆಯಾಗಿದ್ದುವು. ಚಾಮರಾಜ ಒಡೆಯರಿಗೆ ದವಲತ್ತಾದ ನಂತರ ರೈಲು ಮಾರ್ಗವು ಹೆಚ್ಚಾಗಿ, ಈ ಕುಂದುಕವು ತಗ್ಗಿಸಲ್ಪಟ್ಟಿತು. ಇದಲ್ಲದೆ ಕಾಲುವೆಗಳನ್ನೂ ಬಾವಿಗಳನ್ನೂ ವಿಶೇಷವಾಗಿ ತೆಗೆಸಿದುದರಿಂದ, ಮಳೆ ಬಾರದೆ ತಡೆದರೂ, ವಿಶೇಷ ಕಷ್ಟವಾಗದೆ, ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ಅನುಕೂಲವುಂಟಾಯಿತು.

೧೬೮. ರೈತರು ಹೆಚ್ಚಾಗಿ ಬಡ್ಡಿ ತೆತ್ತು ಸಾಲಮಾಡಿಕೊಂಡು ಜಮೀನನ್ನು ಕಳೆದುಕೊಳ್ಳುತ್ತಿರುವುದನ್ನು ತಪ್ಪಿಸಿ, ಅವರಿಗೆ ಸಹಾಯಮಾಡುವುದಕ್ಕಾಗಿ ಅಲ್ಲಲ್ಲಿ ವ್ಯವಸಾಯದ ಬ್ಯಾಂಕುಗಳು ಏರ್ಪಾಡು ಮಾಡಲ್ಪಟ್ಟವು ಈ ಬ್ಯಾಂಕುಗಳಲ್ಲಿ ಸುಲಭವಾದ ಬಡ್ಡಿಗೆ ರೈತರು ಅವರವರ ಜಮೀನಿನ ಆಧಾರದ ಮೇಲೆ ಬೇಕಾದ ಹಣವನ್ನು ಸಾಲ ತೆಗೆದುಕೊಂಡು, ಕಂತುಮಾಡಿಕೊಂಡು, ಅಸಲು ಹಣವನ್ನು ತೀರಿಸಿ, ಜಮೀನನ್ನು ಉಳಿಸಿಕೊಳ್ಳುವುದಕ್ಕೆ

ಅನುಕೂಲವು ಉಂಟಾಯಿತು. ಈ ದೇಶದಲ್ಲಿ ಬೆಳೆಯುವ ಪದಾರ್ಥಗಳು ಎಲ್ಲರಿಗೂ ತಿಳಿದು, ವ್ಯವಸಾಯವೂ ವ್ಯಾಪಾರವೂ ಹೆಚ್ಚಲೆಂದು ೧೮೮೮ನೆಯ ಇಸವಿಯಲ್ಲಿ ಮೈಸೂರಲ್ಲಿ ನಾನಾವಸ್ತುಗಳ ಪ್ರದರ್ಶನ(Exhibition ವೊಂದು ಜರುಗಿತು.

೧೬೯. ಈ ದೊರೆಗಳ ಕಾಲದಲ್ಲಿ ಹಿಂದಣ ಸಾಲವೆಲ್ಲ ತೀರಿಹೋಯಿತು. ಕೋಲಾರದ ಬಳಿ ಬಂಗಾರದ ಗಣಿಗಳು ಸಿಕ್ಕಿ, ಅಲ್ಲಿ ಬಹಳವಾಗಿ ಹುಟ್ಟುವಳಿಯಾಗುವುದಕ್ಕೆ ಕಾರಣವಾಯಿತು. ಹೆಂಗಸರು ವಿದ್ಯೆಯನ್ನು ಕಲಿಯುವುದಕ್ಕೂ, ಸಂಸ್ಕೃತ ವಿದ್ಯಾಭ್ಯಾಸಕ್ಕೂ ಹೆಚ್ಚಾಗಿ ಪ್ರೋತ್ಸಾಹವುಂಟಾಯಿತು. ಹಿಂದಣಕಾಲದ ಚರಿತ್ರೆಯು ತಿಳಿಯುವುದಕ್ಕೋಸ್ಕರ ದೇಶದಲ್ಲಿ ಅಲ್ಲಲ್ಲಿದ್ದ ಪೂರ್ವದ ಶಾಸನಗಳನ್ನೆಲ್ಲ ಸಂಗ್ರಹ ಮಾಡುವಂತೆ ಏರ್ಪಾಡಾಯಿತು. ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ಕುಡಿಯುವುದಕ್ಕೆ ಶುದ್ಧವಾದ ನೀರು ಸಿಕ್ಕುವಂತೆ ಕೊಳವೆಗಳಲ್ಲಿ ನೀರು ತರಲ್ಪಟ್ಟು ಅಲ್ಲಲ್ಲಿ ಕಟ್ಟೆಗಳು ಕಟ್ಟಲ್ಪಟ್ಟುವು. ಇಂಗ್ಲಿಷ್ ಗವರ್ನಮೆಂಟಿನವರು ಅಪೇಕ್ಷಿಸಿದಾಗ ಸಹಾಯಮಾಡುವ ಉದ್ದಿಶ್ಯ ಕ್ರಮವಾಗಿ ತರಬಿಯತ್ತಾದ ಕುದುರೆಯ ಸೈನ್ಯವೊಂದು ಏರ್ಪಾಡಾಯಿತು ಅಂಚೆಯಿಂದ ಈ ದೇಶಕ್ಕೆ ನಷ್ಟವುಂಟಾಗುತ್ತಿದ್ದುದರಿಂದ ಅದು ೧೮೮೯ನೆಯ ಇಸವಿಯಲ್ಲಿ ಬ್ರಿಟಿಷ್ ಪೋಸ್ಟಲ್ ಇಲಾಖೆಗ ಸೇರಿಸಲ್ಪಟ್ಟಿತು. ಚೆನ್ನಾಗಿ ತಿಳಿವಳಿಕೆಯುಳ್ಳವರಾಗಿಯೂ, ನೀತಿಮಾರ್ಗದಲ್ಲಿರುವವರಾಗಿಯೂ ಇರುವ ಜನರನ್ನೇ ಮುಖ್ಯಮುಖ್ಯವಾದ ಸರಕಾರದ ಉದ್ಯೋಗಗಳಿಗೆ ನೇಮಿಸುವ ವಾಡಿಕೆಯುಂಟಾಯಿತು. ಇದಲ್ಲದೆ ಇವರ ಸಂಬಳದಲ್ಲಿ ಕೆಲವು ಭಾಗವನ್ನು ಹಿಡಿದು ಒಟ್ಟುಗೂಡಿಸಿ ಅವರು ಕೆಲಸಬಿಟ್ಟು ಹೋಗುವಾಗ ಅವರಿಗಾಗಲಿ, ಕೆಲಸದಲ್ಲಿರುವಾಗಲೆ ಕಾಲವಾದರ ಅವರ ಮನೆಯವರಿಗಾಗಲಿ, ನಿಷ್ಕರ್ಷಿಸಲ್ಪಟ್ಟ ಮೊತ್ತವನ್ನು ಕೊಡತಕ್ಕುದೆಂದು ನಿಬಂಧನೆಯಾಯಿತು.

೧೭೦. ಚಾಮರಾಜ ಒಡೆಯರು ಚಿಕ್ಕವರಾಗಿದ್ದಾಗ ಗವರ್ನರ್ ಜನರಲ್ ಲಿಟ್ಟನ್ ಸಾಹೇಬರು ಈ ದೇಶಕ್ಕೆ ಬಂದಿದ್ದರು, ಮಹಾರಾಜರಿಗೆ ಪಟ್ಟವಾದ ಮೇಲೆ, ಗವರ್ನರ್ ಜನರಲ್ ಡಫರಿನ್, ಮತ್ತು ಲ್ಯಾನ್ಸ್ ಡೌನ್ ಸಾಹೇಬರುಗಳೂ, ಇಂಡಿಯಾ ಚಕ್ರವರ್ತಿನಿಯವರ ಮೊಮ್ಮಕ್ಕಳಾದ ಆಲ್ಬರ್ಟ್ ವಿಕ್ಟರ್ ಸಾಹೇಬರೂ ಈ ದೇಶಕ್ಕೆ ಬಂದಿದ್ದರು

೧೭೧. ಗುಣಶಾಲಿಗಳಾದ ಚಾಮರಾಜಒಡೆಯರು ೧೮೯೪ನೆಯ ಇಸವಿಯಲ್ಲ ಕಲ್ಕತ್ತೆಗೆ ಹೋಗಿದ್ದಾಗ, ಅಲ್ಲ ಮರಣವನ್ನು ಹೊಂದಿದರು. ಸಾಯುವಾಗ ಇವರಿಗೆ ೩೨ ವರ್ಷ ವಯಸ್ಸಾಗಿತ್ತು. ಹೀಗೆ ಇನ್ನು ಚಿಕ್ಕವರಾಗಿರುವಾಗಲೇ ಮಹಾರಾಜರು ತೀರಿಹೋದುದಕ್ಕಾಗಿ ಈ ದೇಶದ ಪ್ರಜೆಗಳೆಲ್ಲರೂ ಬಹಳವಾಗಿ ವ್ಯಸನಪಟ್ಟರು. ಇಂಗ್ಲಿಷ್ ಗವರ್ನಮೆಂಟಿನಿಂದ ಮಾಡಲ್ಪಟ್ಟ ನಿಬಂಧನೆಗಳನ್ನು ಮೀರದ ನಡೆಯುವುದರಲ್ಲಿ ಚಾಮರಾಜ

ಒಡೆಯರು ಮೇಲುಪಙ್ಕ್ತಿಯನ್ನು ಹಾಕಿ ಕೊಟ್ಟಿದ್ದಾರೆ. ಇವರು ಪ್ರಜೆಗಳ ಕ್ಷೇಮಕ್ಕಾಗಿ ಮಾಡಿದಂತಹ ಉಪಕಾರಗಳು ಬಹಳವಾಗಿವೆ.

೧೭೨. ಚಾಮರಾಜ ಒಡೆಯರ ಹಿರಿಯ ಮಕ್ಕಳಾದ ಶ್ರೀ ಕೃಷ್ಣರಾಜ ಒಡೆಯರವರಿಗೆ ೧೮೯೫ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ಪಟ್ಟಾಭಿಷೇಕವಾಯಿತು. ಈ ಮಹಾರಾಜರವರು ದೊಡ್ಡವರಾಗುವವರೆಗೆ ಅವರ ತಾಯಿಯವರಾದ ಮಹಾಮಾತೃ ಶ್ರೀ ವಾಣೀವಿಲಾಸ ಸನ್ನಿಧಿಯಮ್ಮನವರು, ಧಿವಾನರ ಮತ್ತು ಬೇರೆ ಮೂರುಜನ ಮಂತ್ರಿಗಳ ಸಹಾಯದಿಂದ, ರಾಜ್ಯದ ಆಡಳಿತವನ್ನು ನಡೆಸತಕ್ಕುದೆಂದು ಇಂಗ್ಲಿಷ್ ಗವರ್ನಮೆಂಟಿನವರು ಗೊತ್ತುಮಾಡಿದ ಪ್ರಕಾರ ರಾಜ್ಯಭಾರದ ಆಡಳಿತವು ನಡೆಯುತ್ತಿತ್ತು. ಇವರ ಕಾಲದಲ್ಲಿಯೂ ಮೊದಲಿನಂತೆ ಪ್ರಜೆಗಳ ಕ್ಷೇಮಚಿಂತನೆಯು ಸರಿಯಾಗಿ ನಡೆಯುತ್ತಲಿತ್ತು. ೧೮೯೫ನೆಯ ಇಸವಿಯಲ್ಲಿ ಗವರ್ನರ್ ಜನರಲ್ ಎಲ್ಗಿನ್‌ಸಾಹೇಬರು ಈ ದೇಶಕ್ಕೆ ಬಂದು ನೋಡಿಕೊಂಡು ಹೋದರು.

೧೯೦೨ನೆಯ ಇಸವಿ ಅಗಸ್ಟು ತಿಂಗಳು ೮ನೆಯ ತಾರೀಖಿನಲ್ಲಿ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರು ರಾಜ್ಯಾಧಿಪತ್ಯವನ್ನು ವಹಿಸಿದರು. ಆ ಮಹೋತ್ಸವಕಾಲದಲ್ಲಿ ವೈಸರಾಯಿಗಳಾದ ಲಾರ್ಡ್ ಕರ್ಜನ್ ಪ್ರಭುಗಳು ಇಲ್ಲಿಗೆ ದಯಮಾಡಿ ಈ ಶುಭಸಮಯದಲ್ಲಿ ನಡೆಯತಕ್ಕ ಕಾರ್ಯಗಳನ್ನು ಸ್ವತಃ ನೆರವೇರಿಸಿದರು. ಈಗ ಶ್ರೀಮನ್ಮಹಾರಾಜರವರು ದಿವಾನರವರ ಮತ್ತು ಕೌನ್ಸಿಲರ್‌ಗಳವರ ಸಹಾಯದಿಂದ ತಾವೇ ರಾಜ್ಯವನ್ನು ಪರಿಪಾಲಿಸುತ್ತಿದ್ದಾರೆ.

ಸಂಪೂರ್ಣಂ.

WD 119- GPB--90,000—12-1-23